# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಅಕ್ಟೋಬರ್, ೨೦೧೫ ಸಂಪಾದಕ : ಡಿ.ಎಸ್.ನಾಗಭೂಷಣ ಸಂಪುಟ: ೫ ಸಂಚಿಕೆ: ೩

**ಚಂದಾ :** ವಾರ್ಷಿಕ: ರೂ. ೧೫೦/-(ವ್ಯಕ್ತಿಗಳಿಗೆ) ರೂ.೨೫೦/-(ಸಂಸ್ಥೆ/ಗ್ರಂಥಾಲಯಗಳಿಗೆ) ಬಿಡಿ ಪ್ರತಿ: ರೂ. ೨೦/- ಪುಟ: ೨೪

**ವಿಳಾಸ:** ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

**ದೂ:** ೦೮೧೮೨-೨೪೮೫೭೪ **ಸಂಚಾರಿ:** ೯೪೪೯೭ ೪೨೨೮೪ ***ಈ ಮೇಲ್:*** dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ದೇಶದಲ್ಲಿ ಎಲ್ಲ ಈಗ ಎಂದಿನಂತೆ ತಣ್ಣಗೆ ನಡೆದಂತೆ ಕಾಣುತ್ತಿದೆ. ಆದರೆ ತೆರೆಮರೆಯಲ್ಲಿ ನಡೆಯುತ್ತಿರುವ ದೊಡ್ಡ ರಾಜಕಾರಣ ಅಷ್ಟಾಗಿ ದೇಶದ ಗಮನ ಸೆಳೆದಂತಿಲ್ಲ. ಅದು ಈಗ ಆಳ್ವಿಕೆಗೆ ಬಂದಿರುವ ರಾಜಕೀಯ ಪಕ್ಷ ದೇಶದ ಚರಿತ್ರೆಯನ್ನು ತನ್ನ ರಾಜಕೀಯ ಅನುಕೂಲಕ್ಕೆ ತಕ್ಕಂತೆ-ಅಂದರೆ ತನ್ನ ರಾಜಕೀಯ ಹಿಡಿತವನ್ನು ಸುಭದ್ರಗೊಳಿಸಿಕೊಳ್ಳಲು-ಮರುನಿರೂಪಿಸಲು ನಡೆಸಿರುವ ವ್ಯವಸ್ಥಿತ;ಆದರೆ ಗುಪ್ತ ಪ್ರಯತ್ನ. ಅದು ದೆಹಲಿಯ ಔರಂಗಜೇಬ್ ರಸ್ತೆಯ ಹೆಸರನ್ನು ಬದಲಾಯಿಸುವ ಅಥವಾ ಇಂದಿರಾ-ರಾಜೀವ್ ಗಾಂಧಿ ಚಿತ್ರಗಳಿರುವ ಅಂಚೆ ಚೀಟಿಗಳನ್ನು ಹಿಂತೆಗೆದುಕೊಳ್ಳುವಂತಹ, ಮೇಲ್ನೋಟಕ್ಕೆ ಸಮರ್ಥನೀಯವಾಗಿಯೇ ಕಾಣುವ ಚಿಲ್ಲರೆ ಪ್ರಯತ್ನಗಳ ಹಿಂದೆ ಮರೆಮಾಚಲಾಗಿರುವ ಮಹತ್ವಾಕಾಂಕ್ಷೆಯ ಕಾರ್ಯಕ್ರಮವಿದು. ಆಡಳಿತ, ಶಿಕ್ಷಣ, ಸಂಸ್ಕೃತಿ, ಸಂಶೋಧನೆ, ಮಾಧ್ಯಮ, ಕೈಗಾರಿಕೋದ್ಯಮ, ಕಾರ್ಮಿಕ ವಲಯ, ಸೈನ್ಯ ಹೀಗೆ ಎಲ್ಲ ಕ್ಷೇತ್ರಗಳ ಸಾಂವಿಧಾನಿಕ ಅಧಿಕಾರ ಸ್ಥಾನಗಳಲ್ಲೂ ತನ್ನ ರಾಜಕೀಯ ಚೇಲಾಗಳನ್ನು ತುಂಬಿ ರಾಷ್ಟ್ರ ಜೀವನದ ಎಲ್ಲ ಚಟುವಟಿಕೆಗಳನ್ನೂ ತನ್ನ ರಾಜಕೀಯ ದೃಷ್ಟಿಕೋನಕ್ಕೆ ಒಗ್ಗಿಸಿಕೊಳ್ಳುವ ಪೂರ್ವನಿಯೋಜಿತ ಪ್ರಯತ್ನವಿದು.

ಇಂತಹ ಪ್ರಯತ್ನಗಳು ಅಧಿಕಾರಕ್ಕೆ ಬಂದ ಎಲ್ಲ ರಾಜಕೀಯ ಪಕ್ಷಗಳೂ ಮಾಡಬಯಸುವಂತಹವೇ. ಅಧಿಕಾರ ರಾಜಕಾರಣವೆಂದರೆ ಅದೇ ತಾನೇ? ಆದರೆ ಸದ್ಯದ ಭಾರತೀಯ ಜನತಾ ಪಕ್ಷದ ಸರ್ಕಾರದ ಇಂತಹ ಪ್ರಯತ್ನ ಆತಂಕ ಹುಟ್ಟಿಸಿರುವುದು, ಈ ಸಾಂವಿಧಾನಿಕ ರಾಜಕೀಯ ಪಕ್ಷದ ಹಿಂದೆ ಇರುವ ಆರೆಸ್ಸೆಸ್ ಎಂಬ ಸಂವಿಧಾನಕ್ಕೆ ಬದ್ಧವಾಗಿಲ್ಲದ; ಸಾಂಸ್ಕೃತಿಕವೆಂದು ಹೇಳಿಕೊಳ್ಳುವ ಸಂಘಟನೆ ಸ್ಫೂರ್ತಿಯಾಗಿ ಕೆಲಸ ಮಾಡುತ್ತಿರುವುದು. ವಸಾಹತು ವಿರೋಧಿ ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ಅದಕ್ಕೆ ಸಮಾನಂತರವಾಗಿ ಹುಟ್ಟಿಕೊಂಡ ಈ ಸಂಘಟನೆ ತನ್ನ ಹುಟ್ಟಿನಲ್ಲೇ ರಾಷ್ಟ್ರೀಯ ಹೋರಾಟ ರೂಪಿಸಿದ ಉದಾರವಾದಿ ಸಾಂಸ್ಕೃತಿಕ ಬಹುತ್ವದ ಮೌಲ್ಯಗಳನ್ನು ವಿರೋಧಿಸಿಕೊಂಡು, ಚರಿತ್ರೆಯ ಪಾಠಗಳನ್ನು ಒಪ್ಪಲು ನಿರಾಕರಿಸಿಕೊಂಡು, ಒಂದು ನಿರ್ದಿಷ್ಟ ಮಾದರಿಯ ಧರ್ಮವನ್ನು ಕುರಿತ ವೀರ ನಿಷ್ಠೆಯನ್ನು ಆಧರಿಸಿದ ಸಂಕುಚಿತ ರಾಷ್ಟ್ರ ಕಲ್ಪನೆಯನ್ನು ಪ್ರತಿಪಾದಿಸುತ್ತಾ ಈವರೆಗೆ ರಾಷ್ಟ್ರಜೀವನದುದ್ದಕ್ಕೂ ಅನುಮಾನಾಸ್ಪದವೆನಿಸುತ್ತಲೇ ಬಂದಿದೆ. ಎರಡು ಬಾರಿ-ಒಮ್ಮೆ ರಾಷ್ಟ್ರಪಿತನ ಹತ್ಯೆಯ ಹಿನ್ನೆಲೆಯಲ್ಲಿ-ಈ ಸಂಘಟನೆಯನ್ನು ಭಾರತ ಸರ್ಕಾರ ನಿಷೇಧಿಸಬೇಕಾಗಿ ಬಂದಿತ್ತು ಎಂಬುದೂ ಇಲ್ಲಿ ಗಮನಾರ್ಹ.

ಜಗತ್ತಿನ ಅತಿ ದೊಡ್ಡ ಸ್ವಯಂಸೇವಾ ಸಂಸ್ಥೆ ಎನಿಸಿರುವ ಈ ಸಂಘಟನೆ ತನ್ನ ನಂಬಿಕೆಗಳಿಗೆ ಅನುಸಾರವಾಗಿ ತನ್ನ ೯೦ ವರ್ಷಗಳ ಬಾಳ್ವೆಯುದ್ದಕ್ಕೂ ತನ್ನ ಕಲ್ಪನೆಯ ರಾಷ್ಟ್ರವನ್ನು ಕಟ್ಟಲು ಅಗತ್ಯವಾದ ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿದೆ. ಜನರ ಬದುಕಿನ ಸರ್ವಕ್ಷೇತ್ರಗಳಲ್ಲೂ ಕ್ರಿಯಾಶೀಲವಾಗಿ ಸ್ವಯಂಸೇವಕರ ಮತ್ತು ವಿವಿಧ ಹಂತಗಳ ನಾಯಕರ ಬೃಹತ್ ಪಡೆಯನ್ನೇ ಇದು ಹೊಂದಿದೆ. ಅಂದರೆ ಇದು, ಜನಸಮುದಾಯದ ಒಂದು ಗಣನೀಯ ಭಾಗದ ವಿಶ್ವಾಸವನ್ನು ಗಳಿಸುತ್ತಲೇ ಬೆಳೆದಿದೆ. ಆದರೆ ಅದರ ತೊಂದರೆ ಎಂದರೆ ಅದರ ಆತ್ಯಂತಿಕ ಗುರಿ ರಾಜಕೀಯವೇ ಆಗಿದ್ದರೂ, ಅದು ಆ ಕ್ಷೇತ್ರವನ್ನು ನೇರವಾಗಿ ಪ್ರವೇಶಿಸದೆ, ಸಾಂಸ್ಕೃತಿಕ ಮುಖವಾಡ ತೊಟ್ಟು ಆ ಗುರಿಯ ಈಡೇರಿಕೆಗಾಗಿ ಅದು ಬೇರೆಯೇ ಅಂಗವನ್ನು ರೂಪಿಸಿ ಕ್ರಿಯಾಶೀಲಗೊಳಿಸಿರುವುದು. ಮುಖ್ಯವಾಗಿ ಆರೆಸ್ಸೆಸ್‌ನ ಈ ದ್ವಿಪಾತ್ರವೇ ಅದನ್ನು ಅನುಮಾನಾಸ್ಪದಗೊಳಿಸಿರುವುದು ಮತ್ತು ಅದು ತನ್ನನ್ನು ತಾನು ಚಾರಿತ್ರ್ಯ ನಿರ್ಮಾಣದ ಸಾಂಸ್ಕೃತಿಕ ಸಂಘಟನೆ ಎಂದು ಕರೆದುಕೊಳ್ಳುವುದನ್ನು ಪ್ರಶ್ನಾರ್ಹಗೊಳಿಸಿರುವುದು. ಚಾರಿತ್ರ್ಯದ ಮೂಲ ಆಧಾರ ನೇರ ನಡೆನುಡಿ ಅಲ್ಲವೆ?

ಆದರೆ ಆರೆಸ್ಸೆಸ್ ಈಗ ಹೆಚ್ಚು ನೇರ ಕಾರ್ಯಾಚರಣೆಗೇ ಸಿದ್ಧವಾದಂತಿದೆ, ಏಕೆಂದರೆ ತನ್ನ ೯೦ ವರ್ಷಗಳ ಕನಸು ನನಸಾಗುವ ಕಾಲ ಸನ್ನಿಹಿತವಾಗಿದೆ ಎಂದು ಅದು ಭಾವಿಸಲು ಸೂಕ್ತವಾದ ರಾಜಕೀಯ ವಾತಾವರಣ ರಾಷ್ಟ್ರದಲ್ಲೀಗ ನಿರ್ಮಾಣವಾಗಿದೆ. ಆರೆಸ್ಸೆಸ್ ಯಾವ ರಾಷ್ಟ್ರ ಕಲ್ಪನೆಯನ್ನು ವಿರೋಧಿಸಿತೋ, ಆ ರಾಷ್ಟ್ರ ಕಲ್ಪನೆಯ ಮುಖ್ಯ ವಾರಸುದಾರ ಪಕ್ಷವಾದ ಕಾಂಗ್ರೆಸ್ ತನ್ನ ಭ್ರಷ್ಟತೆ ಮತ್ತು ದುರಾಡಳಿತದ ಫಲವಾಗಿ ತನ್ನೆಲ್ಲ ರಾಜಕೀಯ ವಿಶ್ವಾಸಾರ್ಹತೆಯನ್ನು ಕಳೆದುಕೊಂಡು ಮೂಲೆ ಸೇರಿದೆ. ಇದರ ಪರಿಣಾಮವಾಗಿ ಆರೆಸ್ಸೆಸ್‌ನ ೯೦ ವರ್ಷಗಳ ಸತತ ಶ್ರಮ, ಶ್ರದ್ಧೆ ಮತ್ತು ಸಹನೆಗಳ ಸಾಕಾರ ರೂಪವಾಗಿ ಭಾರತೀಯ ಜನತಾ ಪಕ್ಷವೆಂಬ ಅದರ ರಾಜಕೀಯ ಮುಖವಾಡ ಭಾರತದ ರಾಜಕೀಯ ಅಧಿಕಾರದ ಚುಕ್ಕಾಣಿ ಹಿಡಿದಿದೆ. ನರೇಂದ್ರ ಮೋದಿ ಎಂಬ ಅದರ ನಿಷ್ಠಾವಂತ ಸ್ವಯಂಸೇವಕನೊಬ್ಬ ಇಂದು ರಾಷ್ಟ್ರದ ಪ್ರಧಾನಿಯಾಗಿದ್ದಾರೆ. ಇನ್ನೇಕೆ ತಡ? ಸರ್ಕಾರ ಒಂದು ವರ್ಷದ ಅಧಿಕಾರವಧಿ ಮುಗಿಸುತ್ತಿದ್ದಂತೆಯೇ ಅದು ಸರ್ಕಾರದ ಸಾಧನೆಯ ಪರಾಮರ್ಶೆಗೆ ಮುಂದಾಗಿದೆ. ಪ್ರಧಾನಿಯೂ ಸೇರಿದಂತೆ ಇಡೀ ಸಚಿವ ಸಂಪುಟ ಆರೆಸ್ಸೆಸ್ ನಾಯಕರ ಸಭೆ ಮುಂದೆ ಹಾಜರಾಗಿ ಅಗತ್ಯ ಮಾಹಿತಿ ಒದಗಿಸಿದೆ!

ಆರೆಸ್ಸೆಸ್ ಮತ್ತು ಬಿಜೆಪಿ ವಕ್ತಾರರಿಬ್ಬರೂ ಸಹಜವಾಗಿಯೇ ಇದನ್ನು ಸಮರ್ಥಿಸಿಕೊಂಡಿದ್ದಾರೆ. ಆರೆಸ್ಸೆಸ್‌ನ ವಕ್ತಾರರು ಇದನ್ನು ಕೈಗಾರಿಕೋದ್ಯಮಿಗಳೊಂದಿಗೆ ಯಾವುದೇ ಸರ್ಕಾರ ನಡೆಸುವ ಸಭೆಗೆ ಹೋಲಿಸಿದ್ದಾರೆ. ಆದರೆ ಅದು ಇಷ್ಟು ಸರಳ ಸಂಗತಿಯಲ್ಲ. ಏಕೆಂದರೆ, ಪ್ರಜೆಗಳ ಯಾವುದೇ ಸಾಂವಿಧಾನಿಕ ರೀತಿಯ ಒಪ್ಪಿಗೆಯೇ ಇಲ್ಲದೆ, ನಮ್ಮ ರಾಷ್ಟ್ರಜೀವನದ ಸ್ವರೂಪ-ಗುರಿಗಳನ್ನೇ ನಿರ್ಣಾಯಕವಾಗಿ ಬದಲಿಸಬಲ್ಲ-ಸದ್ದಿಲ್ಲದೆ ಒಳಗಿಂದಲೇ ಬುಡಮೇಲುಗೊಳಿಸುವ-ಪ್ರಯತ್ನದ ನಾಂದಿ ಘಟನೆಯನ್ನಾಗಿಯೂ ಇದನ್ನು ನೋಡಲು ಕಾರಣಗಳಿವೆ. ಒಂದು ಕಾರಣವೆಂದರೆ, ಈ ಸಭೆಯ ಕಾರ್ಯಕಲಾಪಗಳ ವರದಿಯನ್ನು ಸರ್ಕಾರದ ವಕ್ತಾರರು ನೀಡದೆ, ಇದನ್ನು ಖಾಸಗಿ ಗುಪ್ತ ಸಭೆಯಂತೆ ನಡೆಸಿರುವುದು. ಇದಕ್ಕಿಂತ ಬಹುಮುಖ್ಯ ಕಾರಣವೆಂದರೆ ಸಂವಿಧಾನಬದ್ಧವಾಗಿ ಆಯ್ಕೆಯಾಗಿರುವ ಸರ್ಕಾರವೊಂದು(ಪಕ್ಷವಲ್ಲ) ಸಂವಿಧಾನಕ್ಕೆ ಯಾವುದೇ ರೀತಿಯಲ್ಲೂ ಬದ್ಧವಿಲ್ಲದ;ವಾಸ್ತವವಾಗಿ ಸಾಂವಿಧಾನಿಕ ಮೌಲ್ಯಗಳನ್ನು ಬುಡಮೇಲು ಮಾಡಲು ಬದ್ಧವಾದ ಸಂಘಟನೆಯೊಂದರೊಂದಿಗೆ ಸಭೆ ನಡೆಸಿರುವುದು. ಇದು ನಂಬಿದ ಜನತೆಗೆ ಬಗೆಯಲಾಗಿರುವ ದ್ರೋಹವಲ್ಲವೆ?

ಇಂತಹ ಬಹು ಮುಖ್ಯ ಸಂದರ್ಭದಲ್ಲಿ ಈ ಬಹುಮುಖ್ಯ ಪ್ರಶ್ನೆಯನ್ನು ಕೇಳುವವರಾದರೂ ಯಾರು? ದೇಶವನ್ನು ಈ ಸ್ಥಿತಿಗೆ ತಳ್ಳಿದ ಕಾಂಗ್ರೆಸ್ ಪಕ್ಷ ಎಲ್ಲಿದೆ? ಏನು ಮಾಡುತ್ತಿದೆ? ಅದು ಬೆಂಗಳೂರು ಮಹಾನಗರ ಪಾಲಿಕೆಯ ಚುನಾವಣೆಗಳಲ್ಲಿ ಹೀನಾಯವಾಗಿ ಸೋತ ಮೇಲೂ ಅಧಿಕಾರ ಹಿಡಿಯುವ ಕ್ಷುದ್ರ ಮತ್ತು ನಿರ್ಲಜ್ಜ ರಾಜಕಾರಣ ಮಾಡಿ ಹೇಗೋ ಬದುಕುಳಿದುಕೊಳ್ಳುವ ಕರುಣಾಜನಕ ಸ್ಥಿತಿಯಲ್ಲಿದೆ!

ನಮ್ಮ ದುರದೃಷ್ಟವೆಂದರೆ, ಸದ್ಯಕ್ಕೆ ಕಾಣುತ್ತಿರುವ ಒಂದೇ ಆಶಾಕಿರಣ: ಬಿಹಾರ ಚುನಾವಣೆಗಳು ಎನ್ನುವುದು! ಅದನ್ನೂ ಕಾದು ನೋಡೋಣ!!

**-ಸಂಪಾದಕ**

# ಡಿ. ದೇವರಾಜ ಅರಸು: ಜನ್ಮಶತಮಾನೋತ್ಸವ ನೆನಪು

–ಎನ್.ಎಸ್. ಶಂಕರ್



**ಈ** ಘಟನೆ ನಡೆದಿದ್ದು ಅರಸು ತೀರಿಕೊಂಡ ಮೇಲೆ.

ಅರಸರ ಶ್ರೀಮತಿಯವರನ್ನು ಒಮ್ಮೆ ಅನಾರೋಗ್ಯ ನಿಮಿತ್ತ ಅಡ್ಮಿಟ್ ಮಾಡಿಸಿ ಅಲ್ಲಿಂದ ಡಿಸ್‌ಚಾರ್ಜ್ ಮಾಡಿಸುವಾಗ ನರ್ಸಿಂಗ್ ಹೋಂಗೆ ಒಟ್ಟು ಹನ್ನೆರಡು ಸಾವಿರ ರೂಪಾಯಿ ಬಾಕಿ ಕೊಡಬೇಕಿತ್ತಂತೆ. ಆದರೆ ಅರಸು ಕುಟುಂಬದಲ್ಲಿ ಆ ಕ್ಷಣ ಅಷ್ಟೂ ಹಣವಿರಲಿಲ್ಲ! ಕೊನೆಗೆ ಖೋಡೆಯವರು ದುಡ್ಡು ಕಟ್ಟಿ ಅವರನ್ನು ಹೊರಗೆ ಬಿಡಿಸಿಕೊಂಡು ಬಂದರೆಂದು ಓದಿದ್ದೆ....

ದೇವರಾಜ ಅರಸು ಅಂದ ಕೂಡಲೇ ಸಾಮೂಹಿಕ ಸ್ಮರಣೆಯಲ್ಲಿ ಮೂಡುವ ಚಿತ್ರವೇ 'ಅರಸು ಭ್ರಷ್ಟಾಚಾರದ ಗಂಗೋತ್ರಿ' ಎಂಬುದು. ಈ 'ಭ್ರಷ್ಟಾಚಾರದ ಗಂಗೋತ್ರಿ' ಹಾಗಾದರೆ ಅಷ್ಟು ಕಾಲ ತಿಂದು ಕೂಡಿಟ್ಟಿರಬಹುದಾದ ಅಕ್ರಮ ಸಂಪತ್ತೆಲ್ಲ ಏನಾಯಿತು? ಅಷ್ಟು ವರ್ಷಗಳ ಸತತ ಅಧಿಕಾರದ ನಂತರವೂ, ಅವರ ಶ್ರೀಮತಿಯವರಿಗಾಗಿ ಕೊಡಲು ಬುಜುಬಿ ಹನ್ನೆರಡು ಸಾವಿರವೂ ಅವರ ಕುಟುಂಬದಲ್ಲಿ ಇರಲಿಲ್ಲವೇ?...

ಅರಸು ಲಂಚಗುಳಿತನವನ್ನು ತಮ್ಮ ಆಡಳಿತದ ಅಧಿಕೃತ ಅಜೆಂಡಾ ಮಾಡಿಕೊಂಡಿದ್ದರು; ಭ್ರಷ್ಟಾಚಾರಕ್ಕೆ ಸಾಂಸ್ಥಿಕ ರೂಪ ಕೊಟ್ಟರು ಅನ್ನುವುದೇನೂ ಸುಳ್ಳಲ್ಲ. ಸರ್ಕಾರದ ಪ್ರತಿ ನೇಮಕಾತಿ, ವರ್ಗ, ಮುಂತಾದ ಎಲ್ಲವಕ್ಕೂ ಅವರ ಕಾಲದಲ್ಲಿ ನಿರ್ದಿಷ್ಟ ಮೊತ್ತದ ಲಂಚ ನಿಗದಿಯಾಗಿದ್ದೂ ಹೌದು. ಅಷ್ಟೇಕೆ, ತಾವು ಭ್ರಷ್ಟ ಎನ್ನುವುದನ್ನು ಅರಸು ಎಂದೂ ಅಲ್ಲಗಳೆಯಲೂ ಇಲ್ಲ. ಈ ಬಗ್ಗೆಯೇ ಅವರ ಸಮೀಪ ಸಂಬಂಧಿ– ಖ್ಯಾತ ಬರಹಗಾರ ಚದುರಂಗರು ಒಮ್ಮೆ ಅರಸರನ್ನು ಪ್ರಶ್ನಿಸಿದಾಗ– 'ಸರಿಯಪ್ಪ, ಭ್ರಷ್ಟಾಚಾರವನ್ನು ನಾನೇನೂ ಕಂಡು ಹಿಡಿಯಲಿಲ್ಲವಲ್ಲ, ಅದು ಮೊದಲೂ ಇತ್ತಲ್ಲ?' ಎಂದು ಸಮರ್ಥಿಸಿಕೊಂಡಿದ್ದರು!

ಅಷ್ಟಾದರೂ, ನಾವು ಇಂದಿನ ರಾಜಕಾರಣಿ– ಅಧಿಕಾರಿಗಳ ಬ್ರಹ್ಮಾಂಡ ಭ್ರಷ್ಟತೆ, ಲಕ್ಷಾಂತರ ಕೋಟಿಗಳ ಹಗರಣಗಳು– ಇವನ್ನೆಲ್ಲ ನೋಡುತ್ತಾ ಶಾಪ ಹಾಕುವಾಗ ಅದೇ ಉಸಿರಿನಲ್ಲಿ 'ಭ್ರಷ್ಟ ಅರಸು' ವಿರುದ್ಧವೂ ಮೂಗು ಮುರಿಯುವ ನೀತಿ ನಿಷ್ಠುರ ನಿಲುವು ತಳೆಯಬಹುದೇ ಎಂಬ ಪ್ರಶ್ನೆ ಏಳುತ್ತದೆ. ಅರಸು ಮತ್ತು ಭ್ರಷ್ಟಾಚಾರದ ಚರ್ಚೆಯಲ್ಲಿ ಸುಲಭ ತೀರ್ಮಾನಗಳನ್ನು ಮೀರಿದ ಸಂಕೀರ್ಣ ವಿಶ್ಲೇಷಣೆ ಬೇಕಲ್ಲವೇ ಅನಿಸುತ್ತದೆ. ಅರಸು ಲಂಚಕೋರರಾಗಿದ್ದು ತಮ್ಮ ಸ್ವಂತದ ಸುಖಭೋಗಕ್ಕಂತೂ ಅಲ್ಲ. ಒಂದು ವಿಪರ್ಯಾಸದ ಉದಾಹರಣೆ ನೋಡುವುದಾದರೆ, ಅರಸು ಮುಖ್ಯಮಂತ್ರಿ ಪದವಿಗೇರುವ ಮುನ್ನ ಅವರ ಕುಟುಂಬಕ್ಕೆ ಸೇರಿದ್ದ ಜಮೀನಿನ ವಿಸ್ತೀರ್ಣ, ಅವರು ಅಧಿಕಾರ ಕಳೆದುಕೊಳ್ಳುವ ವೇಳೆಗೆ, ವಿಸ್ತಾರಗೊಳ್ಳುವ ಬದಲು ಇನ್ನೂ ಕಮ್ಮಿಯಾಗಿತ್ತು....! ಹೀಗೂ ಉಂಟೇ?...!

ನಮ್ಮ ನಡುವಣ ಅಪರೂಪದ ಪ್ರಾಮಾಣಿಕತೆಯ ಐಎಎಸ್ ಅಧಿಕಾರಿ ಎಚ್. ಶಶಿಧರ್ (ಈಗ ನಿವೃತ್ತರು) ಈ ವಿಚಿತ್ರವನ್ನು ಒಂದು ಪ್ರಸಂಗದ ಮೂಲಕ ವಿವರಿಸುತ್ತಾರೆ. ಅರಸು ಭೂಸುಧಾರಣೆ ಕಾಯ್ದೆ ಜಾರಿಗೆ ತಂದ ಹೊಸದು. ಆಗ ಶಶಿಧರ್ ಹುಣಸೂರಿನಲ್ಲಿ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್. ಅವರು ತುಸು ಅಳುಕುತ್ತಲೇ ಅರಸರನ್ನು ಒಮ್ಮೆ ಕಂಡು "ಸಾರ್, ಈ ಹೊಸ ಕಾನೂನಿನ ಪ್ರಕಾರ ನಿಮ್ಮ ಜಮೀನೂ ನಿಗದಿತ ಪ್ರಮಾಣಕ್ಕಿಂತ ಜಾಸ್ತಿಯಿದೆ; ಆ ಹೆಚ್ಚುವರಿ ಭಾಗವನ್ನು ಭೂರಹಿತರಿಗೆ ಹಂಚಬೇಕಾಗುತ್ತದೆ" ಎಂದರು.

ಅದಕ್ಕೆ ಅರಸು "ಗೊತ್ರೀ, ನಿಮಗೇ ಬಿಟ್ರೆ ಯಾರ್‍ಯಾರಿಗೋ ಕೊಟ್ಟುಬಿಡ್ತೀರಾ. ಯಾರ್‍ಯಾರಿಗೆ ಹಂಚಬೇಕು ಅಂತ ನಾನೇ ಹೇಳ್ತೀನಿ, ಕೊಡಿ ಇಲ್ಲಿ" ಎಂದವರೇ, ಫೈಲ್ ಮೇಲೆ ಫಲಾನುಭವಿಗಳ ಪಟ್ಟಿ ತಾವೇ ಬರೆದು ತಮ್ಮ ಜಮೀನು ಹಂಚಿಕೊಟ್ಟರು...

ಅರಸು ಹಟ ಹಿಡಿದು ಜಾರಿಗೆ ತಂದ ಭೂಸುಧಾರಣೆ ಬಗ್ಗೆ ಈಗ ಹೊಸದಾಗಿ ಹೇಳುವುದೇನೂ ಇರಲಾರದು. ಆದರೆ ಅದು ಮೇಲು ಮೇಲಿನ ಬೌದ್ಧಿಕ ಕಾಳಜಿ ಮಾತ್ರವಾಗಿರದೆ, ಅವರ ಒಳಗಿನಿಂದ ಹುಟ್ಟಿದ ತುಡಿತವಾಗಿತ್ತು ಎಂಬುದಕ್ಕೆ ಅವರ ಸ್ವಂತ ಜಮೀನಿನ ಈ ಉದಾಹರಣೆ ಸಾಕಾಗಬಹುದು.

ಹಾಗೆಯೇ ಅವರಿಗೆ ಸಂದ 'ಹಿಂದುಳಿದ ವರ್ಗಗಳ ಹರಿಕಾರ' ಎಂಬ ಬಿರುದು.

ಯಾರೂ ಆ ಬಗ್ಗೆ ತಲೆ ಕೆಡಿಸಿಕೊಳ್ಳದಿದ್ದ ಸಮಯದಲ್ಲಿ, ಸ್ವಂತ ಮುತುವರ್ಜಿಯಿಂದ ಹಿಂದುಳಿದ ವರ್ಗಗಳ ವೈಜ್ಞಾನಿಕ ಸಮೀಕ್ಷೆ ನಡೆಸಿ, ಹಾವನೂರ್ ವರದಿ ಪಡೆದು, ಆ ಮೂಲಕ ಉದ್ಯೋಗ, ಶಿಕ್ಷಣಗಳಲ್ಲಿ ಕ್ರಮಬದ್ಧ ಮೀಸಲಾತಿ ತಂದ ಅವರ "ಸರ್ಕಾರಿ ಪ್ರಾಯೋಜಿತ ಸಾಮಾಜಿಕ ನ್ಯಾಯ"ದ ಬಗ್ಗೆ ಎಲ್ಲರಿಗೂ ಗೊತ್ತು. ಆ ವಿಷಯದಲ್ಲಿ ಈವರೆಗೆ ಸಾಕಷ್ಟು ಚರ್ಚೆಗಳಾಗಿದ್ದರೂ, ಅರಸು ತಮ್ಮ 'ಆಡಳಿತಾತ್ಮಕ ಕ್ರಾಂತಿ'ಯ ಹಾದಿಯಲ್ಲಿ ಪಾಚಿಗಟ್ಟಿಹೋದ ನಮ್ಮ ಗೊಡ್ಡು ಸಮಾಜದಿಂದ ಎದುರಿಸಿದ ಅಡ್ಡಿ ಆತಂಕಗಳನ್ನು ಯಾರೂ ವಿವರವಾಗಿ ದಾಖಲಿಸಿಲ್ಲ. ಅದು ಬಿಡಿ.

ಅಂತೂ ಯಾವ ಜನಾಂದೋಲನದ ಒತ್ತಾಯವೂ ಇಲ್ಲದೆ ಸರ್ಕಾರಿ ಕಾರ್ಯಕ್ರಮವಾಗಿ ಮೂಡಿದ ಈ ಮೀಸಲಾತಿಯಿಂದ ಹಿಂದುಳಿದ ವರ್ಗಗಳಿಗೆ ನಿಜಕ್ಕೂ ದಕ್ಕಿದ್ದೇನು, ಎಷ್ಟು ಎಂಬ ಗಂಭೀರ ಪ್ರಶ್ನೆಗಳಂತೂ ಎದ್ದಿವೆ; ಸಾಮಾಜಿಕ ನ್ಯಾಯದ ಪ್ರಶ್ನೆ ಬರಬರುತ್ತ ಜಾತಿ ನ್ಯಾಯದ ಪಂಚಾಯ್ತಿಗೆ ಸಂಕುಚಿತಗೊಂಡಿತಲ್ಲವೇ, ಅದರಲ್ಲಿ ಅರಸು ರಾಜಕಾರಣದ ಪಾಲೆಷ್ಟು ಎಂಬ ಜಿಜ್ಞಾಸೆಯೂ ನಡೆದಿದೆ. ಇಲ್ಲಿ ನನಗೆ ಆ ವಿವಾದಗಳ ಚರ್ಚೆಯಲ್ಲಿ ಆಸಕ್ತಿಯಿಲ್ಲ. ಅರಸರ ರಾಜಕಾರಣದ ದೊಡ್ಡ ಪ್ರಶ್ನೆಗಳನ್ನೆತ್ತಿಕೊಂಡು ಗಂಭೀರ ವಿಶ್ಲೇಷಣೆಗೆ ಇಳಿಯುವ ಉದ್ದೇಶವೂ ನನಗಿಲ್ಲ. ಆದರೆ ಇಲ್ಲಿ ಹೇಳಬೇಕಾದ್ದು– ಮೀಸಲಾತಿ ಎಂದರೆ ಕೇವಲ ಸೌಲಭ್ಯಗಳ, ಸಂಪನ್ಮೂಲಗಳ ಹಂಚಿಕೆ ಮಾತ್ರ ಎಂದು ಅರ್ಥೈಸಿ ವಾದ ಮಾಡುವವರಿಗೆ, ವಿಭಿನ್ನ ಅನುಭವ ಲೋಕಗಳು ಮೇಳೈಸಿದಾಗ ಇಡೀ ಸಮಾಜ ಮೈ ಮುರಿದೇಳುವ ರೋಮಾಂಚನದ ಕಲ್ಪನೆ ಇರುವುದಿಲ್ಲ. ಹೊಸ ಘರ್ಷಣೆಗಳು ಸೃಷ್ಟಿಸಬಲ್ಲ ಕಂಪನಗಳನ್ನು ಗ್ರಹಿಸುವ ಸ್ಪರ್ಶ ಜ್ಞಾನ ಇರುವುದಿಲ್ಲ. ಒಂದೇ ಒಂದು ಸರಳ ಉದಾಹರಣೆ ನೀಡುವುದಾದರೆ, ಮೀಸಲಾತಿ ಎಂಬುದೊಂದು ಇರದಿದ್ದರೆ ಒಬ್ಬ ದೇವನೂರ ಮಹಾದೇವ ಜನಿಸುತ್ತಿರಲಿಲ್ಲ ಎಂಬುದು ನಮ್ಮ ಕಣ್ಣು ತೆರೆಸಬೇಕು. ಜೊತೆಗೆ ಸ್ವಾತಂತ್ರ್ಯಪೂರ್ವದಿಂದಲೂ ಎಲ್ಲ ಜನವರ್ಗಗಳನ್ನೂ ಒಳಗೊಳ್ಳುವ ಪರಂಪರೆಯಿದ್ದ ಕಾಂಗ್ರೆಸ್ ಪಕ್ಷದಲ್ಲಿ ಕೂಡ, ಅರಸರ ಪ್ರಯೋಗಕ್ಕೆ ಮುಂಚೆ ಧರಂಸಿಂಗ್, ಮೊಯ್ಲಿ, ಬಂಗಾರಪ್ಪ ಮುಂತಾದ ಹಿಂದುಳಿದ ವರ್ಗಗಳ ನಾಯಕರು ಮುಖ್ಯಮಂತ್ರಿ ಪಟ್ಟಕ್ಕೇರಲು ಆಗಿರಲಿಲ್ಲ ಎಂಬುದೂ ನಮ್ಮ ಗಮನದಲ್ಲಿರಬೇಕು.

ಅದಿರಲಿ. ಆದರೆ ಭೂಸುಧಾರಣೆಯ ವಿಷಯದಲ್ಲಿ ಕೇಳಿಕೊಂಡಂತೆಯೇ ಇಲ್ಲಿಯೂ ಅರಸು ಅವರಿಗೆ ಇದು ಕೇವಲ ಸರ್ಕಾರಿ ಕಾರ್ಯಕ್ರಮವಾಗಿತ್ತೋ, ಅಥವಾ ಅವರ ಆಂತರ್ಯದ ವೈಯಕ್ತಿಕ ಕಾಳಜಿಯಾಗಿತ್ತೋ ಎಂಬ ಪ್ರಶ್ನೆ ಹಾಕಿಕೊಳ್ಳಬಹುದು. ಮತ್ತು ಅದಕ್ಕೆ ಉತ್ತರವಾಗಿ ನಿವೇಶನಗಳ ಹಂಚಿಕೆ ಸಂದರ್ಭದಲ್ಲಿ ಅರಸು ಆಗಿನ ಬಿಡಿಎ ಅಧ್ಯಕ್ಷ ಬಿ.ಟಿ. ಸೋಮಣ್ಣನವರಿಗೆ ಹೇಳಿದ್ದು ನೆನಪಾಗುತ್ತಿದೆ.

ಬಿಡಿಎ ಹೊಸದಾಗಿ ನಿರ್ಮಿಸಿದ ಬಡಾವಣೆಗಳಲ್ಲಿ ನಿವೇಶನಗಳನ್ನು ಹಂಚುವಾಗ ಒಂದೇ ಜಾತಿಯವರು ಒಂದೇ ಕಡೆ ಗುಂಪುಗೂಡದಂತೆ, ಎಲ್ಲ ಜಾತಿ ಜನವರ್ಗಗಳ ಜನರನ್ನು ಕಲೆಸಿ ಹಾಕಬೇಕೆಂದು ಅರಸು ಸೂಚಿಸಿದ್ದರು. ಇದೇನು ಅಲ್ಪ ಪರಿಣಾಮದ ಸಣ್ಣ ಕ್ರಮವೇ? ಮತ್ತು ಇಂಥ ಕ್ರಮಗಳು ಸರ್ಕಾರಿ ಆದೇಶದ ರೂಪ ಪಡೆದೇನೂ ಬರುವುದಿಲ್ಲ. ಅಲ್ಲವೇ? ಅರಸರನ್ನು ಹತ್ತಿರದಿಂದ ಬಲ್ಲವರು ಇಂಥ ದೂರಗಾಮಿ ಮಹತ್ವದ ನೂರು ನಿದರ್ಶನಗಳನ್ನು ಕೊಟ್ಟಾರು....

ಅರಸು ಅಧಿಕಾರ ವಹಿಸಿಕೊಂಡಾಗ ನಮ್ಮ ರಾಜ್ಯ ದೇಶದ ಅಭಿವೃದ್ಧಿ ನಕಾಶೆಯಲ್ಲಿ ಒಂಬತ್ತನೇ ಸ್ಥಾನದಲ್ಲಿತ್ತು. ಒಂದೇ ವರ್ಷದಲ್ಲಿ ಅರಸು ರಾಜ್ಯವನ್ನು ಮೊದಲ ಸ್ಥಾನಕ್ಕೆ ತಂದು ನಿಲ್ಲಿಸಿದರು. ಅವರ ಪ್ರಗತಿಪರ ಆಡಳಿತದ

(೭ನೇ ಪುಟಕ್ಕೆ

# ನಮ್ಮ ಸಮಾಜವಾದಿಗಳು

# ಸುಸಂಸ್ಕೃತ ಸಜ್ಜನ ರಾಜಕಾರಣಿ ಎಂ.ಪಿ. ಪ್ರಕಾಶ್



**ಎಂ**.ಪಿ. ಪ್ರಕಾಶ್ ಈ ನಾಡು ಕಂಡ ಸಜ್ಜನ ಸುಸಂಸ್ಕೃತ ರಾಜಕಾರಣಿ. ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಲೋಹಿಯಾ ಜೆ.ಪಿ. ಅವರ ಚಿಂತನೆಗಳಿಂದ ಪ್ರಭಾವಿತರಾಗಿದ್ದವರು. ರಾಜಕೀಯದ ಅಧಿಕಾರ, ಮುಖ್ಯಮಂತ್ರಿ ಹುದ್ದೆ ಇವೆಲ್ಲವುಗಳಿಗಿಂತ 'ಮನಸ್ಸಾಕ್ಷಿ' ಅವರಿಗೆ ಮುಖ್ಯವಾಗಿತ್ತು. ಹೀಗಾಗಿಯೇ ಅವರು ಮುಖ್ಯಮಂತ್ರಿಯಾಗುವ ಸಂದರ್ಭದಲ್ಲಿ ಎಲ್ಲ ಅರ್ಹತೆಗಳು ಇದ್ದಾಗಲೂ ಅವರು ಮುಖ್ಯಮಂತ್ರಿಯಾಗುವ ಪ್ರಯತ್ನದಿಂದ ದೂರವೇ ಉಳಿದದವರು.

ಅಪ್ಪಟ ಗಾಂಧಿವಾದಿ, ಸ್ವಾತಂತ್ರ್ಯ ಹೋರಾಟ ಹಾಗೂ ಏಕೀಕರಣದ ಹೋರಾಟಗಾರರಾದ ಇವರ ತಂದೆ ಮ.ಮ. ಪಾಟೀಲರು. ನಾಟಕಕಾರ, ಸಂಗೀತಗಾರರಾಗಿದ್ದವರು ದೊಡ್ಡಪ್ಪ ಕೊಟ್ರಗೌಡ್ರು. ಈ ಕುಟುಂಬದ ಪರಿಸರದಲ್ಲಿ ೧೧.೦೭.೧೯೪೦ ರಂದು ಹೊಸಪೇಟೆ ಬಳಿಯ ವಲ್ಲಭಾಪುರ ಗ್ರಾಮದಲ್ಲಿ ಎಂ.ಪಿ. ಪ್ರಕಾಶ್‌ರು ಜನಿಸಿದರು. ಬಾಲ್ಯದಲ್ಲೇ ತಂದೆಯವರ ಹೋರಾಟಗಳಲ್ಲಿ ಪಾಲ್ಗೊಂಡರು. ಏಕೀಕರಣದ ಸಂದರ್ಭದಲ್ಲಿ ರಾಜ್ಯ ಪುನರ್‌ವಿಂಗಡಣೆಗೆ ಸಂಬಂಧಿಸಿದ ಮಿಶ್ರಾ ವರದಿಯನ್ನು ಜಾರಿಗೊಳಿಸುವಂತೆ ೧೯೫೩ರಲ್ಲಿ 'ರೈಲು ತಡೆ' ಚಳವಳಿಯಲ್ಲಿ ತಂದೆಯವರೊಂದಿಗೆ ಭಾಗವಹಿಸಿ ಬಂಧನಕ್ಕೆ ಒಳಗಾಗಿದ್ದರು. ನಂತರ ಎಂ.ಎ. ಅಭ್ಯಾಸಕ್ಕಾಗಿ ಮುಂಬೈಗೆ ಹೋದಾಗ, ಶರ್ಮಿಳಾ ನಾಗರೆಡ್ಡಿ, ಕೃಷ್ಣ ಮೆನನ್, ಆಚಾರ್ಯ ಕೃಪಲಾನಿ, ರಜಿನಿ ಪಟೇಲ್ ಮೊದಲಾದವರ ಒಡನಾಟದಲ್ಲಿದ್ದು, ಅಲ್ಲಿ ನಡೆಯುತ್ತಿದ್ದ ಸಾಹಿತ್ಯಿಕ ಚರ್ಚೆ, ಗೋಷ್ಠಿ, ಎಡಪಂಥೀಯ ಸಿದ್ಧಾಂತಗಳ ಚಿಂತನೆಗಳಿಂದ ಆಕರ್ಷಿತರಾದವರು. ರಾಮಮನೋಹರ ಲೋಹಿಯಾ, ಜಯಪ್ರಕಾಶ್ ನಾರಾಯಣ, ಮಧು ದಂಡವತೆ, ಜಾರ್ಜ್ ಫರ್ನಾಂಡಿಸ್ ಮೊದಲಾದ ಸಮಾಜವಾದಿ ನಾಯಕರ ಪ್ರಭಾವಕ್ಕೆ ಒಳಗಾಗಿ, ಸ್ನಾತಕೋತ್ತರ ಪದವಿ ಪಡೆಯುತ್ತಲೇ ಅವರು ಸಮಾಜವಾದಿ ಚಿಂತನೆಯ ಯುವ ನಾಯಕನಾಗಿ ರೂಪಗೊಂಡರು.

ನಂತರ ವಕೀಲರಾಗಿ ಬಳ್ಳಾರಿ ಜಿಲ್ಲೆಯ ಹಡಗಲಿಯಲ್ಲಿ ವಕೀಲವೃತ್ತಿ ಕಾರ್ಯಾರಂಭ ಮಾಡಿದಾಗ, ಲಂಕೇಶ್, ಅನಂತಮೂರ್ತಿ, ಗೋಪಾಲಕೃಷ್ಣ ಅಡಿಗ, ಶಿವರಾಮ ಕಾರಂತ, ತೇಜಸ್ವಿ, ಗೋಪಾಲಗೌಡ, ಜೆ.ಹೆಚ್ ಪಟೇಲ್ ಇವರ ಒಡನಾಟದಲ್ಲಿ ಮಾಗಿದರು. ಸಮಾಜವಾದಿಯಾಗಿ ಮತ್ತಷ್ಟು ಗಟ್ಟಿಗೊಂಡರು. ೧೯೭೩ರಲ್ಲಿ ಬಳ್ಳಾರಿ ಜಿಲ್ಲಾ ಸಮಾಜವಾದಿ ಪಕ್ಷದ ಅಧ್ಯಕ್ಷರಾಗಿ ರಾಜ್ಯ ಮಟ್ಟದ ಸಮಾಜವಾದಿ ಕಾರ್ಯಕರ್ತರ ಸಮಾವೇಶವನ್ನು ಸಂಘಟಿಸಿದ್ದರು. ಇದು ಪ್ರಕಾಶ್ ಅವರ ರಾಜಕೀಯ ಜೀವನಕ್ಕೆ ಮಹತ್ವದ ತಿರುವು ನೀಡಿತೆಂದೇ ಹೇಳಬೇಕು. ಪ್ರಕಾಶ್‌ರ ನಾಯಕತ್ವದಿಂದಾಗಿಯೇ ಹಡಗಲಿಯ ಸಮಾವೇಶಕ್ಕೆ ಪ್ರಗತಿಪರ ಚಿಂತಕರು, ಲೇಖಕರು, ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪಾಲ್ಗೊಂಡಿದ್ದರು. ಹಡಗಲಿಯ ಈ ಸಮಾವೇಶದಲ್ಲಿ ನಡೆದ ಚರ್ಚೆ, ತೀರ್ಮಾನಗಳಿಂದ ಸಮಾಜವಾದಿ ಪಕ್ಷ ಒಂದು ಹೊಸ ಹುರುಪನ್ನು ಕಂಡುಕೊಂಡಿತು ಹಾಗೂ ಹೆಚ್ಚು ಹೆಚ್ಚು ಜನಪರ ಕಾರ್ಯಗಳನ್ನು ರೂಪಿಸಿ ಹೋರಾಟಕ್ಕೆ ಅಣಿಗೊಂಡಿತು.

ಈ ಹಿನ್ನೆಲೆಯಲ್ಲೇ ಸಮಾಜವಾದಿ ಪಕ್ಷ ಸಂಡೂರು ರಾಜಮನೆತನದ ವಿರುದ್ಧ ಗೇಣಿದಾರರ ಪರವಾಗಿ ಹೋರಾಟ ಮಾಡಿತು. 'ಕಾಗೋಡು' ಸತ್ಯಾಗ್ರಹದ ನಂತರ 'ಸಂಡೂರು' ಸತ್ಯಾಗ್ರಹವು ಸಮಾಜವಾದಿ ಪಕ್ಷ ಸಂಘಟಿಸಿದ ಅತಿ ದೊಡ್ಡ ಭೂಹೋರಾಟವಾಗಿತ್ತು ಮತ್ತು ಇದರಲ್ಲಿ ಸ್ಥಳೀಯ ನಾಯಕರಾಗಿ ಎಂ.ಪಿ. ಪ್ರಕಾಶರ ಪಾತ್ರ ಬಹುದೊಡ್ಡದಿತ್ತು. ಜಾರ್ಜ್ ಫರ್ನಾಂಡಿಸ್ ಸೇರಿದಂತೆ ಹಲವು ರಾಷ್ಟ್ರನಾಯಕರು ಪಾಲ್ಗೊಂಡಿದ್ದ ೪೬ ದಿನಗಳ ಈ ಹೋರಾಟ ಯಶಸ್ವಿಯಾಗಿ, ಸರ್ಕಾರ ೨೦ ಸಾವಿರಕ್ಕೂ ಹೆಚ್ಚು ಎಕರೆ ಇನಾಂ ಭೂಮಿಯನ್ನು ರೈತರಿಗೆ ಹಂಚಿ ಕೊಟ್ಟಿತು.

೧೯೭೫ರಲ್ಲಿ ಎಂ.ಪಿ. ಪ್ರಕಾಶ್‌ರು ತುರ್ತುಪರಿಸ್ಥಿತಿಯನ್ನು ವಿರೋಧಿಸಿ ಹಡಗಲಿಯಲ್ಲಿ ಬೃಹತ್ ಪ್ರತಿಭಟನೆಯನ್ನು ಸಂಘಟಿಸಿ ಹಿರಿಯ ನಾಯಕ ಎಸ್. ನಿಜಲಿಂಗಪ್ಪ ಅವರನ್ನು ಕರೆಯಿಸಿ ಭಾಷಣ ಮಾಡಿಸಿದ್ದರು. ಹರಪ್ಪನಹಳ್ಳಿಯಲ್ಲಿ ಪ್ರತಿಭಟನೆ ಸಭೆ ಆಯೋಜಿಸಿದ್ದರು. ಇನ್ನು ಎಂಬತ್ತರ ದಶಕದ ಗೋಕಾಕ್ ಚಳುವಳಿಯಲ್ಲಿ ಪ್ರಕಾಶರು, ಹಡಗಲಿಯಲ್ಲಿ ಕನ್ನಡ ಕ್ರಿಯಾ ಸಮಿತಿಯನ್ನು ಅಸ್ತಿತ್ವಕ್ಕೆ ತಂದು ಅದರ ಅಧ್ಯಕ್ಷರಾಗಿದ್ದರು. ೧೯೮೨ ಮೇ ೧೯ ರಂದು ಡಾ. ರಾಜ್‌ಕುಮಾರ್ ನೇತೃತ್ವದ ಜಾಥಾವನ್ನು ಬಳ್ಳಾರಿ ಜಿಲ್ಲೆಯಲ್ಲಿ ಆಯೋಜಿಸಿದ್ದರು.

ಹೀಗೆ ಹೋರಾಟ ರಾಜಕಾರಣದಲ್ಲಿದ್ದ ಪ್ರಕಾಶರು, ವಿಧಾನ ಮಂಡಲವನ್ನು ಪ್ರವೇಶಿಸಲು ಮಾಡಿದ ಒಂದೆರಡು ವಿಫಲ ಪ್ರಯತ್ನಗಳ ನಂತರ ೧೯೮೩ರಲ್ಲಿ ವಿಧಾನಸಭೆಗೆ ಆಯ್ಕೆಯಾಗುವ ಮೂಲಕ ಅಧಿಕಾರ ರಾಜಕೀಯಕ್ಕೆ ಪ್ರವೇಶ ಮಾಡಿದರು. ನಂತರ ಹಡಗಲಿ ವಿಧಾನಸಭಾ ಚುನಾವಣೆಯಲ್ಲಿ ನಾಲ್ಕು ಬಾರಿ ಆಯ್ಕೆಯಾದ ಏಕೈಕ ವ್ಯಕ್ತಿಯಾಗಿ ದಾಖಲೆ ಸೃಷ್ಟಿಸಿದರು. ಆರು ಜನ ಮುಖ್ಯಮಂತ್ರಿಗಳ ಸಚಿವ ಸಂಪುಟಗಳಲ್ಲಿ ೧೪ ಖಾತೆಗಳನ್ನು–ಒಮ್ಮೆ ಉಪಮುಖ್ಯಮಂತ್ರಿಯಾಗಿಯೂ–ದಕ್ಷವಾಗಿ ನಿರ್ವಹಿಸಿದ ಕೀರ್ತಿ ಇವರದ್ದು.

ಅತ್ಯಂತ ಸಮರ್ಪಕವಾಗಿ ಕಾರ್ಯನಿರ್ವಹಿಸಿದವರು. ಉಪಮುಖ್ಯಮಂತ್ರಿಯೂ ಆಗಿದ್ದವರು. ತಮ್ಮ ಸಮಾಜವಾದಿ ದೃಷ್ಟಿಕೋನವನ್ನು ಪ್ರಭುತ್ವ ರಾಜಕಾರಣದಲ್ಲಿ ಅಳವಡಿಸಿಕೊಳ್ಳುತ್ತಲೇ ಇದ್ದವರು. ಮೊದಲ ಬಾರಿಗೆ ಸಾರಿಗೆ ಮಂತ್ರಿಯಾದ ಕೂಡಲೇ ವಿದ್ಯಾರ್ಥಿಗಳಿಗೆ ರಿಯಾಯಿತಿ ದರದಲ್ಲಿ ಬಸ್‌ಪಾಸ್ ಸೌಲಭ್ಯ ಜಾರಿಗೊಳಿಸಿದರು. ಗ್ರಾಮೀಣ ಪ್ರದೇಶಗಳಿಗೆ ಗ್ರಾಮೀಣ ಬಸ್ ಸೌಲಭ್ಯ ಜಾರಿಗೆ ತಂದರು. ಈ ಹೊತ್ತಿನ 'ಸ್ವಚ್ಚ ಭಾರತ್' ಯೋಜನೆಯನ್ನು ಇಪ್ಪತ್ತು ವರ್ಷಗಳಷ್ಟು ಹಿಂದೆಯೇ 'ನಿರ್ಮಲ ಕರ್ನಾಟಕ', 'ಸ್ವಚ್ಚಗ್ರಾಮ' ಹೆಸರಿನಲ್ಲಿ ಜಾರಿ ಮಾಡಿದ್ದರು. ದೇಶದಲ್ಲೇ ಮೊಟ್ಟಮೊದಲ ಬಾರಿಗೆ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಸೌಲಭ್ಯವನ್ನು ಜಾರಿಗೆ ತಂದ ಕೀರ್ತಿ ಪ್ರಕಾಶ್‌ರದ್ದು. ಎರಡನೆಯದು ಈ ಮೀಸಲಾತಿಯನ್ನು ಒಂದೇ ಜಾತಿಗೆ ನಿಗದಿಗೊಳಿಸದೆ ರೊಟೇಶನ್ ಆಧಾರದ ಮೇಲೆ ವೈಜ್ಞಾನಿಕವಾಗಿ ನಿಗದಿಪಡಿಸಿ ಜಾರಿಗೊಳಿಸಿದ್ದು ಅತ್ಯಂತ ಕ್ರಾಂತಿಕಾರಿ ಹೆಜ್ಜೆ. ಇದರಿಂದ ರಾಜಕೀಯದ ಅಧಿಕಾರ ಎಲ್ಲಾ ಜಾತಿಯ ಜನರಿಗೂ ದೊರಕುವಂತಾಯಿತು. ಇನ್ನು ಮೂರನೆಯದು, ಅವರು ಮತ್ತೊಂದು ಹೆಜ್ಜೆ ಮುಂದೆ ಹೋಗಿ ಈ ಸಂಸ್ಥೆಗಳ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಗಳಲ್ಲೂ ಮಹಿಳಾ ಮೀಸಲಾತಿಯನ್ನು ಕಲ್ಪಿಸಿ ಮಹಿಳಾ ಸಬಲೀಕರಣಕ್ಕೂ ಕಾರಣರಾದರು.

ಇದಲ್ಲದೆ, ಅವರ ಅಧಿಕಾರಾವಧಿಯಲ್ಲಿ–ವಿಶೇಷವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಯಾಗಿ–ನೂರಾರು ಚಾರಿತ್ರಿಕ ಕಾರ್ಯಗಳನ್ನು ಮಾಡಿದ್ದಾರೆ. ಅಂತಹವುಗಳಲ್ಲಿ ರಂಗಾಯಣ, ಕನ್ನಡ ವಿಶ್ವವಿದ್ಯಾಲಯ ಸ್ಥಾಪನೆ, ಹಂಪಿ ಉತ್ಸವ, ಕಲಾವಿದರಿಗೆ ಮಾಶಾಸನ, ವಚನ ಸಂಪುಟಗಳ ಪ್ರಕಟಣೆ ಮೊದಲಾದ ಮಹತ್ತರ ಕಾರ್ಯಗಳನ್ನು ಮಾಡಿದ್ದಾರೆ. ಹಡಗಲಿಯಲ್ಲಿ ಅವರು 'ರಂಗಭಾರತಿ' ಸಂಸ್ಥೆಯನ್ನೂ ಕಟ್ಟಿ ಆ ಮೂಲಕ ರಂಗಭೂಮಿಗೆ ನೀಡಿದ ಕೊಡುಗೆ ಅನನ್ಯವಾದದ್ದು.

ಎಡೆಬಿಡದ ರಾಜಕೀಯದ ಮಧ್ಯದಲ್ಲಿಯೂ ಅವರು ಸಾಹಿತ್ಯದ ಅಧ್ಯಯನ, ಬರವಣಿಗೆಯನ್ನು ಕೊನೆಯ ತನಕ ಉಳಿಸಿಕೊಂಡಿದ್ದವರು. *ಕಳಿಂಗ ಸೂರ್ಯ ಮತ್ತು ಇತರ ಕಥೆಗಳು, ರಾಜಕೀಯದ ಮಧ್ಯ ಬಿಡುವು, 'ಸೂರ್ಯಶಿಕಾರಿ'(ಅನುವಾದ), ಪ್ರೀತಿಯ ದೇವರು ಮತ್ತು ಇತರೆ ಕಥೆಗಳು, ಡೋಮಿಂಗೋಸ್ ಪಿಯಾಸ್ ಕಂಡ ವಿಜಯನಗರ, ಚುನಾವಣೆಯ ಸುಧಾರಣೆಗಳು* ಇವರ ಪ್ರಮುಖ ಕೃತಿಗಳು.

ಹೀಗೆ ರಾಜ್ಯ ಕಂಡ ಅಪರೂಪದ ಸಾಂಸ್ಕೃತಿಕ ಮಹತ್ವದ ರಾಜಕಾರಣಿಯಾಗಿದ್ದ ಪ್ರಕಾಶ್, ೨೦೦೮ರ ವಿಧಾನಸಭಾ ಚುನಾವಣೆಯ ಸೋಲಿನ ಆಘಾತದಿಂದ ಚೇತರಿಸಿಕೊಳ್ಳದಾದರು. ಕರುಳಿನ ಕ್ಯಾನ್ಸರ್‌ಗೆ ತುತ್ತಾದ ಅವರು ೨೦೧೧ರ ಫೆಬ್ರುವರಿ ೮ರಂದು ತಮ್ಮ ಕೊನೆಯುಸಿರೆಳೆದರು.

**–ಎಂ.ಎಂ. ಶಿವಪ್ರಕಾಶ್**

# ಪ್ರೊ. ಬಿ. ಕೃಷ್ಣಪ್ಪ ನೆನಪಿನ ಮಾಲೆ–೩೬

–ಇಂದಿರಾ ಬಿ. ಕೃಷ್ಣಪ್ಪ

## ಬಿ.ಕೆ.ಯವರ ಮಾನವೀಯ ಸ್ಪಂದನೆಗಳು

ಚಳುವಳಿಯ ಗತಿತಾರ್ಕಿಕತೆಯನ್ನು ಗಮನಿಸುತ್ತಿರುವ ಜನರು, ಅವರ ಮೇಲಿನ ದೌರ್ಜನ್ಯ, ಅನ್ಯಾಯ ಅತ್ಯಾಚಾರಗಳಿಗೆ ಚಳುವಳಿಯಿಂದ ಪರಿಹಾರ–ನ್ಯಾಯ ಸಿಗಬಹುದೇನೋ ಎಂಬ ಆಸೆಕಣ್ಣುಗಳಿಂದ ನೋಡುತ್ತಾ, ಅವರ ವೇದನೆಯನ್ನು ನಿವೇದಿಸಿಕೊಳ್ಳುವ ನಾನಾ ಮಾರ್ಗಗಳು ನನಗೆ ಅಚ್ಚರಿಯನ್ನು ಮತ್ತು ದು:ಖವನ್ನು ತಂದಿತ್ತು. ಅಸಹಾಯಕರು ಬರೆದ ನೂರಾರು ಪತ್ರಗಳು ಹಾಗೂ ಗೌಪ್ಯವಾಗಿ ಭೇಟಿಯಾಗಲು ಬರುವ ನೊಂದ ಮಹಿಳೆಯರು ಮತ್ತು ವಿದ್ಯಾರ್ಥಿಗಳ ನೋವಿನ ಮೂಟೆ ಬಿಚ್ಚಿಕೊಳ್ಳುತ್ತಿದ್ದ ಸಂದರ್ಭದಲ್ಲಿ ನಾನೂ ಮೂಕ ಸಾಕ್ಷಿಯಾಗಿರುತ್ತಿದ್ದೆ.

ದಲಿತ ಹೆಣ್ಣು ಮಗಳೊಬ್ಬಳು ಬರೆದ ಅನಾಮಧೇಯ ಕಾರ್ಡ್‌ನಲ್ಲಿದ್ದ ಸಾರಾಂಶ– 'ಹೊನ್ನಾಳಿ ಬಸ್‌ಸ್ಟಾಂಡ್ ಪಕ್ಕದ ಬನ್ನಿಮಠದ ಪಕ್ಕದ ಗುಡಿಸಲಿನ ರತ್ನಮ್ಮನ ಮಗಳನ್ನು '____ ಹೋಟೆಲ್' ಕೃಷ್ಣಪ್ಪನ ತಮ್ಮ ___ನು ಸಾಗರಕ್ಕೆ ಕರೆದುಕೊಂಡು ಹೋಗಿ ವಾರಗಳು ಕಳೆದ ನಂತರ ತಂದು ಬಿಟ್ಟಿದ್ದಾನೆ. ಸ್ಟೇಷನ್‌ಗೆ ಹೋಗಿ ಕೇಸುಕೊಟ್ಟರೆ, ಆತನಿಂದ ಸಾವಿರಾರು ರೂಪಾಯಿ ಕಸಿದು ಹುಡಗಿಯನ್ನೇ ಲಾಕಪ್ಪಿನಲ್ಲಿಟ್ಟು, ಹುಡುಗಿ ಹೋಗಿದ್ದು ತಪ್ಪು; ಇನ್ನು ಮುಂದೆ ಆಕೆ ಹಾಗೆಲ್ಲ ಹೋಗಲ್ಲ ಎಂದು ಹುಡುಗಿ ಹಾಗೂ ಆಕೆಯ ತಂದೆಯಿಂದ ಬರೆಯಿಸಿಕೊಂಡು ಬಿಟ್ಟಿದ್ದಾರೆ. ಹುಡುಗಿಯನ್ನು ____ನೇ ಕಟ್ಟಿಕೊಳ್ಳುವಂತೆ ಮಾಡಿ' ಎಂಬುದಾಗಿತ್ತು. ಇನ್ನು ಚಿಕ್ಕಮಗಳೂರಿನ ಮಾಗಡಿ ಗ್ರಾಮದ ಸಿದ್ದಯ್ಯನ ಮಗಳಾದ ಜಯಮ್ಮ (೨೦ ವರ್ಷ) ಬರೆದ ಪತ್ರ – 'ಮೂರು ಜನ ತಂಗಿಯರು, ೨ ಜನ ತಮ್ಮಂದಿರು, ಹಿರೇಮಗಳು ನಾನು. ಕಡುಬಡತನ. ಕಾಫಿ ತೋಟದಲ್ಲಿ ಕೂಲಿ ಕೆಲಸ ಮುಗಿಸಿ ವಾಪಾಸಾಗುವಾಗ ಈಗ ೬ ತಿಂಗಳ ಹಿಂದೆ ಒಮ್ಮೆ, ದಸಂಸದ ಸಂಚಾಲಕರಾದ ____ನು, ದಾರಿಗೆ ಅಡ್ಡಗಟ್ಟಿ ಕಾಡಿನೊಳಗೆ ಎಳೆದೊಯ್ದು ಅತ್ಯಾಚಾರ ಮಾಡಿದ್ದು, ದು:ಖಿತಳಾದ ನನ್ನನ್ನು ಆತನೇ ಮದುವೆಯಾಗುವುದಾಗಿಯೂ, ಯಾರಲ್ಲೂ ಈ ವಿಷಯ ಹೇಳಬಾರದೆಂಬುದಾಗಿ ಪ್ರಮಾಣ ಮಾಡಿಸಿದ್ದು, ಆತನ ಓದಿಗಾಗಿ ಕೂಲಿ ಮಾಡಿ ಹಣ ಸಹಾಯ ಕೋರಿದ್ದು, ಕೂಲಿ ಹಣದಿಂದಲೇ ಆತನನ್ನು ಓದಿಸಿದ್ದು, ಆತನು ಅಧ್ಯಾಪಕನಾದದ್ದು, ನಂತರ ನನ್ನ ತಂದೆ–ತಾಯಿ ಅವನಲ್ಲಿ ಮದುವೆಯ ಪ್ರಸ್ತಾಪವೆತ್ತಿದಾಗ, ರೂ.೧೦೦೦೦/– ಕೊಡಬೇಕೆಂದು ದಬಾಯಿಸಿದ್ದು, ಮನೆಗೆ ಇನ್ನೊಮ್ಮೆ ಬಂದರೆ ಜೀವ ಸಹಿತ ಬಿಡುವುದಿಲ್ಲವೆಂದು ಬೆದರಿಕೆ ಹಾಕಿದ್ದು, ಆತನ ಮನೆಯವರು ನನ್ನನ್ನು ಹೊಡೆದಿದ್ದು, ಈ ಎಲ್ಲಾ ಕಾರಣದಿಂದ ನನ್ನನ್ನು ಮತ್ತು ತಂಗಿಯರನ್ನು ಯಾರೂ ಮದುವೆಯಾಗದ ಸ್ಥಿತಿ ಬಂದಿರುವುದಾಗಿಯೂ, ನನ್ನ ಬಾಳಿನ ಬಗ್ಗೆ ಎಲ್ಲಿಯೂ ನ್ಯಾಯ ಸಿಗದಿದ್ದುದರಿಂದ, ತಮ್ಮಂಥ ಘನ ವಿದ್ಯಾವಂತರು ಹಾಗೂ ಬಡವರ ರಕ್ಷಣೆಗೋಸ್ಕರ ತ್ಯಾಗ ಮಾಡುತ್ತಿರುವ ತಾವುಗಳು ಈ ಬಡ ಹರಿಜನ ಮಗಳ ಮೇಲೆ ಕರುಣೆ ತೋರಿಸಿ ನನಗೆ ಮತ್ತು ನನ್ನ ತಂಗಿಯರ ಬಾಳು ಹಾಳಾಗದಂತೆ ಮಾರ್ಗ ತೋರಿಸಿಕೊಡುತ್ತೀರೆಂದು ಈ ಅರ್ಜಿಯನ್ನು ಕಳುಹಿಸಿ ಕೊಟ್ಟಿರುತ್ತೇನೆ' ಎಂದು ಮುಕ್ತಾಯವಾದ ಪತ್ರದ ಕೊನೆಯಲ್ಲಿ ಹೆಬ್ಬೆಟ್ಟಿನ ಗುರ್ತಿದೆ. ಇನ್ನೊಂದು ಪತ್ರದಲ್ಲಿ 'ತೀರ್ಥರೂಪ ಸಮಾನರಾದ ಅಣ್ಣನವರಿಗೆ, ನಿಮ್ಮ ತಂಗಿ ಸಮಾನಳಾದ ತಂಗಿ ಮಾಡುವ ನಮಸ್ಕಾರ. ಶ್ರೀಮಂತ ಲಿಂಗಾಯಿತ ಸಬ್‌ಇನ್ಸ್‌ಪೆಕ್ಟರ್ _____ ನವರಿಂದ ನಮಗಾಗುತ್ತಿರುವ ಅನ್ಯಾಯ ತಪ್ಪಿಸಿರಿ ನಮ್ಮ ಮೇಲೆ ಸುಳ್ಳು ಕೇಸು ಹಾಕಿಸಿದ್ದಾರೆ. ನೀವು ಬಿಡುವಾದಾಗ ಬಂದು ನಮ್ಮ ಗೋಳಿನ ಕಥೆ ಕೇಳಿ. ಈ ಪತ್ರ ಬರೆದ ವಿಷಯ ಯಾರಿಗೂ ಹೇಳ ಬೇಡಿ– ನಿಮ್ಮ ನೊಂದ ತಂಗಿ ಜಯಲಕ್ಷ್ಮಮ್ಮ – ಬಿಆರ್‌ಪಿ.'

ಅಥಣಿ ತಾಲ್ಲೂಕಿನ ಕಾಗಲವಾಡ ಹಾಸ್ಟೆಲ್‌ನಲ್ಲಾಗುತ್ತಿರುವ ಭ್ರಷ್ಟಾಚಾರ, ವಿದ್ಯಾರ್ಥಿಗಳಿಗಾಗುತ್ತಿರುವ ಆಹಾರ ಹಾಗೂ ಹಣದ ಸಮಸ್ಯೆಗಳನ್ನು ಒಬ್ಬ ವಿದ್ಯಾರ್ಥಿ, ಅತಿ ಸಣ್ಣ ಅಕ್ಷರದಲ್ಲಿ ಕಾರ್ಡ್‌ನಲ್ಲಿ ಬರೆದಿದ್ದ. ಇನ್ನೊಬ್ಬ ವಿದ್ಯಾರ್ಥಿ, ಗೋವಿಂದಸ್ವಾಮಿ ತುಮಕೂರು, ಅವನ ಸ್ನೇಹಿತನ ಕೈಲಿ ಪತ್ರವೊಂದನ್ನು ಕಳುಹಿಸಿ 'ಕಾಲೇಜಿನಲ್ಲಿ ಪ್ರಥಮ ಬಾರಿಗೆ ಡಾ. ಅಂಬೇಡ್ಕರ್‌ರವರ ಪುಣ್ಯರಥೋತ್ಸವ ಮಾಡುತ್ತಿದ್ದೇವೆ. ಅದಕ್ಕೆ ತಾವು ಖಂಡಿತ ಬರಬೇಕು'ಎಂದು ಕೋರಿಕೊಂಡಿದ್ದ. ಇನ್ನೊಬ್ಬ ವಿದ್ಯಾರ್ಥಿ ಕೋಲಾರ ಜಿಲ್ಲೆ, ಗೌರಿಬಿದನೂರಿನಿಂದ ಬಂದಿದ್ದು, ತಾನು ದಸಂಸದ ಅಧ್ಯಯನ ಶಿಬಿರದಲ್ಲಿ ಭಾಗವಹಿಸಿದ್ದು, ಎರಡು ಪ್ರಶ್ನೆಗಳಿಗೆ ಉತ್ತರಿಸಬೇಕೆಂದು ಕೋರಿದ್ದ: 'ಹೊಲೆ ಮಾದಿಗರಲ್ಲಿ ಇರುವ ಉಪಜಾತಿಗಳನ್ನು ಹೋಗಲಾಡಿಸಲು ಯಾವುದು ಸೂಕ್ತ ಕ್ರಮ ತಿಳಿಸಿ. ಇವರಲ್ಲಿ ಸ್ವಲ್ಪ ಮಟ್ಟಿಗೆ ಶೋಷಣೆಯಿಂದ ಮುಕ್ತರಾದವರು ತಮ್ಮ ಸ್ವಾರ್ಥದ ಕಡೆಗೆ ಗಮನ ಹರಿಸುತ್ತಾರೆ. ಇವರ ಬಗ್ಗೆ ನಿಮ್ಮ ಸಲಹೆ ತಿಳಿಸಿ' ಇನ್ನೊಂದು ಅರ್ಜಿಯನ್ನು ಭದ್ರಾವತಿ ತಾಲ್ಲೂಕಿನ ನೆಲ್ಲಿಸರ ಮಾಳೇನ ಹಳ್ಳಿಯ ಹಿರಿಯರೊಬ್ಬರು ಬಂದು, ನಮ್ಮ ಮನೆಯಲ್ಲೇ ಕುಳಿತು ಮಾತನಾಡಿ, ಅರ್ಜಿ ಬರೆದು ಕೊಟ್ಟಿದ್ದರು. ಅದರಲ್ಲಿ ಸಾರಾಯಿ ಅಂಗಡಿಯಿಂದ ಬಡಜನರಿಗೆ ತೊಂದರೆಯಾಗುವುದೆಂದು ೩ ವರ್ಷಗಳಿಂದ ಅಲ್ಲಿಂದ ಅಂಗಡಿ ತೆಗೆಯಿಸಿ ಹಾಕಿದ್ದರು, ಲಿಂಗಾಯಿತ ಜನರು ಸೇರಿ ಪೊನ್ನುಸ್ವಾಮಿಯಿಂದ ಪುನಃ ಸೇಂದಿ ಅಂಗಡಿ ಇಡಿಸಿದ್ದು, ಅವನಿಗೆ ತಾಕೀತು ಮಾಡಿ ರೂ.೧೦೧/– ದಂಡ ವಿಧಿಸಿದರೂ ಅದನ್ನು ದಿಕ್ಕರಿಸಿ ಅಂಗಡಿ ನಡೆಸುತ್ತಿದ್ದಾನೆ. ಕುಡಿಯುವ ಜನರೇ ಸೇರಿ ಸಾರಾಯಿ ಅಂಗಡಿ ತೆಗೆಯಿಸಿದರೆ, ಕುಡಿಯದೆ ಇರುವ ಜನ ಸೇರಿ ಸಾರಾಯಿ ಅಂಗಡಿ ಇಡಿಸಿದ್ದಾರೆ. ಅಂಗಡಿ ಇಲ್ಲಿಂದ ತೆಗೆಯಿಸಿ ಹರಿಜನ ಗಿರಿಜನರಿಗೆ ನ್ಯಾಯದೊರಕಿಸಿಕೊಡಲು ಕೇಳಿಕೊಂಡಿದ್ದರು.



ಬಿ.ಕೆ. ತಮ್ಮ ಅಭ್ಯಾಸ ಕೊಠಡಿಯಲ್ಲಿ

ಕೃಷ್ಣಪ್ಪ ಸಾರ್ವಜನಿಕ ಸಮಸ್ಯೆಗಳನ್ನು ಎತ್ತಿಕೊಂಡು ಹೋರಾಟ ನಡೆಸುತ್ತಿದ್ದುದರ ನಡುವೆಯೂ, ವೈಯಕ್ತಿಕವಾದ ಇಂತಹ ಹಲವಾರು ಸಮಸ್ಯೆಗಳಿಗೆ ಸ್ಪಂದಿಸುವುದೂ ಸಹ, ಚಳುವಳಿಗೆ ಅನಿವಾರ್ಯವೂ ಮತ್ತು ಮಾನವೀಯವೂ ಆಗಿತ್ತು. ಮೇಲ್ಕಂಡ ಪ್ರಕರಣಗಳಲ್ಲಿ ಒಂದೆರಡು, ದಸಂಸದ ಕಾರ್ಯಕರ್ತರೇ ನೇರ ಹೊಣೆಗಾರರಾಗಿದ್ದರಿಂದ, ಅವರೇ ಅದರ ಜವಾಬ್ದಾರಿ ಹೊತ್ತುಕೊಳ್ಳುವಂತೆ ಮಾಡಿ, ಅವರೇ ಆ ಹೆಣ್ಣು ಮಕ್ಕಳನ್ನು ಮದುವೆಯಾಗುವಂತೆ ನೋಡಿಕೊಂಡಿದ್ದರು. ಹಾಸ್ಟೆಲ್ ಮತ್ತು ಸೇಂದಿ ಅಂಗಡಿ ಸಮಸ್ಯೆಗಳನ್ನು ಅಲ್ಲಿನ ಜಿಲ್ಲಾ ಸಂಘಟನೆಯ ಮೂಲಕ ಪರಿಹರಿಸಲಾಗಿತ್ತು. ಇನ್ನು ದಲಿತರೊಳಗಿನ ಎಡ–ಬಲ ಉಪಜಾತಿಗಳ ಪ್ರಶ್ನೆ ಇವತ್ತಿಗೂ ಬಗೆ ಹರಿಯಲಾಗದ ಪ್ರಶ್ನೆಯಾಗಿಯೇ ಉಳಿದಿದೆ. ಭಾರತದ ಜಾತಿ ಶ್ರೇಣೀಕರಣದ ಭ್ರಮಾಲೋಕದಿಂದ ಜನರನ್ನು ಪಾರು ಮಾಡಲು ನಿರಂತರ ಪ್ರಯತ್ನ ನಡೆಯುತ್ತಲೇ ಇದೆ. ತುಮಕೂರಿನ ಅಂಬೇಡ್ಕರೋತ್ಸವಕ್ಕೆ ಬಿ.ಕೆ. ಹೋಗಲಿಲ್ಲ ಮತ್ತು ಆತನಿಗೆ ಅಂಬೇಡ್ಕರ್ ದಿನಾಚರಣೆಯನ್ನು ಹೇಗೆ ಮಾಡಬೇಕೆಂಬ ಬಗ್ಗೆ ಆಗಲೇ ಪತ್ರವೊಂದನ್ನು ಬರೆದು ಕಳುಹಿಸಿದ್ದರು. ಇದರೊಂದಿಗೆ, ಇನ್ನೊಂದು ಅನಾಮಧೇಯ ಪತ್ರ ದಲಿತರ ಪ್ರಗತಿಯನ್ನು ಸಹಿಸದೆ ಬರೆದದ್ದಾಗಿತ್ತು, – "ಒಂದು ಜಾತಿ ಅಥವಾ ಒಬ್ಬ ವ್ಯಕ್ತಿಯ ಉದ್ಧಾರ ನಿಂತಿರುವುದು, ಅವರವರ ಸ್ವಪ್ರಯತ್ನದ ಮೇಲೆ ಹೊರತು, ಸರ್ಕಾರ ಅಥವಾ ಬೇರೆಯವರು ಕೊಡುವ ಭಿಕ್ಷೆ ಅಥವಾ ಸಹಾಯದಿಂದಲ್ಲ. ಜಾತಿಯ ಹೆಸರಲ್ಲಿ ಕಾಗುಣಿತ ಗೊತ್ತಿಲ್ಲದ ಹರಿಜನ ಗಿರಿಜನರನ್ನು, ಹಿಂದುಳಿದವರನ್ನು ಪಾಠ ಮಾಡಲು ಬಿಟ್ಟರೆ, ಆ ವಿದ್ಯಾರ್ಥಿಗಳನ್ನು ದೇವರೇ ಕಾಪಾಡಬೇಕು! ಖಂಡ–ಹೆಂಡ ಬಿಡಿ, ಓದಿ ಮೇಲ್ಜಾತಿಯವರಂತೆ, ನೀವೂ ನಿಮ್ಮ ಜಾತಿಯ ಮಠಾಧೀಶರನ್ನು ನೇಮಿಸಿಕೊಳ್ಳಿ. ಆಗ ಜಾತಿಯ ಅಂತರ ಕಡಿಮೆಯಾಗಿ ಸಮಾನತೆ ಬರುತ್ತದೆ. ಇದು ಬಿಟ್ಟು, ಸರ್ಕಾರ ಸಾವಿರ ರೂ ಕೊಟ್ಟರೂ ನಿಮ್ಮ ಉದ್ಧಾರ ಸಾಧ್ಯವಿಲ್ಲ, ಬಿಟ್ಟಿ ಗೋಡೆಗಳ ಮೇಲೆ ಬರೆದರೆ ಜಾತಿ ಉದ್ಧಾರವಾಗುವುದಿಲ್ಲ." ಇಂತಹ ಜಾತ್ಯಂಧರ ಪತ್ರಗಳಿಂದ ಬಿಕೆಯವರು ಎಂದೂ ವಿಚಲಿತರಾಗುತ್ತಿರಲಿಲ್ಲ.

ಮಠ, ವಿದ್ಯಾ ಸಂಸ್ಥೆ ಇತ್ಯಾದಿಗಳ ಆಡಳಿತ ವ್ಯವಸ್ಥೆಯಲ್ಲಿ ನೊಂದು

ಬೆಂದಿರುವುದಾಗಿ ದೂರಿಕೊಂಡ ನೂರಾರು ಪತ್ರ-ಅರ್ಜಿಗಳನ್ನೂ, ನಂತರ ರೂಪಿಸಿದ ಹೋರಾಟಗಳನ್ನೂ ಮುಂದಿನ ಬಾರಿ ಪ್ರಸ್ತಾಪಿಸುವುದಿದೆ. ಇವುಗಳ ಮಧ್ಯದಲ್ಲಿ, ಹೆಗ್ಗೋಡು ನೀನಾಸಂನಲ್ಲಿ ಓದುತ್ತಿದ್ದ, ಡಿ. ತಿಪ್ಪೇಸ್ವಾಮಿ ಎಂಬ ವಿದ್ಯಾರ್ಥಿ ಪ್ರೊ.ಬಿ.ಕೆ ಯವರನ್ನು 'ಮಾರ್ಗದರ್ಶಕರಿಗೆ' ಎಂದು ಸಂಬೋಧಿಸಿ ಪತ್ರ ಬರೆದು, ಆತನ ಶಿಕ್ಷಣ, ಹೊಸ ಅನುಭವಗಳು, ತರಬೇತಿಗಳ ವಿಚಾರಗಳನ್ನು ಹೇಳುತ್ತಲೇ ಕೃಷ್ಣಪ್ಪ ಕಳುಹಿಸಿದ ಎಂ.ಓ. ತಲುಪಿದ ಬಗ್ಗೆ ಕೃತಜ್ಞತೆ ಹೇಳುತ್ತಾ, ಪ್ರತಿ ತಿಂಗಳೂ ಸಕಾಲದಲ್ಲಿ ಹಣಕಳುಹಿಸಲು ಕೋರಿಕೊಂಡಿದ್ದ. ಹೀಗೆ ಆತನಿಗೆ ಹಣ ಕಳುಹಿಸುತ್ತಿದ್ದ ವಿಷಯ ಪತ್ರ ನೋಡುವವರೆಗೂ ನನಗೆ ತಿಳಿದಿರಲಿಲ್ಲ. ಬಲಗೈಯಲ್ಲಿ ಕೊಟ್ಟಿದ್ದು ಎಡಗೈಗೆ ಗೊತ್ತಾಗಬಾರದೆಂಬ ನಾಣ್ನುಡಿ ಪಾಲಿಸುತ್ತಿದ್ದಾರೆ ಎಂದೇ ತಿಳಿದೆ. ಹಾಗೆಯೇ ದಸಂಸದ ಕಾರ್ಯಕ್ರಮಗಳಿಗಾಗಿ, ಪೂರ್ಣಾವಧಿ ಕಾರ್ಯಕರ್ತರುಗಳಿಗಾಗಿ, 'ಪಂಚಮ' ಸಂಚಿಕೆಗಾಗಿ ಮತ್ತು ದಸಂಸದ ಒಡನಾಡಿಗಳಿಗಾಗಿ ಕೃಷ್ಣಪ್ಪನವರ ನೆರವಿನ ಹಸ್ತ ಸದಾ ಚಾಚಿಕೊಂಡಿದ್ದುದನ್ನು ನಾನು ಕಂಡಿದ್ದೇನೆ.

**(ಮುಂದುವರೆಯುವುದು)**

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ವೈವಿಧ್ಯ ಮತ್ತು ಜನಪರತೆಗಳು ಈ ವಿಶೇಷಾಂಕದ ಮುಖ್ಯ ಲಕ್ಷಣಗಳು. ಬಹುಪಾಲು ಲೇಖನಗಳು ಸಂಕೀರ್ಣತೆಯನ್ನು ಬಿಟ್ಟುಕೊಡದೆ ಸರಳವಾಗಿವೆ. ಸಮಾಜವಾದದ ಒಳಹರಿವು ಎಲ್ಲ ಬರಹಗಳಲ್ಲಿಯೂ ಇದ್ದರೂ ಅದು ಬಣ್ಣದ ಕನ್ನಡಕವಾಗಿಲ್ಲ. ಸುಲಿಗೆ ಮಾಡುವವರು, ಸುಲಿಗೆಯಾಗುವವರು ಮತ್ತು ಇವರುಗಳ ಬಗ್ಗೆ ಬರೆಯುವವರು ಎಲ್ಲರೂ ಮನುಷ್ಯರಿಗೆ ಸಹಜವಾದ ಗುಣಲಕ್ಷಣಗಳನ್ನು ಹೊಂದಿರುವರೆಂಬ ತಿಳುವಳಿಕೆಯು ಹಲವು ಲೇಖನಗಳ ಸಮತೋಲನಕ್ಕೆ ಕಾರಣವಾಗಿದೆ. ಲೋಕವಿಮರ್ಶೆ ಮತ್ತು ಆತ್ಮವಿಮರ್ಶೆಗಳು ಬೇರೆಬೇರೆಯಲ್ಲ. ಸ್ವತಃ 'ಹೊಸ ಮನುಷ್ಯ' ಹೀಗೆ ಬೆಳೆಯುತ್ತಿರುವುದು ಅಲ್ಲಿನ ಲೇಖನಗಳು ಮತ್ತು ಸಂಪಾದಕೀಯಗಳನ್ನು ಓದಿದಾಗ ಗೊತ್ತಾಗುತ್ತದೆ.

ಎಸ್. ಮಂಜುನಾಥ್ ಅವರ ಆರ್ದ್ರ ಬರಹವು ಮನಸ್ಸನ್ನು ಕಲಕಿದರೆ ಲೋಹಿಯಾ ಮತ್ತು ಅಂಬೇಡ್ಕರ್ ಅವರನ್ನು ಹೋಲಿಸುವ ಡಿ.ಎಸ್.ಎನ್. ಲೇಖನವು ಕುತೂಹಲಕಾರಿಯಾದ ಪ್ರಶ್ನೆಗಳನ್ನು ಎತ್ತುತ್ತದೆ ಹಾಗೂ ಅಂತಹುದೇ ತೀರ್ಮಾನಗಳಿಗೆ ಬರುತ್ತದೆ. ಯಾವುದೇ ಲೇಖನವು 'ನಿರುಪಯುಕ್ತ' ಎನ್ನಿಸುವುದಿಲ್ಲ.

ಈ ಪತ್ರಿಕೆಯನ್ನು ಸಂತೆಯ ಸುದ್ದಿಗಳಂತೆ ಗಬಗಬ ನುಂಗಬಾರದು. ಬಹಳ ನಿಧಾನವಾಗಿ, ಪ್ರಶ್ನೆಗಳನ್ನು ಕೇಳಿಕೊಳ್ಳುತ್ತಾ ಉತ್ತರಗಳನ್ನು ಕಂಡುಕೊಳ್ಳುತ್ತಾ ಒಳಗೆ ತೆಗೆದುಕೊಳ್ಳುವುದರಿಂದ ಓದಿದವರು ಬೆಳೆಯುತ್ತಾರೆ. ಸಂಪಾದಕರು ಮತ್ತು ಅವರ ಸಂಗಡಿಗರಿಗೆ ಕೃತಜ್ಞತೆಗಳನ್ನು ಹೇಳಲೇಬೇಕು.

**-ಡಾ. ಎಚ್.ಎಸ್. ರಾಘವೇಂದ್ರ ರಾವ್,** ಬೆಂಗಳೂರು

'ಹೊಸಮನುಷ್ಯ'ದ ವಿಶೇಷಾಂಕ ಕನ್ನಡದ ಸಂದರ್ಭದಲ್ಲಿ ಸಮಾಜವಾದಿ ಮೌಲ್ಯಗಳನ್ನು ಪುನರುದ್ದೀಪಿಸುವುದಕ್ಕೇ ಪ್ರಕಟಗೊಂಡಿದೆಯೋ ಎಂಬಷ್ಟು ಗಂಭೀರವಾಗಿ ಮೂಡಿಬಂದಿದೆ. ರೈತರ ಆತ್ಮಹತ್ಯೆಯ ಕುರಿತ ನಿಮ್ಮ ಅಭಿಪ್ರಾಯಗಳು ಎಷ್ಟು ಸಮರ್ಪಕವಾಗಿವೆಯೆಂದರೆ ಓರ್ವ ಸಮಾಜವಾದಿಯೇ ನಿಜವಾದ ಅರ್ಥದ ಸಮಾಜವಿಜ್ಞಾನಿ ಎಂದು ನನಗೆ ಮತ್ತೆ ಮತ್ತೆ ಅನ್ನಿಸುತ್ತಿದೆ.

ನಿಮ್ಮ ಪತ್ರಿಕೆಯಲ್ಲಿ ಮತ್ತೆ ಮತ್ತೆ ಮರುಬರವಣಿಗೆಗೆ ಮತ್ತು ಮರುನಿರೂಪಣೆಗೆ ಒಳಗಾಗುತ್ತಿರುವ ಗಾಂಧಿ-ಅಂಬೇಡ್ಕರ್-ಲೋಹಿಯಾ ಚಿಂತನೆಗಳು ನಮ್ಮ ದೈನಂದಿನ ಬದುಕಿನ ನಿತ್ಯಸತ್ಯಗಳಾದಾಗ ಮಾತ್ರ ಭಾರತ ಭಾರತವಾಗಲು ಸಾಧ್ಯ. ಪ್ರಬಲ ಭಾರತವನ್ನು ಕಟ್ಟುವ ನಮ್ಮ ವಾಂಛೆಗಳಿಂದ ನಾವು ಬಿಡುಗಡೆ ಪಡೆಯದ ಹೊರತು ನಮಗೆ ಮುಕ್ತಿಯೆಂಬುದಿಲ್ಲ. ಈ ದಾರಿಯಲ್ಲಿ ಸತತವಾಗಿ ದುಡಿಯುತ್ತಿರುವ ಹೊಸ ಮನುಷ್ಯ ಪತ್ರಿಕೆಗೆ ಅಭಿನಂದನೆಗಳು.

**-ಡಾ. ನಿತ್ಯಾನಂದ ಬಿ ಶೆಟ್ಟಿ,** ತುಮಕೂರು

ಜಾಗತಿಕ ಪರಿಸರ ದಿನೇ ದಿನೇ ಅವನತಿಯತ್ತ ಸಾಗುತ್ತಿದ್ದು, ಭೂಮಿ ಮೇಲಿನ ಎಲ್ಲ ಜೀವಿಗಳ ಬದುಕು ಅಪಾಯದ ಅಂಚನ್ನು ತಲುಪುತ್ತಿದೆ. ಇಂತಹ ಹತಾಶ ಪರಿಸ್ಥಿತಿಯಲ್ಲಿಯೂ ನೀವು ಎದೆಗುಂದದೆ ನಾಲ್ಕು ವರ್ಷಗಳಿಂದ 'ಹೊಸ ಮನುಷ್ಯ' ಪತ್ರಿಕೆಯ ಮೂಲಕ ಸಮಾಜವಾದವನ್ನು ಹೊಸ ಪರಿಯಲ್ಲಿ ವ್ಯಾಖ್ಯಾನಿಸುತ್ತಾ ನಮ್ಮೆಲ್ಲರ ಗಂಭೀರ ಚಿಂತನೆಗೆ ಕಾರಣರಾಗಿದ್ದೀರಿ.

ನಿಮ್ಮ ಆಗಸ್ಟ್ ವಿಶೇಷ ಸಂಚಿಕೆ ಈ ದಿಸೆಯಲ್ಲಿ ಒಂದು ವಿಶೇಷ ಸಾಧನೆಯಾಗಿದ್ದು, ಅದರಲ್ಲೂ, ಲೋಹಿಯಾ-ಅಂಬೇಡ್ಕರ್ ಚಿಂತನೆಗಳ ನಿಮ್ಮ ತೌಲನಿಕ ನೋಟ ನಮ್ಮ ಇಂದಿನ ರಾಜಕಾರಣದ ದುರಂತವನ್ನು ಪರೋಕ್ಷವಾಗಿ ಧ್ವನಿಸುವಂತಿದೆ. ಹಾಗೇ ಪಂಕಜ್ ಮಿಶ್ರಾರೊಡನೆಯ ಸಂದರ್ಶನ ಮತ್ತು ನಿಮ್ಮ ಸಂಪಾದಕೀಯ ಮಾತುಗಳು ಸಕಾಲಿಕವಾಗಿದ್ದು, ಹೊಸ ಪೋಪ್‌ರನ್ನು ಕುರಿತ

**(೭ನೇ ಪುಟಕ್ಕೆ**

'**ಹೊ**ಸ ಮನುಷ್ಯ'ದ ವಾರ್ಷಿಕ ವಿಶೇಷ ಸಂಚಿಕೆಯಲ್ಲಿ ನನಗೆ ಬಹಳ ಮುಖ್ಯವಾದದ್ದು ನಿಮ್ಮ 'ಸಂಪಾದಕರ ಟಿಪ್ಪಣಿಗಳು'. ಗೊಂದಲದ ಗೂಡಾಗಿರುವ ಮತ್ತು ಮಾರುಕಟ್ಟೆ ಸಂಸ್ಕೃತಿಗೆ ಸಂಪೂರ್ಣ ಮಾರಿಕೊಂಡಿರುವ ಪ್ರಸ್ತುತ ಮನಸ್ಸುಗಳಿಗೆ ನಿಮ್ಮ ಮಾತುಗಳು ಹೊಸ ದಾರಿ ತೋರುತ್ತವೆ. ನೀವು ಪ್ರಸ್ತಾಪಿಸಿರುವ ಪೋಪ್ ಅವರ ಸಮಾಜವಾದಿ ಧೋರಣೆ ಧಾರ್ಮಿಕ ಕ್ಷೇತ್ರದಲ್ಲಿ ಒಂದು ಕ್ರಾಂತಿಕಾರಿ ನಡೆಯೇ ಸರಿ. "ಸಮಾಜವಾದ ಹೀಗೆ ಒಂದು ಧರ್ಮವಾಗಿ ವ್ಯಕ್ತವಾದಾಗಲೇ ಅದು ಸಮಾಜವಾದಿ ರಾಜಕಾರಣವಾಗಿ ಕೂಡ ಮೈ ಪಡೆಯುವುದು"-ಎಂಬ ಮಾತು ರಾಜಕಾರಣ ಪಡೆಯಬೇಕಾಗಿರುವ ವರ್ತಮಾನದ ಆಯಾಮದ ಸೂಚಿಯಾಗಿದೆ ಕೂಡ. ಆದರೆ, ನೋಡಿ ನಮ್ಮಲ್ಲಿ ಏನಾಗ್ತಾ ಇದೆ!! ಭಕ್ತಿಯ ರಾಜಕಾರಣದ ನೆಲೆಗಳು ಪೋಪ್ ಅವರ ಆಲೋಚನೆಗೆ ವಿರುದ್ಧವಾಗಿ ಮತ್ತು ಕೇವಲ ಸ್ವಾರ್ಥ ಸಾಧನೆಗಾಗಿ ಬಳಕೆಯಾಗುತ್ತಿವೆ. ರಾಮಲೀಲೆಯನ್ನು ಕಾಮಲೀಲೆಯನ್ನಾಗಿ ಮಾಡಿ ಬಳಸಿಕೊಳ್ಳುವ ಹಾಗೂ ಬಸವಣ್ಣನ ಜಂಗಮ (ಡೈನಾಮಿಕ್) ತತ್ವವನ್ನು ಆತನ ೧೦೫ ಅಡಿ ಮೂರ್ತಿಯ ಸ್ಥಾಪನೆಯ ಮೂಲಕ ಮತ್ತೆ ಸ್ಥಾವರಗೊಳಿಸುವ ಕೆಟ್ಟ ಕ್ರಿಯೆಗಳು ವಿಜೃಂಭಿಸುತ್ತಿವೆ. ಇಂಥ ಸಂದರ್ಭದಲ್ಲಿ ಪೋಪ್ ಅವರ ಮಾತು ಮತ್ತು ನಡೆ ನಮ್ಮ ಎಲ್ಲ ಕಾವಿಧಾರಿಗಳಿಗೆ ಮತ್ತು ರಾಜಕಾರಣಿಗಳಿಗೆ ಹೊಸ ದಿಕ್ಕು ತೋರಿಸಬೇಕು.

ಭಕ್ತಿಯ ರಾಜಕಾರಣವನ್ನು ಸಮತೆಯ, ಅಭಿವೃದ್ಧಿಪರ ಮತ್ತು ಪರಿವರ್ತನಶೀಲ ಸಮಾಜ ನಿರ್ಮಿಸುವ ಉದ್ದೇಶಕ್ಕಾಗಿ ಪ್ರಯೋಗಿಸಿದ ಬುದ್ಧ-ಬಸವ-ಗಾಂಧೀಜಿ ಅವರ ನಡೆಯೇ ಪೋಪ್ ಅವರ ಕ್ರಿಯೆಯಲ್ಲಿ ಮರುದ್ಧ್ವನಿತವಾಗುತ್ತಿರುವುದು ಸೋಜಿಗವೇನೂ ಅಲ್ಲ: ಅನಿವಾರ್ಯ ಅಗತ್ಯ ಕೂಡಾ. ಅಚ್ಚರಿಯೆಂದರೆ, ಮತಪ್ರಚಾರದ ಮೂಲಕ ಇಡೀ ವಿಶ್ವವನ್ನೇ ತನ್ನ ಧರ್ಮದ ತೆಕ್ಕೆಗೆ ತೆಗೆದುಕೊಳ್ಳುವ ಪರಮ ಗುರಿ ಹೊಂದಿದ್ದ ಕ್ರೈಸ್ತ ಧರ್ಮದ ವಿಶ್ವಗುರುವೇ ಈಗ ತಮ್ಮ ಧರ್ಮದ ಸಂಕುಚಿತ ಧೋರಣೆಗಳನ್ನು ಹಿಂದಿಟ್ಟು ಜಾಗತಿಕ ಅವಘಡಗಳ ಬಗೆಗೆ, ಹಣದ ದುಷ್ಟ ಶಕ್ತಿಯ ಬಗೆಗೆ, ಮಾರುಕಟ್ಟೆ ಬಂಡವಾಳಶಾಹಿಯ ಬಗೆಗೆ, ಮನುಷ್ಯನ ಸುಖ-ಸಾಧನಗಳ ದಾಹದ ಬಗೆಗೆ, ಅವನ ಹೃದಯಹೀನತೆಯ ಬಗೆಗೆ, ಜಾಗತಿಕ ಬಡತನದ ಬಗೆಗೆ, ಹೆಚ್ಚುತ್ತಿರುವ ಭೂಮಿಯ ಅನಾರೋಗ್ಯದ ಬಗೆಗೆ ಮಾತನಾಡುತ್ತಿರುವುದು ಮತ್ತು ಹೊಸ ನಡೆ ಇಡುತ್ತಿರುವುದು. ಇದು ಅತ್ಯಂತ ಸ್ವಾಗತಾರ್ಹ ಬೆಳವಣಿಗೆ. ಇಸ್ಲಾಂ ಅನ್ನು ಶಾಂತಿಯ ಧರ್ಮವೆಂದು ಕರೆದದ್ದಂತೂ ಆ ಧರ್ಮದ ಕೆಲವು ಮೂಲಭೂತವಾದಿಗಳ ಕಣ್ಣನ್ನೇ ತೆರೆಸುವಂತಿದೆ. ಇದನ್ನೆಲ್ಲ ನೋಡಿದರೆ ಮತ್ತೆ ಏನೋ ಒಂದು ಹೊಸ ಆಶಾಕಿರಣ ಮೂಡುವ ಸಂತಸದ ಸೂಚನೆ ಕಾಣುತ್ತಿದೆ. 'ಹೊಸ ಮನುಷ್ಯ' ಇದಕ್ಕೆ ಮುನ್ನುಡಿ ಬರೆಯುತ್ತಿರುವುದು ನಿಜಕ್ಕೂ ಸಂತಸ ತರುವ ಸತ್ಯ.

ಸಮಾನತೆ ಎಂಬ ಸವಕಲಾದ ರಾಜಕೀಯ ಶಬ್ದಕ್ಕೂ, ಸಮತೆ ಎಂಬ ತಾತ್ವಿಕತೆಗೂ ಇರುವ ವ್ಯತ್ಯಾಸವನ್ನರಿಯದೆ ಮೊಗಂ ಆಗಿ ಸಮಾಜವಾದದ ಬಗೆಗೆ ಮಾತನಾಡುವವರು ಈಗ ಅದರ ವಿಕೇಂದ್ರೀಕೃತ ಉತ್ಪಾದನೆ ಮತ್ತು ಆಡಳಿತದ ಮುಖಗಳನ್ನು ಕಂಡುಕೊಳ್ಳಬೇಕಾಗಿದೆ ಮತ್ತು ಅದರ ನಿಜವಾದ ಸತ್ವ-ಸ್ವರೂಪಗಳನ್ನು ಅರಿಯಬೇಕಾಗಿದೆ. ಈ ನಿಟ್ಟಿನಲ್ಲಿ ಪತ್ರಿಕೆ ಒಂದು ಶಿಸ್ತುಬದ್ಧ ಸಮಾಜವಾದಿ ಶಾಲೆಯಾಗಿ (ಸ್ಕೂಲ್ ಆಫ್ ಸೋಶಿಯಲಿಸ್ಟ್ ಥಾಟ್ಸ್ ) ವೈಚಾರಿಕ ಚಿಂತನೆಗಳನ್ನು ಬಿತ್ತುತ್ತಿರುವುದು ಅನನ್ಯ ನಡೆಯಾಗಿದೆ. ಇಂಥ ಪತ್ರಿಕೆ ಇನ್ನೊಂದು ವರ್ಷ ಮಾತ್ರವಲ್ಲ, ನಿರಂತರವಾಗಿ ಮುಂದುವರೆಯಲೆಂಬ ಬಯಕೆ ನನ್ನದು. ನಿಮ್ಮೊಂದಿಗೆ ನಾವೆಲ್ಲ ಇದ್ದೇವೆ.

**-ಡಾ. ಬಸವರಾಜ ಸಾದರ,**.ಬೆಂಗಳೂರು

## ಗ್ರೀಸ್-ಚೀನ ಆರ್ಥಿಕ ಬಿಕ್ಕಟ್ಟು:

# ಇದು ನವ ಉದಾರೀಕರಣ ಆರ್ಥಿಕ ಅಭಿವೃದ್ಧಿ ಮಾದರಿಯ ಬಿಕ್ಕಟ್ಟು

**–ಪ್ರೊ. ಎಚ್. ಎ. ಶಂಕರನಾರಾಯಣ**



ಇತ್ತೀಚಿನ ದಿನಗಳಲ್ಲಿ ಗ್ರೀಸ್ ಮತ್ತು ಚೀನ ದೇಶಗಳು ಎದುರಿಸುತ್ತಿರುವ ಆರ್ಥಿಕ ಬಿಕ್ಕಟ್ಟು ಭಾರತದ ಅರ್ಥ ವ್ಯವಸ್ಥೆಯ ಮೇಲೆ ಹೇಗೆ ಪರಿಣಾಮ ಬೀರಬಹುದು ಎಂಬ ಪ್ರಶ್ನೆಗೆ ಸರಳ ಉತ್ತರಗಳನ್ನು ಹಲವು ಕಾರ್ಪೊರೇಟ್ ತಜ್ಞರು ಕೊಡುತ್ತಿದ್ದಾರೆ. ಕೆಲವರು ಗ್ರೀಸ್ ಮತ್ತು ಚೀನ ದೇಶದ ಬೆಳವಣಿಗೆಗಳು ಭಾರತದ ಅರ್ಥ ವ್ಯವಸ್ಥೆಯ ಮೇಲೆ ನೇರ ಮತ್ತು ಗಾಢ ಪರಿಣಾಮ ಬೀರುವುದಿಲ್ಲವೆಂಬ ಅಭಿಪ್ರಾಯ ವ್ಯಕ್ತಪಡಿಸಿದರೆ ಮತ್ತೆ ಹಲವರು ಅದಕ್ಕೆ ವಿರುದ್ಧವಾದ ವಿಶ್ಲೇಷಣೆ ಮಾಡುತ್ತಿದ್ದಾರೆ! ಆದರೆ ನಾವು ಇಂದು ಒಟ್ಟಾರೆ ಹಮ್ಮಿಕೊಂಡಿರುವ ಜಾಗತಿಕ ಆರ್ಥಿಕ ಅಭಿವೃದ್ಧಿ ಮಾದರಿಯ ಅಪಾಯಕಾರಿ ಪರಿಣಾಮಗಳನ್ನು ಅರ್ಥ ಮಾಡಿಕೊಂಡಾಗ ಈ ಅಭಿಪ್ರಾಯ ಮತ್ತು ವಿಶ್ಲೇಷಣೆಗಳು, ಎಷ್ಟು ಸರಳೀಕೃತ ಮತ್ತು ಗೊಂದಲದಿಂದ ಕೂಡಿದ್ದೆಂದು ನಮಗೆ ಗೊತ್ತಾಗುತ್ತದೆ. ಹಾಗಾಗಿ ನಾವು ಅನಿವಾರ್ಯವಾಗಿ ಇಂದು ಜಾಗತಿಕವಾಗಿ ಚಾಲ್ತಿಯಲ್ಲಿರುವ ನವ ಉದಾರೀಕರಣ ಆರ್ಥಿಕ ಅಭಿವೃದ್ಧಿ ಮಾದರಿ ಮತ್ತು ಅದರ ಆರ್ಥಿಕ ನೀತಿಯನ್ನು ಅರ್ಥ ಮಾಡಿಕೊಳ್ಳಲೇಬೇಕಾಗುತ್ತದೆ.

ನವ ಉದಾರೀಕರಣ ಅರ್ಥಿಕ ಅಭಿವೃದ್ಧಿ ಮಾದರಿಯು ಮೂರು ಪರಿಕಲ್ಪನೆಗಳನ್ನು ಆಧರಿಸಿದೆ. ಅವುಗಳೆಂದರೆ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ. ಉದಾರೀಕರಣವೆಂದರೆ ಆರ್ಥಿಕ ಚಟುವಟಿಕೆಗಳಲ್ಲಿ ಸರ್ಕಾರದ ಹಸ್ತಕ್ಷೇಪವನ್ನು ಕಡಿಮೆ ಮಾಡಿ, ಆರ್ಥಿಕ ಕ್ಷೇತ್ರವನ್ನು ದಕ್ಷವೆಂದು ಹೇಳಲಾಗುವ ಖಾಸಗಿ ವಲಯಗಳಿಗೆ ವಹಿಸಿಕೊಡುವ ಪ್ರಕ್ರಿಯೆ. ಈ ಉದಾರೀಕರಣದ ಪ್ರಕ್ರಿಯೆಯ ಹಿಂದಿರುವ ತರ್ಕವೆಂದರೆ, ಮೂಲಭೂತವಾಗಿ ಸರ್ಕಾರದ ಆಡಳಿತ ಅದಕ್ಷವಾಗಿದ್ದು ಈ ಅದಕ್ಷತೆಯನ್ನು ನಿವಾರಿಸಲು ಖಾಸಗಿ ಕ್ಷೇತ್ರಗಳಿಂದ ಮಾತ್ರ ಸಾಧ್ಯ. ಖಾಸಗಿ ಕ್ಷೇತ್ರದ ಕೇಂದ್ರ ಬಿಂದು ಸ್ಪರ್ಧಾತ್ಮಕ ಪೈಪೋಟಿ ಆಧಾರಿತ ಮಾರುಕಟ್ಟೆ. ಖಾಸಗಿ ಕ್ಷೇತ್ರವು, ಇಂತಹ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕ ಪೈಪೋಟಿ ಇರುವ ಕಾರಣ, ದಕ್ಷವಾಗಿ ಕಾರ್ಯ ನಿರ್ವಹಿಸಲೇಬೇಕು. ಆದ ಕಾರಣ ಉದಾರೀಕರಣ ಪ್ರಕ್ರಿಯೆಯಿಂದಾಗಿ ಅರ್ಥ ವ್ಯವಸ್ಥೆಯಲ್ಲಿ ಉತ್ಪಾದನಾ ದಕ್ಷತೆ(ಉತ್ಪಾದಕತೆ) ಹೆಚ್ಚುವುದಲ್ಲದೆ ದೇಶದಲ್ಲಿ ದೊರೆಯುವ ವಿರಳ ಸಂಪನ್ಮೂಲಗಳ ಯೋಗ್ಯ ಬಳಕೆಯಾಗಿ ತ್ವರಿತ ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿ ಸಾಧ್ಯವಾಗುತ್ತದೆ.

ಖಾಸಗೀಕರಣವೆಂದರೆ ಆರ್ಥಿಕತೆಯ ಎಲ್ಲಾ ಕ್ಷೇತ್ರಗಳಲ್ಲೂ ಖಾಸಗಿ ಕ್ಷೇತ್ರದ ಹೂಡಿಕೆಗೆ ಅವಕಾಶ ಮಾಡಿಕೊಡುವುದು ಮತ್ತು ಸರ್ಕಾರಿ ಸ್ವಾಮ್ಯದ ಉದ್ದಿಮೆಗಳನ್ನು, ದಕ್ಷತೆ ಮತ್ತು ಲಾಭದಾಯಕವನ್ನಾಗಿ ಮಾಡುವ ದೃಷ್ಟಿಯಿಂದ ಅವುಗಳಲ್ಲಿನ ಸರ್ಕಾರದ ಹೂಡಿಕೆಯನ್ನು ಖಾಸಗಿ ವಲಯಗಳಿಗೆ ಮಾರುವುದು. ಈ ಪ್ರಕ್ರಿಯೆಯಿಂದ ಉತ್ಪಾದನೆ ಮತ್ತು ಉತ್ಪಾದಕತೆ ಹೆಚ್ಚಿ ದೇಶದ ರಾಷ್ಟ್ರೀಯ ಆದಾಯ ಮತ್ತು ತಲಾ ಆದಾಯ ಹೆಚ್ಚುವುದಲ್ಲದೆ ಜನರಿಗೆ ಉದ್ಯೋಗಾವಕಾಶಗಳು ದೊರೆತು ಅವರ ಜೀವನಮಟ್ಟವೂ ಸುಧಾರಿಸುತ್ತದೆ.

ಜಾಗತೀಕರಣವೆಂದರೆ ದೇಶೀಯ ಮಾರುಕಟ್ಟೆಯನ್ನು ಅಂತರರಾಷ್ಟ್ರೀಯ ಮಾರುಕಟ್ಟೆಯೊಂದಿಗೆ ಸಮ್ಮಿಲನಗೊಳಿಸಿ ಅನಿರ್ಬಂಧಿತ ಅಂತರ ರಾಷ್ಟ್ರೀಯ ವ್ಯಾಪಾರಕ್ಕೆ ಅವಕಾಶ ಮಾಡಿಕೊಡುವುದು. ಇದರಿಂದಾಗಿ ವಿದೇಶಿ ನೇರ ಬಂಡವಾಳ ಹೂಡಿಕೆ, ಉತ್ತಮ ತಂತ್ರಜ್ಞಾನ ಮತ್ತು ಪರಿಣತಿಯ ಲಭ್ಯತೆಯುಂಟಾಗಿ ದೇಶದ ಅರ್ಥ ವ್ಯವಸ್ಥೆ ತ್ವರಿತವಾಗಿ ಅಭಿವೃದ್ಧಿ ಹೊಂದಲು ಸಹಾಯಕವಾಗುತ್ತದೆ.

ಇಪ್ಪತನೇ ಶತಮಾನದ ತೊಂಭತ್ತರ ದಶಕದ ನಂತರ ಜಾಗತಿಕವಾಗಿ ಬಹುತೇಕ ರಾಷ್ಟ್ರಗಳು ನವ ಉದಾರೀಕರಣವಾದಿ ಆರ್ಥಿಕ ಅಭಿವೃದ್ಧಿ ಮಾದರಿಯನ್ನು ಅಳವಡಿಸಿಕೊಂಡು, ಖಾಸಗಿ ಕ್ಷೇತ್ರವನ್ನು ಪ್ರೋತ್ಸಾಹಿಸುವ ಹಲವು ಆರ್ಥಿಕ ನೀತಿಗಳನ್ನು ಹಮ್ಮಿಕೊಂಡವು. ಖಾಸಗಿ ಉದ್ಯಮಗಳ ಹೂಡಿಕೆಯನ್ನು ಪ್ರೋತ್ಸಾಹಿಸಲು ಉದ್ಯಮಗಳ ತೆರಿಗೆ ಮತ್ತು ಸಾಲಕ್ಕೆ ಸಂಬಂಧಿಸಿದಂತೆ ಎಲ್ಲ ರೀತಿಯ ರಿಯಾಯಿತಿಗಳನ್ನು ಕೊಡಲಾಯಿತು. ಮುಕ್ತ ವ್ಯಾಪಾರ ನೀತಿಯ ಮೂಲಕ ಜಾಗತಿಕವಾಗಿ ಖಾಸಗಿ ಬಂಡವಾಳ ಈ ಉದ್ಯಮಗಳಿಗೆ ಸುಲಭದಲ್ಲಿ ದೊರೆಯುವದಕ್ಕೆ ಅನುಕೂಲ ಮಾಡಿಕೊಡಲಾಯಿತು. ಕೈಗಾರಿಕಾ ಸಂಬಂಧದ ನೀತಿಗಳನ್ನು ಉದ್ಯಮ ಸ್ನೇಹಿಯನ್ನಾಗಿ ಮಾಡಿ ಕಾರ್ಮಿಕ ಸಂಘಗಳನ್ನು ಹತ್ತಿಕ್ಕಿ ಕಾರ್ಮಿಕರ ಹಕ್ಕನ್ನು ಮೊಟಕುಗೊಳಿಸಲಾಯಿತು. ಸುಮಾರು ಇಪ್ಪತ್ತೈದು ವರ್ಷಗಳಿಂದ ಈ ನಿಯಮಗಳನ್ನು, ನವ ಉದಾರೀಕರಣದ ಆರ್ಥಿಕ ಅಭಿವೃದ್ಧಿ ಮಾದರಿಯ ಆಧಾರ ನೀತಿಯಾಗಿ, ಜಾಗತಿಕವಾಗಿ ಎಲ್ಲಾ ದೇಶಗಳು – ಭಾರತವನ್ನೂ ಒಳಗೊಂಡು–ಸ್ಪರ್ಧಾತ್ಮಕವಾಗಿ ಅಳವಡಿಸಿಕೊಂಡು ಬಂದಿವೆ. ಅದರ ಪರಿಣಾಮಗಳನ್ನು ನಾವಿಂದು ಎದುರಿಸುತ್ತಿದ್ದೇವೆ.

ಈ ಇಪ್ಪತ್ತೈದು ವರ್ಷಗಳ ನವ ಉದಾರೀಕರಣ ಆರ್ಥಿಕ ಅಭಿವೃದ್ಧಿ ನೀತಿಯ ಪ್ರಮುಖ ಪರಿಣಾಮವೆಂದರೆ ಜಾಗತಿಕವಾಗಿ ಆದಾಯಗಳ ಅಸಮಾನತೆ ಹೆಚ್ಚಿ, ಮಾರುಕಟ್ಟೆಯಲ್ಲಿ ಒಟ್ಟಾರೆ ಬೇಡಿಕೆ ಕುಸಿತಕ್ಕೆ ಕಾರಣವಾಗಿರುವುದು. ಈ ಬೇಡಿಕೆ ಕುಸಿತದ ಪರಿಣಾಮಗಳನ್ನೇ ಗ್ರೀಸ್ ಮತ್ತು ಚೀನ ದೇಶಗಳು ಇಂದು ಎದುರಿಸುತ್ತಿರುವುದು. ಈ ಹಿನ್ನೆಲೆಯಲ್ಲಿ, ಚೀನ ಮತ್ತು ಗ್ರೀಸ್ ದೇಶಗಳ ಆರ್ಥಿಕ ಬಿಕ್ಕಟ್ಟು ಭಾರತದ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ನಾವೀಗ ಅರ್ಥಮಾಡಿಕೊಳ್ಳಬೇಕಿದೆ.

ಕೆಲವು ವಿಶ್ಲೇಷಕರ ಪ್ರಕಾರ ಸದ್ಯದ ಪರಿಸ್ಥಿತಿಯಲ್ಲಿ ಭಾರತದ ಉದ್ಯಮಗಳು ಚೀನಿ ಉದ್ಯಮಗಳೊಂದಿಗೆ ಹೆಚ್ಚು ಸಮಾವೇಶಗೊಳ್ಳದ ಕಾರಣ ಇತ್ತೀಚಿನ ಚೀನದ ಆರ್ಥಿಕ ಹಿಂಜರಿತವು ಭಾರತದ ಅರ್ಥ ವ್ಯವಸ್ಥೆಯ ಮೇಲೆ ಗಾಢವಾದ ಪರಿಣಾಮವನ್ನು ಬೀರುವುದಿಲ್ಲ. ಭಾರತದ ರಫ್ತು ನಮ್ಮ ಒಟ್ಟಾರೆ ದೇಶೀಯ ಉತ್ಪನ್ನದ ಶೇ. ೨೦ ಇದ್ದು, ಇದು ಸಣ್ಣ ಭಾಗ ಮಾತ್ರವಾಗಿದೆ. ಅದೂ ಅಲ್ಲದೆ ಭಾರತದ ರಫ್ತು ವೈವಿಧ್ಯತೆಯಿಂದ ಕೂಡಿದ್ದು ಸೇವಾ ಕ್ಷೇತ್ರದ ರಫ್ತಿನ ಕೊಡುಗೆ ಶೇ. ೫೦ ಇರುವುದರಿಂದ ಇತರ ಏಶಿಯಾ ಖಂಡದ ರಾಷ್ಟ್ರಗಳಂತೆ ನಾವು ಸರಕಿನ ರಫ್ತಿಗಾಗಿ ಚೀನ ದೇಶವನ್ನು ಹೆಚ್ಚಾಗಿ ಅವಲಂಬಿಸಬೇಕಿಲ್ಲ. ಬದಲಿಗೆ ಚೀನದ ಆರ್ಥಿಕ ಹಿಂಜರಿತದ ಕಾರಣದಿಂದಾಗಿ ಸರಕುಗಳ ಬೆಲೆ ಇಳಿಮುಖವಾಗುವುದರಿಂದ ನಾವು ಆ ದೇಶದ ಸರಕುಗಳಾದ ಖನಿಜ ಮತ್ತು ತೈಲವನ್ನು ಕಡಿಮೆ ದರದಲ್ಲಿ ಆಮದು ಮಾಡಿಕೊಳ್ಳಬಹುದು. ಕಡಿಮೆ ಬೆಲೆಯಲ್ಲಿ ಸರಕುಗಳನ್ನು ಆಮದು ಮಾಡಿಕೊಳ್ಳುವ ಕಾರಣದಿಂದ ನಾವು ನಮ್ಮ ದೇಶದ ಚಾಲ್ತಿ ಬಾಬ್ತಿನ ಖರ್ಚನ್ನು ನಿಯಂತ್ರಿಸುವುದರ ಜೊತೆಗೆ ಉತ್ಪಾದನಾ ವೆಚ್ಚವನ್ನೂ ಕಡಿಮೆ ಮಾಡಬಹುದು. ಇನ್ನೊಂದು ಪ್ರಮುಖ ಅನುಕೂಲವೆಂದರೆ ಈಗ ಬಹುತೇಕ ಅಭಿವೃದ್ಧಿಶೀಲ ಮಾರುಕಟ್ಟೆಯ ಅರ್ಥ ವ್ಯವಸ್ಥೆಗಳು ಆರ್ಥಿಕ ಸಂಕಷ್ಟಗಳನ್ನು ಎದುರಿಸುತ್ತಿರುವ ಹಿನ್ನೆಲೆಯಲ್ಲಿ ಹೆಚ್ಚು ಸ್ಥಿರವಾದ ಭಾರತದ ಮಾರುಕಟ್ಟೆ ಜಾಗತಿಕವಾಗಿ ಹೆಚ್ಚು ಆಕರ್ಷಣೀಯವಾಗಬಹುದು.

ಆದರೆ ನಾವು ಒಂದಂಶವನ್ನು ಮರೆಯಬಾರದು. ಅದೆಂದರೆ ಸದ್ಯದ ಪರಿಸ್ಥಿತಿಯಲ್ಲಿ ಭಾರತ ಚೀನವನ್ನು ಆರ್ಥಿಕವಾಗಿ ಹಿಮ್ಮೆಟ್ಟಲು ಸಾಧ್ಯವಿಲ್ಲವೆಂಬುದು. ಗಾತ್ರದಲ್ಲಿ ಚೀನದ ಆರ್ಥಿಕತೆ, ಭಾರತದ ಆರ್ಥಿಕತೆಗಿಂತ ಬಹಳಷ್ಟು ಅಗಾಧವಾಗಿದೆ. ಆದುದರಿಂದ ಅದು ಇನ್ನು ಮುಂದೆ ಭಾರತದ ಅರ್ಥ ವ್ಯವಸ್ಥೆಗಿಂತ ಕಡಿಮೆ

ದರದಲ್ಲಿ ಬೆಳೆದರೂ ತನ್ನ ಒಟ್ಟಾರೆ ದೇಶೀಯ ಉತ್ಪನ್ನದ ಕೊಡುಗೆಯಲ್ಲಿ ಭಾರತವನ್ನು ಮೀರಿಸಬಹುದು. ಭಾರತ ಮತ್ತು ಚೀನ ದೇಶಗಳ ನಡುವೆ ಜನಸಂಖ್ಯೆಯ ಗಾತ್ರದಲ್ಲಿ ಅಂತಹ ಅಂತರವಿಲ್ಲ. ಆದರೆ ೨೦೧೪ರಲ್ಲಿ ಚೀನದ ಒಟ್ಟು ದೇಶೀಯ ಉತ್ಪನ್ನ ೧೦.೩ ಟ್ರಿಲಿಯನ್ ಅಮೆರಿಕನ್ ಡಾಲರ್ ಇದ್ದರೆ, ಭಾರತದ ಒಟ್ಟು ದೇಶೀಯ ಉತ್ಪನ್ನ ೨ ಟ್ರಿಲಿಯನ್ ಅಮೆರಿಕನ್ ಡಾಲರ್ ಮಾತ್ರ! ಇದರ ಅರ್ಥ ಭಾರತದ ತಲಾ ಒಟ್ಟಾರೆ ದೇಶೀಯ ಆದಾಯ ಚೀನದ ತಲಾ ಒಟ್ಟಾರೆ ದೇಶೀಯ ಆದಾಯಕ್ಕಿಂತ ಬಹಳ ಕಡಿಮೆ ಇದ್ದು, ಇದು ನಮ್ಮ ದೇಶದ ಕಡಿಮೆ ಜೀವನಮಟ್ಟ ಮತ್ತು ಕೆಳಮಟ್ಟದ ಮಾನವ ಅಭಿವೃದ್ಧಿ ಸೂಚ್ಯಂಕದ ಮೂಲಕ ಪ್ರತಿಬಿಂಬಿತವಾಗುತ್ತಿದೆ. ಮುಂದಿನ ೩ ವರ್ಷಗಳು ಚೀನದ ಆರ್ಥಿಕತೆ ಶೇಕಡ ೫ ರ ದರದಲ್ಲಿ ಬೆಳೆದರೂ ಅದು ಒಟ್ಟಾರೆ ಜಾಗತಿಕ ದೇಶೀಯ ಉತ್ಪನ್ನಕ್ಕೆ ೦.೮-೦.೯% ರಷ್ಟು ಕೊಡುಗೆ ಕೊಡಲಿದೆ. ಇದಕ್ಕೆ ಪ್ರತಿಯಾಗಿ ಭಾರತ ಇದೇ ಕಾಲಾವಧಿಯಲ್ಲಿ ಸರಾಸರಿ ೭% ರಷ್ಟು ಬೆಳವಣಿಗೆ ಸಾಧಿಸಿದರೂ ಒಟ್ಟಾರೆ ಜಾಗತಿಕ ದೇಶೀಯ ಉತ್ಪನ್ನಕ್ಕೆ ಅದರ ಕೊಡುಗೆ ೦.೫% ಮಾತ್ರ! ಆದುದರಿಂದ ಚೀನ ಮುಂದಿನ ವರ್ಷಗಳಲ್ಲಿ ಸರಕು ಮಾರುಕಟ್ಟೆ ಬೆಲೆಗಳ ವಿಷಯದಲ್ಲಾಗಲಿ ಅಥವಾ ಇನ್ಯಾವುದೇ ವಿಷಯದಲ್ಲಾಗಲೀ ಉದಯೋನ್ಮುಖ ಮಾರುಕಟ್ಟೆಗಳಲ್ಲಿ ಭಾರತಕ್ಕಿಂತ ಹೆಚ್ಚು ಪರಿಣಾಮಕಾರಿ ಪಾತ್ರ ವಹಿಸುವ ಸಾಮರ್ಥ್ಯ ಹೊಂದಿದೆ.

ಭಾರತ ಮತ್ತು ಚೀನ ಆರ್ಥಿಕತೆಗಳ ನಡುವೆ ಮೂಲಭೂತ ಸೌಕರ್ಯಗಳ ಗುಣಮಟ್ಟ ಮತ್ತು ಲಭ್ಯತೆಗೆ ಸಂಬಂಧಿಸಿದಂತೆ ಗಣನೀಯ ವ್ಯತ್ಯಾಸಗಳಿವೆ. ಮಾತ್ರವಲ್ಲದೇ ಚೀನ ದೇಶವು ಅಂತರ್ರಾಷ್ಟ್ರೀಯವಾಗಿ ಮಾನ್ಯತೆ ಪಡೆದ ಬಹು ದೊಡ್ಡ ಕೈಗಾರಿಕಾ ಅರ್ಥ ವ್ಯವಸ್ಥೆಯನ್ನು ಹೊಂದಿದ್ದು, ಭಾರತದ ಉತ್ಪಾದನಾ ಕ್ಷೇತ್ರ ಇನ್ನೂ ಬಹುತೇಕ ದೇಶೀಯ ಮಾರುಕಟ್ಟೆಯನ್ನು ಅವಲಂಬಿಸಿದೆ. ಆದುದರಿಂದ ಭಾರತ ಚೀನದೊಡನೆ ಪೈಪೋಟಿ ನಡೆಸಲು ಗಣನೀಯವಾಗಿ ತನ್ನ ಉತ್ಪಾದನಾ ವಲಯವನ್ನು ಬಲಗೊಳಿಸಿ ಜಾಗತಿಕ ಉತ್ಪಾದನಾ ರಫ್ತಿನ ಕೇಂದ್ರವಾಗಬೇಕಿದೆ. ಆದರೆ ಭಾರತಕ್ಕೆ ಈ ಆಕಾಂಕ್ಷೆ ಇದ್ದರೂ ಸದ್ಯದ ಸಂದರ್ಭದಲ್ಲಿ ಜಾಗತಿಕವಾಗಿ ಬೇಡಿಕೆ ಕ್ಷೀಣಿಸುತ್ತಿರುವ ಹಿನ್ನೆಲೆಯಲ್ಲಿ ಮತ್ತು ನರೇಂದ್ರ ಮೋದಿಯವರ ಆರ್ಥಿಕ ನೀತಿಗೆ ರಾಜಕೀಯವಾಗಿ ಪ್ರಬಲ ವಿರೋಧವಿರುವ ಪರಿಸ್ಥಿತಿಯಲ್ಲಿ ಈ ಯೋಜನೆಗಳು ಸದ್ಯಕ್ಕೆ ಕಾರ್ಯಗತವಾಗಲಾರವು. ಉದಾಹರಣೆಗೆ ಮೋದಿ ಸರ್ಕಾರಕ್ಕೆ ಪ್ರಬಲ ಬಹುಮತವಿದ್ದರೂ ಉತ್ಪಾದನಾ ಕ್ಷೇತ್ರಕ್ಕೆ ಪೂರಕವಾದ ಭೂಸ್ವಾಧೀನ ಕಾಯ್ದೆ ಮತ್ತು ಕಾರ್ಪೊರೇಟ್ ಸ್ನೇಹಿ ಕೈಗಾರಿಕಾ ಸಂಬಂಧ ಕಾಯ್ದೆ(ಜಿ.ಎಸ್.ಟಿ) ಅನುಷ್ಠಾನಗೊಳಿಸಲು ಸಾಧ್ಯವಾಗದಿರುವುದು.

ಗ್ರೀಸ್ ದೇಶದ ಸಾಲದ ಬಿಕ್ಕಟ್ಟು ಕೂಡ ನವ ಉದಾರೀಕರಣ ಅಭಿವೃದ್ಧಿ ಮಾದರಿಯ ಬಿಕ್ಕಟ್ಟಿನ ಭಾಗವೇ. ಇದು ನಮ್ಮ ಸಾಫ್ಟ್‌ವೇರ್ ಮತ್ತು ಎಂಜಿನಿಯರಿಂಗ್ ರಫ್ತುಗಳ ಮೇಲೆ ನಕಾರಾತ್ಮಕ ಪರಿಣಾಮವನ್ನು ಪರೋಕ್ಷವಾಗಿ ಬೀರಬಹುದು. ಈ ಬಿಕ್ಕಟ್ಟಿನ ಪರಿಣಾಮ ಯುರೋ ನಾಣ್ಯ ಬಲಹೀನವಾಗಿ ಯು.ಕೆ., ಇಟಲಿ, ಟರ್ಕಿ, ಫ್ರಾನ್ಸ್ ಮುಂತಾದ ದೇಶಗಳಿಗೆ ನಾವು ಮಾಡುವ ರಫ್ತು ಕುಂಠಿತಗೊಳ್ಳಬಹುದು. ಯುರೋಪಿನ ಬಡ್ಡಿದರ ಸ್ಥಿರಗೊಂಡು ನಮ್ಮ ದೇಶದ ಬಂಡವಾಳ ಯುರೋಪಿಗೆ ಹರಿದು ಹೋಗುವ ಸಾಧ್ಯತೆ ಇದ್ದು ಇದರಿಂದ ನಮ್ಮ ಆರ್ಥಿಕತೆ ಅಸ್ಥಿರಗೊಳ್ಳಬಹುದು.

ಒಟ್ಟಾರೆ ಸಾರಾಂಶವೆಂದರೆ, ಚೀನ ಮತ್ತು ಗ್ರೀಸ್ ಬಿಕ್ಕಟ್ಟು ನವ ಉದಾರೀಕರಣವಾದಿ ಅಭಿವೃದ್ಧಿ ಮಾದರಿ ಅಂತಿಮ ಅವಸಾನದ ಹಂತವನ್ನು ತಲುಪಿರುವುದನ್ನು ಸಾದರಪಡಿಸುತ್ತಿದೆ. ಈ ಬಿಕ್ಕಟ್ಟಿನಿಂದ ಭಾರತವನ್ನು ಬೇರ್ಪಡಿಸಲು ಸಾಧ್ಯವೇ ಇಲ್ಲ. ಇದಕ್ಕೆ ಕಾರಣ ಭಾರತ ಈ ಅಭಿವೃದ್ಧಿ ಮಾದರಿಯನ್ನು ಅಳವಡಿಸಿಕೊಂಡ ಅಗ್ರಗಣ್ಯ ದೇಶ ಹಾಗೂ ಈ ಅಭಿವೃದ್ಧಿ ಮಾದರಿಯ ಜಾಗತಿಕ ಬಿಕ್ಕಟ್ಟಿನ ಪ್ರಮುಖ ಅಂಗ! ನಾವು ಈಗ ಹಲವಾರು ಆರ್ಥಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ನಮ್ಮ ಕೃಷಿ ಮತ್ತು ಕೈಗಾರಿಕಾ ಕ್ಷೇತ್ರಗಳು ಬಿಕ್ಕಟ್ಟನ್ನು ಎದುರಿಸುತ್ತಿವೆ. ಹಣದುಬ್ಬರ ಏರುತ್ತಿದೆ. ವಿದೇಶಿ ವಿನಿಮಯ ದರ ಕುಗ್ಗುತ್ತಿದೆ. ನಿರುದ್ಯೋಗ ಹೆಚ್ಚುತ್ತಿದೆ. ಹೆಚ್ಚೆಂದರೆ ಇದು ಉದ್ಯೋಗ ನಿರ್ಮಿಸದ ಆರ್ಥಿಕ ಬೆಳವಣಿಗೆ ಎನ್ನಿಸಿಕೊಂಡಿದೆ. ಈ ಸಮಸ್ಯೆಗಳೆಲ್ಲವೂ ಚೀನ ಮತ್ತು ಗ್ರೀಸ್ ದೇಶಗಳ ಆರ್ಥಿಕ ಬಿಕ್ಕಟ್ಟನ್ನು ಹೊರತುಪಡಿಸಿದರೂ ಇಂದು ನಮ್ಮಲ್ಲಿ ಇರುವಂತಹ ಮತ್ತು ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚು ಉಲ್ಬಣಗೊಳ್ಳುವಂತಹ ಸಮಸ್ಯೆಗಳು. ಈ ಹಿನ್ನೆಲೆಯಲ್ಲಿ ಚೀನ ಮತ್ತು ಗ್ರೀಸ್ ದೇಶಗಳ ಆರ್ಥಿಕ ಬಿಕ್ಕಟ್ಟು ನಮ್ಮ ದೇಶದ ಅರ್ಥ ವ್ಯವಸ್ಥೆ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂದು ಸೀಮಿತವಾಗಿ ವಿಶ್ಲೇಷಿಸಿದರೆ ನಾವು ಈಗ ಎದುರಿಸುತ್ತಿರುವ ಸಮಸ್ಯೆಯನ್ನು ಸರಿಯಾಗಿ ಗ್ರಹಿಸಲು ಸಾಧ್ಯವಾಗದು. ಆದ ಕಾರಣ ಜಾಗತಿಕವಾಗಿ ಚಾಲ್ತಿಯಲ್ಲಿರುವ ಸಮಕಾಲೀನ ನವ ಉದಾರೀಕರಣವಾದಿ ಆರ್ಥಿಕ ಅಭಿವೃದ್ಧಿ ಮಾದರಿಯ ಇತಿ ಮಿತಿಗಳನ್ನು ನಾವಿಂದು ವೈಜ್ಞಾನಿಕವಾಗಿ ಮತ್ತು ತಾರ್ಕಿಕವಾಗಿ ಅರ್ಥಮಾಡಿಕೊಳ್ಳಬೇಕಿದೆ ಮತ್ತು ಅಗತ್ಯ ಮಾರ್ಪಾಡುಗಳಿಗೆ ಸಿದ್ಧರಾಗಬೇಕು.



**(ಮೂಲತಃ ಅರ್ಥಶಾಸ್ತ್ರ ಸಂಶೋಧಕರೂ, ಅಧ್ಯಾಪಕರೂ ಆದ ಲೇಖಕ ಡಾ. ಎಚ್.ಎ. ಶಂಕರನಾರಾಯಣ, ಮ್ಯಾನೇಜ್‌ಮೆಂಟ್ ತಜ್ಞರೂ ಆಗಿದ್ದು, ಈಗ ಬೆಂಗಳೂರಿನಲ್ಲಿ ನೆಲೆಸಿ ಈ ಕ್ಷೇತ್ರಗಳಲ್ಲಿ ಸ್ವತಂತ್ರ ಸಂಶೋಧನೆಗಳಲ್ಲಿ ತೊಡಗಿದ್ದಾರೆ.)**

---

**೨ನೇ ಪುಟದಿಂದ)**

ಮಾತಾಡುವಾಗ, ಅವರ ದಕ್ಷತೆಯನ್ನೂ ಜೊತೆಗೇ ಪರಿಗಣಿಸಬೇಕು ಎನ್ನಲು ಈ ಮಾತು ಹೇಳಿದೆ.

ದುರ್ದೈವವೆಂದರೆ, ಅರಸು ಆಳುತ್ತಿದ್ದಾಗ ಇಡೀ ನಾಡಿನಲ್ಲಿ ಕಾಂಗ್ರೆಸ್ ವಿರೋಧಿ ಬಿರುಗಾಳಿ ಬೀಸುತ್ತಿತ್ತು. ಆ ಕಾಂಗ್ರೆಸ್ ವಿರೋಧಿ ಅಲೆಯಿಂದ ದೊಡ್ಡ ಅನ್ಯಾಯವಾಗಿದ್ದು ಅರಸರಿಗೆ ಮಾತ್ರ. ಯಾಕೆಂದರೆ ಆ ವಾತಾವರಣದಲ್ಲಿ ಅವರ ಆಡಳಿತದ ವಸ್ತುನಿಷ್ಠ ಮೌಲ್ಯಮಾಪನವಿರಲಿ, ಒಂದೇ ಒಂದು ಸಹಾನುಭೂತಿಯ ಮಾತೂ ಹೊರಡುವುದು ಸಾಧ್ಯವಿರಲಿಲ್ಲ. ಜೊತೆಗೆ ನಮ್ಮ ಕಂದಾಚಾರಿ ಸಮಾಜವೂ ಅವರ ಎಲ್ಲ ಮಹತ್ವದ ಕಾರ್ಯಕ್ರಮಗಳಿಗೆ ತೊಡರುಗಾಲು ಹಾಕುತ್ತಲೇ ಇತ್ತು. ಆ ಸಾರ್ವತ್ರಿಕ ಅಸಹನೆಯ ಅಂಗವಾಗಿಯೇ ಅವರ ಎಲ್ಲ ಸಾಧನೆಗಳೂ ಮರೆಯಾಗಿ ಭ್ರಷ್ಟಾಚಾರ ಮತ್ತು ಅವರು ಪೋಷಿಸಿದ ಗೂಂಡಾಗಿರಿಗಳೇ ಅರಸು ಎಂಬ ವ್ಯಕ್ತಿಯ ಲಾಂಛನಗಳಾಗಿ ಬಿಂಬಿತವಾದವು. ಆ ವಿಷಯಗಳು ಕೂಡ ಖಂಡಿತ ಚರ್ಚಾರ್ಹವೇ. ಆದರೆ ಈಗಲಾದರೂ, ಅವರ ಜನ್ಮ ಶತಮಾನೋತ್ಸವದ ನೆಪದಲ್ಲಾದರೂ, ತಣ್ಣಗೆ ಅವರ ಒಟ್ಟಾರೆ ಆಡಳಿತದ ಮೌಲ್ಯ ನಿಷ್ಕರ್ಷೆ ನಡೆಯಬಾರದೇ?



**(ನಮ್ಮ ಹಿರಿಯ ಚಿಂತಕರೂ, ಲೇಖಕರೂ ಮತ್ತು ಪತ್ರಕರ್ತರೂ ಆದ ಎನ್.ಎಸ್. ಶಂಕರ್, ಕಥಾ ಮತ್ತು ಸಾಕ್ಷ್ಯ ಚಿತ್ರ ನಿರ್ದೇಶನದಲ್ಲೂ ಹೆಸರು ಮಾಡಿರುವ ಪ್ರತಿಭಾವಂತರು.)**

**೫ನೇ ಪುಟದಿಂದ)**

ನಿಮ್ಮ ಅಭಿಪ್ರಾಯದ ಬಗ್ಗೆ ನನ್ನ ಸಹಮತವಿದೆ. ಇತರೆ ಧಾರ್ಮಿಕ ನಾಯಕರೂ ಹೀಗೆ ಬದಲಾದರೆ ಪರಿಸ್ಥಿತಿ ಸುಧಾರಿಸೀತೇನೋ! ವಿಶೇಷ ಸಂಚಿಕೆಯ ಮುಖಪುಟದ ಕಲ್ಪನೆ ಹಾಗೂ ವಿನ್ಯಾಸ ಕೂಡ ಚೆನ್ನಾಗಿದ್ದು, ಹಾಗೆ ಆಗುವುದೇ ಎಂಬುದನ್ನು ಕಾದುನೋಡಬೇಕಷ್ಟೆ. ನಿಮಗೆ ಅಭಿನಂದನೆಗಳು.

**–ಡಾ. ತೀ.ನಂ. ಶಂಕರನಾರಾಯಣ,** ಶಿವಮೊಗ್ಗ

ಕಾಲೇಜು ಶಿಕ್ಷಣ ಕುರಿತ ಮೂರೂ ಲೇಖನಗಳು(*ಸಮಕಾಲೀನ* ಸೆಪ್ಟೆಂಬರ್ ಸಂಚಿಕೆ) ವಿಚಾರಪ್ರಚೋದಕವಾಗಿದ್ದವು. ಸೆಮಿಸ್ಟರ್ ಪದ್ಧತಿ ಸೇರಿದಂತೆ ಕಾಲೇಜು ಶಿಕ್ಷಣ ಕ್ರಮದಲ್ಲಿ ಮಾಡಿರುವ ಅನೇಕ ಬದಲಾವಣೆಗಳು ಮತ್ತು ಅಧ್ಯಾಪಕರುಗಳ ಸಂಬಳಗಳ ಇತ್ತೀಚಿನ ವಿಪರೀತ ಏರಿಕೆ ಶಿಕ್ಷಣದ ಗುಣಮಟ್ಟದ ಮೇಲೆ ತೀವ್ರ ಪ್ರತಿಕೂಲ ಪರಿಣಾಮಗಳನ್ನು ಬೀರಿದೆಯೆಂದೇ ಹೇಳಬೇಕು. ಮೊನ್ನೆ ಕಾಲೇಜೊಂದರಲ್ಲಿ ನಡೆದ ಯುಜಿಸಿ ಪ್ರಾಯೋಜಿತವೆಂದು ಹೇಳಲಾದ ರಾಷ್ಟ್ರಮಟ್ಟದ ವಿಚಾರ ಸಂಕಿರಣವೊಂದಕ್ಕೆ ಓರ್ವ ನಿವೃತ್ತ ಅಧ್ಯಾಪಕನಾಗಿ ಹೋಗಿ ಕೂತುಬಂದು ಸುಸ್ತಾಗಿದ್ದೇನೆ. ಅಲ್ಲಿ ಕಂಡ ಬೌದ್ಧಿಕ ದಾರಿದ್ರ್ಯ ಗಾಬರಿಗೊಳಿಸುವಂತಿತ್ತು. ಸರ್ಕಾರವೋ, ನೀವೇ ಸೂಚಿಸಿದಂತೆ, ಶೈಕ್ಷಣಿಕ ಅರ್ಹತೆ ಅಥವಾ ಆಡಳಿತ ದಕ್ಷತೆಗಳಾವುವನ್ನೂ ಲೆಕ್ಕಿಸದೆ ಜಾತಿ ಕೋಟಾದಡಿಯಲ್ಲಿ ಕುಲಪತಿಗಳನ್ನು ನೇಮಿಸಿ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸುತ್ತಿದೆ. ಇದೆಲ್ಲದರ ಪರಿಣಾಮವಾಗಿ ಕಾಲೇಜು ಶಿಕ್ಷಣ ಎನ್ನುವುದು ಪಾತಾಳ ಸ್ಥಿತಿ ಮುಟ್ಟುತ್ತಿದೆ. ಇದನ್ನೆಲ್ಲ ಯಾರಿಗೆ ಹೇಳುವುದು?

**–ಡಾ. ಎಂ.ಆರ್. ಲಕ್ಷ್ಮಣಮೂರ್ತಿ,** ಬೆಂಗಳೂರು

# ಸ್ಮಾರ್ಟ್ ಸಿಟಿ: ಭ್ರಮೆ ಮತ್ತು ಆತಂಕಗಳು: ತುಮಕೂರಿನ ಒಂದು ನೋಟ

–ಮಲ್ಲಿಕಾರ್ಜುನ ಹೊಸಪಾಳ್ಯ

**ತು**ಮಕೂರು ಸ್ಮಾರ್ಟ್ ಸಿಟಿ ಯೋಜನೆಗೆ ಸೇರ್ಪಡೆಯಾಗುತ್ತದೆ ಎಂಬ ಗುಸುಗುಸು ಆರಂಭವಾದಾಗಲಿಂದಲೂ ನಗರದಲ್ಲಿ ಕೇಳಿಬರುತ್ತಿರುವ ಪ್ರಮುಖ ಮಾತೆಂದರೆ ರಿಯಲ್ ಎಸ್ಟೇಟ್ ಏರುತ್ತದೆ, ಸೈಟು–ಮನೆಗಳು ದುಬಾರಿಯಾಗುತ್ತವೆ ಎಂಬುದೇ ಆಗಿದೆ. ಯಾರ ಬಾಯಲ್ಲಿ ನೋಡಿದರೂ ಈ ಕುರಿತೇ ಚರ್ಚೆ. ಸ್ಮಾರ್ಟ್ ಸಿಟಿ ಹಾಗೂ ರಿಯಲ್ ಎಸ್ಟೇಟ್ ಪದಗಳು ಒಂದಕ್ಕೊಂದು ಮಿಳಿತವಾದಂತೆ ಆಗಿಬಿಟ್ಟಿದೆ.

ಇದಕ್ಕೆ ಪುಷ್ಟಿ ನೀಡುವಂತೆ ಸ್ಮಾರ್ಟ್ ಸಿಟಿ ಬಗ್ಗೆ ಬರುವ ಜಾಹೀರಾತುಗಳು ಹಾಗೂ ಲೇಖನಗಳಲ್ಲಿ ಆಕರ್ಷಕ ಬಹುಮಹಡಿ ಕಟ್ಟಡಗಳು, ನಯಸ್ಸಾದ ರಸ್ತೆಗಳು, ಮೆಟ್ರೋ ರೈಲು, ಕೃತಕ ಹಸುರು ಲಾನ್ ಉಳ್ಳ ಚಿತ್ರಗಳನ್ನೇ ಬಳಸಿರುತ್ತಾರೆ, ಅಲ್ಲೆಲ್ಲೂ ಮನುಷ್ಯರ ಸುಳಿವೇ ಇರುವುದಿಲ್ಲ. ಇದ್ದರೂ ಅವರು ಖಂಡಿತವಾಗಿ ಸೂಟು ಬೂಟು ಧರಿಸಿರುತ್ತಾರೆ. ಭಾರತ ಸರ್ಕಾರದ ನಗರಾಭಿವೃದ್ಧಿ ಮಂತ್ರಾಲಯದ ಮಿಷನ್ ಸ್ಟೇಟ್‌ಮೆಂಟ್ ಪುಸ್ತಕದಲ್ಲೂ ಇಂತಹುದೇ ಚಿತ್ರವಿದೆ.

ಚೆನ್ನಾಗಿ ಡ್ರೆಸ್ ಮಾಡಿಕೊಂಡವರನ್ನು 'ಸಕತ್ ಸ್ಮಾರ್ಟ್' ಎನ್ನುವುದು ರೂಢಿ. ಹಳ್ಳಿಗರನ್ನು ಅಥವಾ ರೈತರನ್ನು ಯಾರಾದರೂ ಸ್ಮಾರ್ಟ್ ಎನ್ನುತ್ತಾರಾ? ಎದೆಯಲ್ಲಿ ಅಪಾರ ಮಾನವೀಯತೆ ಹೊಂದಿದ್ದು ನೋಡಲು ಹೆಂಗೆಂಗೋ ಇರುವವರನ್ನು ಯಾರೂ ಸ್ಮಾರ್ಟ್ ಅಂದಿದ್ದು ಕಾಣೆ. ಈ ಸ್ಮಾರ್ಟ್ ಸಿಟಿಯ ಪ್ರಸ್ತುತ ಸ್ವರೂಪವೂ ಹಾಗೇ ಕಾಣುತ್ತಿದೆ, ಮಾನವೀಯತೆ, ಎಲ್ಲರನ್ನೂ ಒಳಗೊಂಡು ಮುನ್ನಡೆಯುವ ಗುರಿ, ನಗರದ ಸೂಕ್ಷ್ಮಗಳನ್ನೂ ಲಕ್ಷ್ಯಕ್ಕೆ ತೆಗೆದುಕೊಳ್ಳುವ ಇರಾದೆ ಇದರಲ್ಲಿ ಇದ್ದಂತಿಲ್ಲ. ಎತ್ತರೆತ್ತರ ಕಟ್ಟಡಗಳು, ಅಗಲವಾದ ರಸ್ತೆಗಳು, ಮೇಲ್ ಸೇತುವೆಗಳು, ಮಾಲ್‌ಗಳ ನಿರ್ಮಾಣವೇ ಈಗ ನಡೆಯುತ್ತಿರುವ ಚರ್ಚೆ.

ಇದು ಐದು ವರ್ಷದ ಯೋಜನೆ. ಸಾವಿರ ಕೋಟಿಗಳ ಬಾಬತ್ತು. ಸುಸಜ್ಜಿತ ನಗರ ನಿರ್ಮಾಣಕ್ಕಾಗಿ ಕನಿಷ್ಟ ೨೫೦ ಎಕರೆ ಅಗತ್ಯವಿದೆ ಎಂದು ಹೇಳಲಾಗುತ್ತಿದೆ. ತುಮಕೂರು ನಗರದ ವ್ಯಾಪ್ತಿಯಲ್ಲೆಲ್ಲೂ ಇಷ್ಟು ಜಾಗ ಲಭ್ಯವಿಲ್ಲ, ಏಕೆಂದರೆ ಕಳೆದ ಏಳೆಂಟು ವರ್ಷಗಳಿಂದಲೂ ತುಮಕೂರು ವಿಶ್ವವಿದ್ಯಾಲಯಕ್ಕೆ ೫೦ ಎಕರೆ ಜಾಗ ಹೊಂಚಿಕೊಳ್ಳಲೂ ಸಾಧ್ಯವಾಗಿಲ್ಲ. ಭೂಮಿ ಬೇಕೇ ಬೇಕು ಎನ್ನುವುದಾದರೆ ಅದಕ್ಕೆ ಮೊದಲ ಬಲಿ ಕೆರೆಗಳು. ಈಗಾಗಲೇ ತುಮಕೂರಿನ ಹತ್ತಕ್ಕೂ ಹೆಚ್ಚು ಕೆರೆಗಳು ನಿರ್ನಾಮವಾಗಿವೆ. ಇನ್ನು ಐದು ವರ್ಷಗಳ ನಂತರ ಸ್ಮಾರ್ಟ್ ಸಿಟಿ ಹೆಸರಿನಲ್ಲಿ ಮರಳೂರು ಕೆರೆ, ಅಕ್ಕತಂಗಿ ಕೆರೆ, ಕ್ಯಾತ್ಸಂದ್ರ ಕೆರೆ, ದೇವರಾಯಪಟ್ಟಣ ಕೆರೆ, ಹೆಬ್ಬಾಕ ಕೆರೆಗಳು ಕಣ್ಮರೆಯಾಗದಿದ್ದರೆ ಸಾಕು. ಇನ್ನೊಂದು ಭಯವಿದೆ. ತುಮಕೂರಿಗೆ ಕೇವಲ ೧೦ ಕಿಲೋಮೀಟರ್ ದೂರದಲ್ಲಿ ದೇವರಾಯನದುರ್ಗ ಅರಣ್ಯ ಪ್ರದೇಶವಿದೆ. ಜಯಮಂಗಲಿ ನದಿ ಹುಟ್ಟುವುದು ಇಲ್ಲಿಯೇ. ನಗರ ನಿರ್ಮಾಣ ಅಥವಾ ವಿಸ್ತರಣೆಯ ಹೆಸರಲ್ಲಿ ಅದರ ನಾಶವಾಗದಿದ್ದರೆ ಅದೇ ದೊಡ್ಡ ಸಾಧನೆ.

ಯೋಜನೆ ಬಗ್ಗೆ ಮೊನ್ನೆ ನಗರದಲ್ಲಿ ನಡೆದ ಚರ್ಚೆಯಲ್ಲಿ ಹಲವು ಚಿಂತಕರು, ತಜ್ಞರು "ಸ್ಮಾರ್ಟ್ ಸಿಟಿ ಎಂದರೆ ಕೇವಲ ಭೌತಿಕ ಕಟ್ಟಡಗಳ ನಿರ್ಮಾಣವಲ್ಲ, ಬಡವ–ಶ್ರೀಮಂತರ ಅಂತರ ಕಡಿಮೆಯಾಗಬೇಕು, ಇಡೀ ಯೋಜನೆಯನ್ನು ಮಾಹಿತಿ ಹಕ್ಕು ಕಾಯಿದೆ ಅಡಿ ತರಬೇಕು, ಪಾರದರ್ಶಕತೆ ಇರಬೇಕು, ಸಾರ್ವಜನಿಕರ ಸಹಭಾಗಿತ್ವ ಇರಬೇಕು" ಮುಂತಾದ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ನಗರಾಭಿವೃದ್ಧಿ ಮಂತ್ರಾಲಯ ಹೊರತಂದಿರುವ ಸ್ಮಾರ್ಟ್ ಸಿಟಿ ಕ್ರಿಯಾ ಯೋಜನೆಯಲ್ಲಿ ಇದರ ಉದ್ದೇಶವನ್ನು ಹೀಗೆ ಹೇಳಲಾಗಿದೆ. '೨೦೧೧ರ ಗಣತಿ ಪ್ರಕಾರ ಶೇ.೩೧ ರಷ್ಟು ಜನಸಂಖ್ಯೆ ನಗರಗಳಲ್ಲಿ ವಾಸಿಸುತ್ತಿದೆ, ಈ ಪ್ರಮಾಣ ೨೦೩೦ರ ವೇಳೆಗೆ ಶೇ.೪೦ ಕ್ಕೆ ಏರಿಕೆಯಾಗುವ ಅಂದಾಜಿದೆ. ಆ ಜನರಿಗೆ ಉತ್ತಮ ಜೀವನ ಕಲ್ಪಿಸುವ ಉದ್ದೇಶದಿಂದ ಈ ನಗರಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ'.

ಇದನ್ನು ಒಪ್ಪೋಣ, ಆದರೆ ನಗರಗಳು ಅಭಿವೃದ್ಧಿಯಾದಷ್ಟೂ, ಅಲ್ಲಿ ಉದ್ಯೋಗಾವಕಾಶ ಸಿಗುತ್ತದೆ ಎಂಬ ಸಣ್ಣ ಭರವಸೆ ಸಿಕ್ಕರೂ ಅಲ್ಲಿಗೆ ಜನರು ಪ್ರವಾಹದಂತೆ ಬರುತ್ತಾರೆ, ನೀರು, ವಸತಿಗೆ ತತ್ವಾರವಾಗುತ್ತದೆ, ಸ್ಲಂಗಳು ಸೃಷ್ಟಿಯಾಗುತ್ತವೆ. ಅದನ್ನು ಸರಿಪಡಿಸಲು ಮತ್ತೊಂದು ಹಂತದ ಸ್ಮಾರ್ಟ್ ಸಿಟಿ . . . ಹೀಗೆ ಇದೊಂದು ಮುಗಿಯದ ರಗಳೆ.

ಅದರ ಬದಲು ಇಡೀ ಜಿಲ್ಲೆಯನ್ನೇ ಸ್ಮಾರ್ಟ್ ಆಗಿ ರೂಪಿಸಿದರೆ ಒಳಿತಲ್ಲವೇ, ತುಮಕೂರು ಜಿಲ್ಲೆಯನ್ನೇ ನೋಡಿ, ೧೦ ತಾಲ್ಲೂಕುಗಳಿವೆ, ತಾಲ್ಲೂಕಿಗೆ ೫೦ ಕೋಟಿ ವ್ಯಯಿಸಿದರೂ ಸಾಕು, ಅಭಿವೃದ್ಧಿಪಡಿಸಲು ಸ್ಥಳೀಯ ಸಾಧ್ಯತೆಗಳು ಅಪಾರವಾಗಿವೆ. ಜಿಲ್ಲಾ ಕೇಂದ್ರವನ್ನು ಮಾತ್ರ ಅಭಿವೃದ್ಧಿಪಡಿಸಿದರೆ ಸಹಜವಾಗಿಯೇ ತಾಲ್ಲೂಕು ಕೇಂದ್ರಗಳು ಹಾಗೂ ಗ್ರಾಮಗಳಿಂದ ವಲಸೆ ಹೆಚ್ಚಾಗುತ್ತದೆ.



ಸ್ಮಾರ್ಟ್ ಸಿಟಿಗೊಂದು ಸ್ಮಾರ್ಟ್ ಕಟ್ಟಡ

ಆದರೆ ಈಗಾಗಲೇ ಯೋಜನೆಗೆ ಚಾಲನೆ ಸಿಕ್ಕಿರುವುದರಿಂದ ಇದರ ಸಾಧ್ಯತೆ ಇಲ್ಲ, ಮುಂದಾದರೂ ಇದನ್ನು ಗಮನದಲ್ಲಿಟ್ಟುಕೊಳ್ಳುವುದು ಒಳಿತು.

ಸ್ಮಾರ್ಟ್ ಸಿಟಿಗಳ ಆಯ್ಕೆ ಮಾನದಂಡಗಳ ಬಗ್ಗೆ ಗಮನಿಸಿದಾಗ, ನೀರು, ವಿದ್ಯುತ್, ಒಳಚರಂಡಿ ಸೌಲಭ್ಯ ಉತ್ತಮವಾಗಿರುವ, ತೆರಿಗೆ ಸಂಗ್ರಹಣೆಯಲ್ಲಿ ಸುಸ್ಥಿರತೆ ಹೊಂದಿರುವ, ಡಿಜಿಟಲೀಕರಣದತ್ತ ಹೊರಳಿರುವ, ಸ್ವಚ್ಛ ಭಾರತ ಯೋಜನೆಯಲ್ಲಿ ಉತ್ತಮ ಸಾಧನೆ ಮಾಡಿರುವ ನಗರಗಳನ್ನು ಅಂಕಗಳ ಆಧಾರದಲ್ಲಿ ಆಯ್ಕೆ ಮಾಡಿಕೊಳ್ಳಲಾಗಿದೆ. ಸರಾಸರಿ ಶೇ.೮೦ಕ್ಕಿಂತಲೂ ಹೆಚ್ಚು ಅಂಕ ಪಡೆದ ನಗರಗಳು ಸ್ಥಾನ ಪಡೆದಿವೆ.

ಮೂಲಭೂತ ಸೌಕರ್ಯಗಳಲ್ಲಿ ಉತ್ತಮ ಸಾಧನೆ ಮಾಡಿರುವಂತಹ ನಗರಗಳನ್ನೇ ಮತ್ತೆ ಏಕೆ ಈ ಯೋಜನೆಗೆ ಆಯ್ಕೆ ಮಾಡಿಕೊಂಡಿದ್ದು ಎಂಬ ಪ್ರಶ್ನೆ ನನ್ನನ್ನು ಕಾಡುತ್ತದೆ. ಈ ಸೌಲಭ್ಯಗಳು ಅತ್ಯಂತ ಕಳಪೆಯಾಗಿರುವ, ಅತಿ ಕಡಿಮೆ ಅಂಕ ಪಡೆದ ನಗರಗಳನ್ನಲ್ಲವೇ ಆಯ್ಕೆ ಮಾಡಿಕೊಂಡು ಅಭಿವೃದ್ಧಿಪಡಿಸಬೇಕಾದ್ದು?

ರಾಜ್ಯದಿಂದ ಆಯ್ಕೆಯಾಗಿರುವ ಮಂಗಳೂರು, ಶಿವಮೊಗ್ಗ, ಬೆಳಗಾವಿ, ಹುಬ್ಬಳ್ಳಿ–ಧಾರವಾಡ, ತುಮಕೂರು, ದಾವಣಗೆರೆ ನಗರಗಳು ಈಗಾಗಲೇ ಅಭಿವೃದ್ಧಿ ಹೊಂದುತ್ತಿವೆ, ಮೂಲಭೂತಸೌಕರ್ಯಗಳು ತಕ್ಕಮಟ್ಟಿಗೆ ಚೆನ್ನಾಗೇ ಇವೆ. ಆದರೆ ಎಲ್ಲ ರೀತಿಯಿಂದಲೂ ಹಿಂದುಳಿದಿರುವ ಯಾದಗಿರಿ, ರಾಯಚೂರು, ಕೊಪ್ಪಳ, ಚಿಕ್ಕಬಳ್ಳಾಪುರ, ಚಾಮರಾಜನಗರ, ಹಾವೇರಿ, ಚಿತ್ರದುರ್ಗ, ಬಾಗಲಕೋಟ ಮುಂತಾದವು ಯಾವಾಗ ಸ್ಮಾರ್ಟ್ ಆಗುವುದು?

ಸ್ಮಾರ್ಟ್ ಆಲೋಚನೆ ಇಲ್ಲದಿದ್ದಾಗ ಇದೆಲ್ಲಾ ಸಂಭವಿಸುತ್ತದೆ. ಎಲ್ಲಾ ಸೌಕರ್ಯಗಳೂ ಇರುವ ಸ್ಥಳವನ್ನು ಹುಡುಕುವುದು ಖಾಸಗಿ ಹೂಡಿಕೆದಾರರ ಜಾಯಮಾನ. ಆದರೆ ಸರ್ಕಾರವೂ ಅದೇ ರೀತಿ ಯೋಚಿಸಿದರೆ ಹೇಗೆ?



**(ಕೃಷಿ ಜಲನಿರ್ವಹಣಾ ಸಲಹಾಕಾರರಾದ ಮಲ್ಲಿಕಾರ್ಜುನ ಹೊಸಪಾಳ್ಯ ತುಮಕೂರಿನಲ್ಲಿ ನೆಲೆಸಿರುವ ಹವ್ಯಾಸಿ ಲೇಖಕ ಮತ್ತು ಪತ್ರಕರ್ತರೂ ಹೌದು)**

## ಕುಪ್ಪಳ್ಳಿಯಲ್ಲಿ ಸಮಾಜವಾದಿ ಅಧ್ಯಯನ ಶಿಬಿರ

**ಶಿವಮೊಗ್ಗದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನವು ಕುಪ್ಪಳ್ಳಿಯಲ್ಲಿ ಇದೇ ಅಕ್ಟೋಬರ್ ೧೭ ಹಾಗೂ ೧೮ರಂದು ಆಯೋಜಿಸಿರುವ 'ಸಮಾಜವಾದಿ ಅಧ್ಯಯನ ಶಿಬಿರ'ಕ್ಕಾಗಿ ಈಗಾಗಲೇ ಹೆಸರು ನೊಂದಾಯಿಸಿಕೊಂಡಿರುವವರು ತಮ್ಮ ಅನುಕೂಲ ನೋಡಿಕೊಂಡು, ಸಂಘಟಕರಿಗೆ ಮುಂಚಿತವಾಗಿ ತಿಳಿಸಿ (೯೪೪೪೮೨೫೩೮೭೫೮) ೧೬ರ ಸಂಜೆಯ ಹೊತ್ತಿಗೆ ಕುಪ್ಪಳ್ಳಿಗೆ ಬರಬಹುದು. ಅಲ್ಲಿ ವಸತಿ ವ್ಯವಸ್ಥೆ ಇದ್ದು, ಒಂದು ಹೊದಿಕೆ ಮತ್ತು ಟಾರ್ಚ್ ತರಲು ಸೂಚಿಸಲಾಗಿದೆ.**

**ಶಿಬಿರಾರ್ಥಿಗಳು ಕುವೆಂಪು, ಪಿ.ಲಂಕೇಶ್, ಪೂರ್ಣಚಂದ್ರ ತೇಜಸ್ವಿ, ಯು.ಆರ್. ಅನಂತಮೂರ್ತಿ ಮತ್ತು ದೇವನೂರ ಮಹಾದೇವ ಅವರ ಸಾಹಿತ್ಯದ ಪರಿಚಯಾತ್ಮಕ ಓದಿನೊಂದಿಗಾದರೂ ಶಿಬಿರಕ್ಕೆ ಬರಲು ಕೋರಲಾಗಿದೆ.**

**–ಡಿ.ಎಸ್. ನಾಗಭೂಷಣ**

ಶಿಬಿರದ ನಿರ್ದೇಶಕರು

ಯುವ ಸಮಾಜವಾದಿ ಚಿಂತನ ವೇದಿಕೆ

# ಮಲೆನಾಡಿನಲ್ಲಿ ಭತ್ತದ ಬೇಸಾಯ: ಹೊಸ ಚಿಂತನೆಯ ಅಗತ್ಯ

-ಪ್ರವೀಣ್ ಕುಮಾರ್ ಎನ್



**ನಾ**ಗರೀಕತೆಯ ಉಗಮದಿಂದಲೂ ಹೆಚ್ಚು ಮಳೆ ಬೀಳುವ ತಗ್ಗಿನ ಪ್ರದೇಶದಲ್ಲಿ ಭತ್ತದ ಕೃಷಿಯನ್ನು ಮಾಡಲಾಗುತ್ತಿದೆ. ಮಲೆನಾಡಿನಲ್ಲಿ ೩-೪ ತಿಂಗಳು ಎಡೆಬಿಡದೆ ಸುರಿಯುವ ಮಳೆ ಭತ್ತದ ಕೃಷಿಗೆ ಮಾತ್ರ ಪೂರಕವಾಗಿದೆ. ಅಕ್ಕಿ ಮತ್ತು ಅದರಿಂದ ಮಾಡುವ ವಿವಿಧ ವ್ಯಂಜನಗಳೇ ಇಲ್ಲಿಯೂ ಪ್ರಧಾನ ಆಹಾರವಾಗಿದೆ.

ಗದ್ದೆ ಹೂಡಲು, ಕೆಸರು-ಕಂಬಳ ಮಾಡಲು ಜಾನುವಾರು, ಅವುಗಳಿಗೆ ಭತ್ತದ ಹುಲ್ಲಿನ ಮೇವು, ಸಗಣಿಯೊಂದಿಗೆ ಕೊಳೆಸಿ, ಗೊಬ್ಬರ ಮಾಡಲು ಸೊಪ್ಪಿಗಾಗಿ ಬ್ಯಾಣ, ಭತ್ತಕ್ಕೆ ತಗುಲುವ ಕೀಟ/ರೋಗ ನಿಯಂತ್ರಣಕ್ಕಾಗಿ ಕಾಡಿನ ಕಹಿ ಸೊಪ್ಪುಗಳು (ಮುಕ್ಕಡುಕ, ಮತ್ತಿ, ಎಕ್ಕ) ಉಳುಮೆ, ಒಕ್ಕಣೆ, ದಾಸ್ತಾನಿನ ಸಲಕರಣೆಗಳಿಗಾಗಿ ಕಾಡಿನ ಮರಮಟ್ಟು.... ಹೀಗೆ ಪರಸ್ಪರ ಅವಲಂಬಿತವಾದ ಮತ್ತು ಒಂದಕ್ಕೊಂದು ಪೂರಕವಾದ ವ್ಯವಸ್ಥೆ, ಭತ್ತವನ್ನು ಮಲೆನಾಡ ಜನ-ಜೀವನ ಮತ್ತು ಸಂಸ್ಕೃತಿಯ ಭಾಗವಾಗಿಸಿದೆ.

ಮಲೆನಾಡಿನ ಹವಾಗುಣ, ಮಣ್ಣು, ಮಳೆ ಪ್ರಮಾಣಗಳಿಗೆ ಅನುಗುಣವಾಗಿ ಹಲವು ಭತ್ತದ ತಳಿಗಳು ಸಹಜವಾಗಿ ವಿಕಸಿತಗೊಂಡು ಅನನ್ಯವಾದ ಗುಣಧರ್ಮಗಳನ್ನು ಪಡೆದಿವೆ. ವರದಾ ನದಿ ಬಯಲಿನ 'ನೆರೆಗುಳಿ' ಮತ್ತು 'ಕೊರಗ' ಎಂಬ ಕೆಂಪುಜಡ್ಡು(ಕೆಂಪಕ್ಕಿ) ತಳಿಗಳು ಒಂದು ತಿಂಗಳಿಗಿಂತ ಹೆಚ್ಚು ಅವಧಿಯ ನೆರೆಯನ್ನು ಸಹಿಸುವ ಗುಣ ಹೊಂದಿವೆ. 'ಚಿಟ್ಟಿಗ', 'ಚಿಳ್ಳಿಗ' ತಳಿಗಳು ಕಾರು(ಬೇಸಿಗೆ) ಬೆಳೆಗೆ ಸೂಕ್ತವಾಗಿವೆ. ಹುಲ್ಲು ಮತ್ತು ಕಾಳಿನ ಮೇಲಿರುವ ಸೂಕ್ತವಾದ ಮುಳ್ಳುಗಳಿಂದಾಗಿ 'ಮುಳ್ಳರೆ' ಎಂಬ ತಳಿ ಕೀಟನಿರೋಧಕತೆಯನ್ನು ಪಡೆದಿದೆ. ನಾಲ್ಕು ಅಡಿಗಿಂತಲೂ ಎತ್ತರದ ಕೇವು(ಗರಿ) ಬಿಡುವ 'ನೆಟ್ಟಿಳಗ' ಮೇವಿಗಾಗಿ ಬಳಕೆಯಾಗುತ್ತದೆ. ಪಿತ್ತ ಮತ್ತು ಉಷ್ಣ ನಿವಾರಕ ಗುಣಗಳುಳ್ಳ 'ಕಳವೆ', 'ಹೊನ್ನೆಕಟ್ಟು' ತಳಿಗಳು, ಪರಿಮಳಭರಿತ 'ರಾಜಕಮಲ್', 'ಗಂಧಸಾಲೆ' ತಳಿಗಳು, ಕಡಬು, ಪಾಯಸ ಮುಂತಾದ ವ್ಯಂಜನಗಳಿಗೆ ಮತ್ತು ದಿನಬಳಕೆಗೆ ಸೂಕ್ತವಾದ 'ರತ್ನಚೂಡಿ', 'ಸಣ್ಣವಾಳ್ಯ' ತಳಿಗಳು.....ಹೀಗೆ ದೊಡ್ಡ ಪಟ್ಟಿಯೇ ಇದೆ.

ಆಧುನಿಕ ಕೃಷಿ ಮಲೆನಾಡಿಗೆ ದಾಂಗುಡಿ ಇಟ್ಟ ನಂತರ, ಸ್ಥಳೀಯ ನಾಟಿಭತ್ತದ ತಳಿಗಳಿಗೆ 'ಕಡಿಮೆ ಇಳುವರಿಯ' ತಳಿಗಳೆಂಬ ಹಣೆಪಟ್ಟಿ ಹಚ್ಚಿ, ಅವುಗಳ ಗುಣಧರ್ಮಗಳನ್ನು ನಿರ್ಲಕ್ಷಿಸಿ, ಅಧಿಕ ಇಳುವರಿಯ ಬೆನ್ನುಬಿದ್ದದ್ದರಿಂದ ಭತ್ತದ ವೈವಿಧ್ಯತೆಯು ಬಹುಪಾಲು ಕಣ್ಮರೆಯಾಗಿದೆ. ವೈವಿಧ್ಯತೆಯ ನಾಶ ಆಹಾರ ಸ್ವಾವಲಂಬನೆಯ ನಾಶಕ್ಕೆ ನಾಂದಿಯಾಗಿದೆ. ಆದ್ದರಿಂದ ಆಯಾ ತಳಿಗಳನ್ನು ಅವುಗಳ ಮೂಲ ಪ್ರದೇಶಗಳಲ್ಲಿ ಬೆಳೆಸುವ ಮೂಲಕ ತಳಿ ವೈವಿಧ್ಯತೆಯನ್ನು ಸಂರಕ್ಷಿಸುವ ಕೆಲಸ ತುರ್ತಾಗಿ ಆಗಬೇಕಿದೆ.

ಪ್ರಸ್ತುತ ಮಲೆನಾಡಿನಲ್ಲಿ ಕೃಷಿ ಕಾರ್ಮಿಕರ ಅಭಾವದಿಂದಾಗಿ ಕೂಲಿ ದುಬಾರಿಯಾಗಿದೆ ಮತ್ತು ಭತ್ತದ ಬೀಜ, ಗೊಬ್ಬರ, ಪೀಡೆನಾಶಕ, ಟಿಲ್ಲರ್‌ನಿಂದ ಉಳುಮೆ ಹೀಗೆ ಎಲ್ಲಾ ಸೇರಿ ಎಕರೆ ಭತ್ತ ಬೆಳೆಯಲು ೧೨,೦೦೦ ರಿಂದ ೧೫,೦೦೦ ರೂ ಖರ್ಚಾಗುತ್ತದೆ. ಆದರೆ ಇಳುವರಿ ಮಾತ್ರ ಎಕರೆಗೆ ೮ ರಿಂದ ೧೦ ಕ್ವಿಂಟಾಲ್. ಬಹುತೇಕ ಮಲೆನಾಡಿನ ರೈತರು ಭತ್ತವನ್ನು ಮಿಲ್‌ನವರಿಗೆ ಮಾರಾಟ ಮಾಡುತ್ತಾರೆ. ಮಿಲ್‌ನವರು ಸರ್ಕಾರಕ್ಕೆ (ಪಡಿತರದಲ್ಲಿ ವಿತರಿಸಲು) ಲೆವಿಯಾಗಿ ಪ್ರತಿ ಕ್ವಿಂಟಾಲ್ ಅಕ್ಕಿಗೆ ೧,೧೦೦ ರೂ ನಂತೆ ಕೊಡಬೇಕಿರುವುದರಿಂದ ಅವರು ರೈತರಿಂದ ಕ್ವಿಂಟಾಲ್‌ಗೆ ೮೦೦-೯೦೦ ರೂ ನಂತೆ ಖರೀದಿಸುತ್ತಾರೆ. ಸರ್ಕಾರದ ಈ ನೀತಿಯಿಂದಾಗಿ ರೈತರಿಗೆ ಎಕರೆಗೆ ೪೦೦೦-೬೦೦೦ ನಷ್ಟವೇ ಆಗುತ್ತಿದೆ. ತುಂಡುಭೂಮಿ ಹೊಂದಿರುವ ಸಣ್ಣ ರೈತರು ತಮ್ಮ ಮನೆ ಬಳಕೆ ಮತ್ತು ಜಾನುವಾರುಗಳಿಗೆ ಮೇವಿಗಾಗಿ ಇಷ್ಟೆಲ್ಲ ಪ್ರತಿಕೂಲ ಸಂದರ್ಭದಲ್ಲೂ ಮುಯ್ಯಾಳು ಪದ್ಧತಿಯಲ್ಲಿ ಭತ್ತ ಬೆಳೆಯುತ್ತಿದ್ದಾರೆ. ಕಾಡು, ಪ್ರಾಣಿ-ಪಕ್ಷಿಗಳ ಹಾವಳಿ ಹೇಳತೀರದಾಗಿದೆ. ಅಡಿಕೆಯಿಂದ ಆರ್ಥಿಕವಾಗಿ ಸಬಲರಾಗಿರುವ ಹಲವು ರೈತರು ಗದ್ದೆಗಳನ್ನು ಬೀಳು ಬಿಡುತ್ತಿದ್ದಾರೆ ಇಲ್ಲವೇ ಲಾವಣಿಗೆ ಶುಂಠಿ ಬೆಳೆಯಲು ಕೊಡುತ್ತಿದ್ದಾರೆ ಅಥವಾ ಅಡಿಕೆ ತೋಟಗಳನ್ನಾಗಿಸುತ್ತಿದ್ದಾರೆ.

ನಾಲಾ ನೀರಾವರಿಯಿಂದ ಅಸಾಂಪ್ರದಾಯಿಕ ಪ್ರದೇಶದಲ್ಲಿ ಬೆಳೆಯುವ ಭತ್ತದ ಉತ್ಪಾದನೆ ಮತ್ತು ಇಳುವರಿಗೆ ಮಲೆನಾಡಿನ ಭತ್ತವನ್ನು ಹೋಲಿಕೆ ಮಾಡಲಾಗದಿದ್ದರೂ ನಾಲಾ ಪ್ರದೇಶಗಳು ವಿವೇಚನರಹಿತ ರಸಗೊಬ್ಬರ, ಪೀಡೆನಾಶಕಗಳ ಬಳಕೆ ಮತ್ತು ಅನಿಯಂತ್ರಿತ ನೀರಾವರಿಯಿಂದಾಗಿ ಜವುಳು, ಸವುಳಾಗಿ ಬರಡಾಗುತ್ತಿವೆ. ಈ ಕಾಲಘಟ್ಟದಲ್ಲಿ ಮಲೆನಾಡಿನ ಸಂಪ್ರದಾಯಿಕ ಭತ್ತದ ಕೃಷಿಯನ್ನು ಆ ಮೂಲಕ ಇಲ್ಲಿನ ಸಂಸ್ಕೃತಿಯನ್ನು ಉಳಿಸುವ ಕೆಲಸವಾಗಬೇಕಿದೆ. ತೀವ್ರ ಮಳೆ ಮತ್ತು ಕೆಸರು ಮಡಿ ನಾಟಿ ಪದ್ಧತಿಯಿಂದ ಸಾರಗುಂದುತ್ತಿರುವ ಮಣ್ಣಿನ ಫಲವತ್ತತೆ ಹೆಚ್ಚಿಸಲು ಪರಿಸರಕ್ಕೆ ಪೂರಕವಾದ ಹಸಿರೆಲೆ ಗೊಬ್ಬರ ಬೀಜಗಳು, ದ್ವಿದಳಗಳ ಬಿತ್ತನೆ, ಸಾರಜನಕ ಸ್ಥಿರೀಕರಿಸುವ ಝರಿ ಸಸಿಯಾದ ಅಝೋಲಾವನ್ನು ಗದ್ದೆಯಲ್ಲಿ ಬೆಳೆಸುವುದು ಮುಂತಾದ ಕ್ರಮಗಳನ್ನು ತುರ್ತಾಗಿ ಕೈಗೊಳ್ಳಬೇಕಿದೆ.

ಪ್ರಸ್ತುತ ಗ್ರಾಹಕರಲ್ಲಿ ಸಾವಯುವ ಉತ್ಪನ್ನಗಳ ಬಗ್ಗೆ ಒಲವು ಮೂಡಿರುವುದರಿಂದ ಮತ್ತು ಸಾವಯವ ಕೃಷಿ ಮಲೆನಾಡಿನ ಸೂಕ್ಷ್ಮ ಪರಿಸರಕ್ಕೆ ಪೂರಕವಾಗಿರುವುದರಿಂದ, ಇಲ್ಲಿ ಬೆಳೆದ ಸ್ಥಳೀಯ ಭತ್ತದ ಗುಣ-ವಿಶೇಷಗಳನ್ನು ಬಿಂಬಿಸಿ ನಗರಗಳಲ್ಲಿ ಮಾರಾಟಮಾಡುವದರಿಂದ ರೈತರಿಗೆ ತಮ್ಮ ಉತ್ಪಾದನ ವೆಚ್ಚ ಕಳೆದು ಲಾಭಗಳಿಸುವ ಬೆಲೆ ಕೊಡಿಸಬಹುದಾಗಿದೆ. ಈ ನಿಟ್ಟಿನಲ್ಲಿ ಕೆಲವು ಕಳಕಳಿಯಿರುವ ವ್ಯಕ್ತಿಗಳು ಮತ್ತು ಕೃಷಿ ಸಂಬಂಧಿತ ಸರ್ಕಾರೇತರ ಸಂಸ್ಥೆಗಳು ಪ್ರವೃತ್ತರಾಗಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಹಸಿವಿಗೆ ಅನ್ನ ಉಣ್ಣುವ ಪ್ರತಿಯೊಬ್ಬರು ಅನ್ನದ ಹಿಂದಿರುವ ಸಂಗತಿಗಳ ಬಗ್ಗೆ ಸೂಕ್ಷ್ಮಜ್ಞರಾಗಬೇಕಿದೆ.



**(ಕೃಷಿ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದು ಫುಕೊವೊಕಾರ ಸಹಜ ಕೃಷಿ ಪದ್ಧತಿಯಯನ್ನು ಅಭ್ಯಸಿಸಲು ಧಾರವಾಡ ಬಳಿಯ ಡಾ. ಸಂಜೀವ ಕುಲಕರ್ಣಿಯವರ ಕಾಡುತೋಪಿನಲ್ಲಿ ಎರಡು ವರ್ಷ ಕಳೆದ ಲೇಖಕ ಪ್ರವೀಣ್‌ಕುಮಾರ್ ಮೂಲತಃ ಜೋಗ್‌ನವರಾಗಿದ್ದು, ಸದ್ಯಕ್ಕೆ ಸಾಗರದ ಬಳಿ ಕೃಷಿ ಇಲಾಖೆಯ ವಿಸ್ತರಣಾ ಯೋಜನೆಯೊಂದರಲ್ಲಿ ರೈತರೊಂದಿಗೆ ಕೆಲಸ ಮಾಡುತ್ತಿದ್ದಾರೆ.)**

**ಹೊಸ ಚಂದಾದಾರರಿಗೆ ಸೂಚನೆ**

**ಪತ್ರಿಕೆಗೆ ಚಂದಾದಾರರಾಗಬಯಸುವವರು ತಮ್ಮ ಚಂದಾ ಹಣವನ್ನು ಶಿವಮೊಗ್ಗದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನ (IFSC ಕೋಡ್: SBMY 0040444) ವಿನೋಬನಗರ ಶಾಖೆಯಲ್ಲಿ 'ಸಂಪಾದಕರು ಹೊಸ ಮನುಷ್ಯ' ಹೆಸರಿನಲ್ಲಿರುವ ಚಾಲ್ತಿ ಖಾತೆ ಸಂಖ್ಯೆ: 64110358330 ಇಲ್ಲಿಗೆ ವರ್ಗಾಯಿಸಿ/ಜಮಾ ಮಾಡಿ 9449242284 -ಈ ಸಂಖ್ಯೆಗೆ ಕರೆ ಮಾಡಿ ತಿಳಿಸಬೇಕು ಅಥವಾ ಸಂದೇಶ ಕಳಿಸಬಹುದು.-ಸಂ.**

**ಸಮಕಾಲೀನ**

# ಗಾಂಧಿಯ ಭಾರತದ ಅಂತ್ಯ ಸನ್ನಿಹಿತವಾಗುತ್ತಿದೆಯೇ?



ಮಹಾತ್ಮ ಗಾಂಧಿ ನಡೆದಾಡಿದ ಹಿಂದೂಸ್ಥಾನದ ಈ ನೆಲ ಈಗ ಅಲುಗಾಡತೊಡಗಿದೆ. ತನ್ನ ಯಾವ ವಾರಸುದಾರಿಕೆಯೂ ಇಲ್ಲದ ರಾಷ್ಟ್ರೀಯ ಹೋರಾಟದ ಎಲ್ಲ ಕುರುಹುಗಳನ್ನೂ ಮೋದಿ ಸರ್ಕಾರ ಅಳಿಸಿಹಾಕುವ ಕಾರ್ಯಕ್ರಮವೊಂದನ್ನು ಅದು ಹಾಕಿಕೊಂಡಂತಿದೆ. ಇದು ಸುಲಭವಾಗಿರುವುದು, ಈ ಕುರುಹುಗಳು ಜನಪ್ರಿಯ ನೆಲೆಯಲ್ಲಿ ನೆಹ್ರೂ ಪರಂಪರೆಯ ಭಾಗವಾಗಿ ಗುರುತಿಸಲ್ಪಟ್ಟಿದ್ದು, ಜನತೆಯಲ್ಲಿ ನೆಹರೂ ಪರಂಪರೆಯ ರಾಜಕೀಯ ಮೌಲ್ಯಗಳ ಬಗ್ಗೆ ತಿರಸ್ಕಾರ ಬೆಳೆದಿರುವುದೇ ಆಗಿದೆ. ಆದರೆ ಗಾಂಧಿ–ನೆಹ್ರೂ ಸಂಬಂಧ ಈ ಜನಪ್ರಿಯ ನೆಲೆಯಲ್ಲಿನ ಗ್ರಹಿಕೆಯಷ್ಟು ಸರಳವಾಗಿಲ್ಲದಿದ್ದು, ಇದನ್ನು ಮೋದಿ ರಾಜಕಾರಣ ತನ್ನ ಮೂಲನೆಲೆಗಳನ್ನೇ ಪ್ರಶ್ನೆ ಮಾಡುವ ಗಾಂಧಿ ಪರಂಪರೆಯ ಮೌಲ್ಯಗಳನ್ನು ನಾಶ ಮಾಡಲು ಬಳಸಿಕೊಳ್ಳುತ್ತಿದ್ದು ಇದನ್ನು ಅಳಿದುಳಿದಿರುವ ಕೆಲ ಗಾಂಧಿವಾದಿಗಳಾದರೂ ಪ್ರಬಲವಾಗಿ ವಿರೋಧಿಸುವ ಕಾಲವೀಗ ಬಂದಿದೆ ಎನಿಸುತ್ತದೆ.

ನೆಹರೂಗೆ ಗಾಂಧೀಜಿಯ ಬಗ್ಗೆ ವೈಯಕ್ತಿಕ ನೆಲೆಯಲ್ಲಿ ಅಪಾರ ಗೌರವವಿತ್ತಾದರೂ, ಅವರ ರಾಜಕೀಯ ವಿಚಾರಧಾರೆಯ ಬಗೆಗೆ–ವಿಶೇಷವಾಗಿ ರಾಷ್ಟ್ರ ಅನುಸರಿಸಬೇಕಾದ ಪ್ರಗತಿಯ ಮಾದರಿ ಬಗ್ಗೆ–ಪ್ರಬಲವಾದ ವಿರೋಧವಿತ್ತು. ಇದರ ಪರೋಕ್ಷ ಪರಿಣಾಮಗಳಿಂದಾಗಿ ಗಾಂಧಿವಾದಿಯಾಗಿದ್ದ ಆಚಾರ್ಯ ಕೃಪಲಾನಿಯವರು ೧೯೪೭ರ ನವೆಂಬರ್‌ನಲ್ಲಿ ಕಾಂಗ್ರೆಸ್ ಅಧ್ಯಕ್ಷತೆಗೆ ರಾಜೀನಾಮೆ ನೀಡಿದಾಗ, ಗಾಂಧೀಜಿ ಕಾಂಗ್ರೆಸ್ ಸರ್ಕಾರವನ್ನು ಹಳಿ ಮೇಲೆ ತರಲು ಆ ಜಾಗಕ್ಕೆ ಸಮಾಜವಾದಿ ನಾಯಕ ಆಚಾರ್ಯ ನರೇಂದ್ರ ದೇವ ಅವರ ಹೆಸರನ್ನು ಸೂಚಿಸಿದರು. ನೆಹರೂ ತಮ್ಮ ರಾಜಕೀಯ ಚಾಣಾಕ್ಷತೆಗೆ ತಕ್ಕಂತೆ ಅದನ್ನು ತಕ್ಷಣ ಸ್ವಾಗತಿಸಿದರಾದರೂ, ಅವರ ಅಂತಿಮ ಆಯ್ಕೆ ಎಲ್ಲರ ರಾಜಿ ಅಭ್ಯರ್ಥಿ ಡಾ. ರಾಜೇಂದ್ರ ಪ್ರಸಾದರದ್ದಾಗಿತ್ತು. 'ಗಾಂಧಿ ಜೀವನ ಚರಿತ್ರೆ'ಕಾರ ಲೂಯಿ ಫಿಶರ್ ಪ್ರಕಾರ ಕಾಂಗ್ರೆಸ್ ಯಂತ್ರ ಮತ್ತು ಸರ್ಕಾರದೊಳಗಿನ ಕಾಂಗ್ರೆಸ್ ನಾಯಕತ್ವ ಗಾಂಧಿಯವರನ್ನು ಅಂತಿಮವಾಗಿ ಸೋಲಿಸಿತ್ತು.

ಗಾಂಧಿ ಕಾಂಗ್ರೆಸ್ ಪಕ್ಷದ ವಿಸರ್ಜನೆಯ ಮಾತಾಡಿದ್ದನ್ನು ನಾವು ಈ ಹಿನ್ನೆಲೆಯಲ್ಲೇ ಅರ್ಥ ಮಾಡಿಕೊಳ್ಳಬೇಕು. ಈ ಆಲೋಚನೆಯ ಭಾಗವಾಗಿಯೇ ಅವರು ಕಾಂಗ್ರೆಸ್ ರಾಜಕಾರಣಕ್ಕೆ ಒಂದು ಪ್ರತಿಶಕ್ತಿಯಾಗಿ ರಚನಾತ್ಮಕ ಕೆಲಸಗಳ ದಳವೊಂದನ್ನು ರೂಪಿಸಲು ತಮ್ಮ ಸಾವಿನ ದಿನದವರೆಗೂ ಪ್ರಯತ್ನಪಟ್ಟರು. ತಮ್ಮ ಕೊನೆಯ ದಿನಗಳಲ್ಲಿ ಲೋಹಿಯಾರೊಂದಿಗೆ ಅವರು ಆರಂಭಿಸಿದ್ದ ಮಾತುಕತೆಗೂ ಇದೇ ಉದ್ದೇಶವಿದ್ದಿತೆಂದು ನಾವು ಊಹಿಸಬಹುದಾಗಿದೆ. ಏಕೆಂದರೆ ಗಾಂಧಿ ದೃಷ್ಟಿಯಲ್ಲಿ ಮನುಷ್ಯ ರಾಜಕಾರಣದ ಸಾಧನ ಹೇಗೋ ಗುರಿಯೂ ಆಗಿದ್ದ. ಅಂದರೆ, ನೀವು ಎಂತಹುದೇ ರಾಜಕಾರಣ ಮಾಡಿ, ಅದರ ಪರಿಣಾಮವಾಗಿ ಮನುಷ್ಯ ಏನಾಗುತ್ತಾನೆ ಎಂಬುದೇ ಗಾಂಧಿಯ ಆತ್ಯಂತಿಕ ಕಾಳಜಿಯಾಗಿತ್ತು. ಆದರೆ ಕಾಂಗ್ರೆಸ್ ರಾಜಕಾರಣ ಇದರ ವಿರುದ್ಧ ದಿಕ್ಕಿನಲ್ಲಿ ಸಾಗಿತ್ತು..

ಅದೇನೇ ಇರಲಿ, ಇದರಿಂದ ತೀರ್ಮಾನಿಸಬಹುದಾದ ಒಂದು ಸಂಗತಿ ಎಂದರೆ ಗಾಂಧಿ ಪರಂಪರೆಯ ಅಂತ್ಯ ನಿಜಾರ್ಥದಲ್ಲಿ ನೆಹ್ರೂರಿಂದಲೇ ಆರಂಭವಾಯಿತು ಎಂಬುದು. ಅದು ಮನುಷ್ಯ ಆಕಾಶಕ್ಕೆ ಏಣಿ ಹಾಕಿಕೊಳ್ಳುವ ಪಶ್ಚಿಮದ ಆಧುನಿಕ ಅಭಿವೃದ್ಧಿ ಮಾದರಿ ಕುರಿತ ಮೋಹಕ್ಕೆ ಸಂಬಂಧಿಸಿದ್ದಾಗಿತ್ತು. ಅದನ್ನು ನೆಹರೂ ಸಮಾಜವಾದದ ಹೆಸರಲ್ಲಿ ನಂಬಿದ್ದರಷ್ಟೆ. ಅದು ೮೦ರ ದಶಕದ ಹೊತ್ತಿಗೆ ದೇಶವನ್ನು ಆರ್ಥಿಕ ವಿನಾಶದ ಅಂಚಿಗೆ ಕೊಂಡಯ್ದಿದ್ದಾಗ, ನೆಹ್ರೂ ಪರಂಪರೆಯ ಈ ಸಹಜ ಅವನತಿಯ ವಿಕಟ ಪ್ರತಿನಿಧಿಯಂತಿದ್ದ ಪಿ.ವಿ. ನರಸಿಂಹರಾವ್ ಸಮಾಜವಾದಿ ನೀತಿಯನ್ನು ಉಲ್ಟಾ ಮಾಡಿ ದೇಶವನ್ನು ಜಾಗತೀಕರಣದ ರಾಜಕಾರಣಕ್ಕೆ ಒಪ್ಪಿಸಿದರು. ಈ ಅವಸ್ಥಾಂತರ ಎಷ್ಟು ಸುಗಮವಾಗಿತ್ತೆಂದರೆ, ನೆಹರೂ ರಾಜಕಾರಣದ ತರ್ಕ ತನಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಜಾಗತೀಕರಣದ ರಾಜಕಾರಣದಲ್ಲೇ ಅಂತ್ಯಗೊಂಡಿದ್ದು ಸಹಜವೇ ಎನ್ನಿಸಿತ್ತು! ಆದರೆ ಈ ಮಧ್ಯೆ ಈ ಜಾಗತೀಕರಣದ ರಾಜಕಾರಣ ಮೂಲತಃ ಗಾಂಧಿ ವಿರೋಧಿಸಿದ್ದ ಪಶ್ಚಿಮದ ದುರಾಸೆಯ ರಾಜಕಾರಣವೇ ಆಗಿರುವುದರಿಂದ, ಅದು ಮನಮೋಹನ ಸಿಂಗ್‌ರ ಅವಧಿಯಲ್ಲಿ ಹಲವು ಸಂಕಷ್ಟಗಳಿಗೆ ಸಿಕ್ಕಿಹಾಕಿಕೊಂಡು ಅನುಮಾನಾಸ್ಪದವೆನಿಸಿದಾಗ ಜನ ಅದರ ಸಮರ್ಥ ಉತ್ತರಾಧಿಕಾರಿಯಾಗಿ ಈಗ ನರೇಂದ್ರ ಮೋದಿಯವರನ್ನು ಆಯ್ದಿದ್ದಾರೆ. ಅವರು ಮನಮೋಹನ ಸಿಂಗ್ ಅನುಭವಿಸಿದ ಸಂಕಷ್ಟಗಳಿಗೆ ನೆಹ್ರೂ ಪರಂಪರೆಯ ನೆನಪುಗಳೇ ಕಾರಣವೆಂದು ಹೇಳುತ್ತಾ ಅವನ್ನು ನಾಶ ಮಾಡುವ ಕೆಲಸದಲ್ಲೀಗ ತೊಡಗಿದ್ದಾರೆ. ಆದರೆ ಇದೆಲ್ಲದರ ಮೂಲ ಗುರಿ ಗಾಂಧಿ ಎಂದು ಅವರ ವ್ಯಕ್ತಿತ್ವವನ್ನು ಕಟ್ಟಿರುವ ರಾಜಕಾರಣಕ್ಕೆ ಗೊತ್ತಿಲ್ಲದಿಲ್ಲ... ಹೇಗೋ ಗಾಂಧಿಯ ನೆನಪನ್ನು ಅಳಿಸಿದರೆ ದುರಾಸೆಯನ್ನೂ ಒಂದು ಮೌಲ್ಯವಾಗಿ ಸ್ಥಾಪಿಸಬಹುದೆಂದು ಅವರ ರಾಜಕಾರಣಕ್ಕೆ ಗೊತ್ತು. ಮೋದಿ ರಾಜಕಾರಣದ ತರ್ಕದ ಪ್ರಕಾರ ದುರಾಸೆಯೇ ಬಲಿಷ್ಠತೆಗೆ ಆಧಾರ. ಹಾಗಾಗಿಯೇ ದುರಾಸೆ ರಾಷ್ಟ್ರದ ಇಂದಿನ ಅಗತ್ಯ..

ಇದಕ್ಕೆ ಕಾರಣ ಮೋದಿ ರಾಜಕಾರಣಕ್ಕೆ ರಾಷ್ಟ್ರವೊಂದೇ ಮುಖ್ಯವಾಗಿರುವುದು; ವ್ಯಕ್ತಿ ರಾಷ್ಟ್ರದ ಉತ್ಪನ್ನ ಎಂದು ಅದು ನಂಬಿರುವುದು. ಆದರೆ ಎಲ್ಲ ರಚನೆಗಳ ಮೂಲದ್ರವ್ಯ ವ್ಯಕ್ತಿ; ಅವನನಂತೆ ಸಮಾಜ, ರಾಷ್ಟ್ರ, ಜಗತ್ತು ಎಂಬ ಗಾಂಧಿ ಕಂಡುಕೊಂಡಿದ್ದ ಆಧ್ಯಾತ್ಮಿಕ ಸತ್ಯಕ್ಕೆ ಈ ರಾಜಕಾರಣ ಎರವಾಗಿರುವುದು. ಹಾಗಾಗಿಯೇ ಮೋದಿ ರಾಜಕಾರಣ ನಂಬುವ ಧರ್ಮಕ್ಕೆ ಆಧ್ಯಾತ್ಮಿಕತೆ ಎಂಬುದೇ ಇಲ್ಲ. ಧರ್ಮ ಇಡಿಯಾಗಿ ರಾಷ್ಟ್ರಕ್ಕೆ ಸಂಬಂಧಿಸಿದ್ದಾಗಿದೆ. ಹಾಗಾಗಿ ಧರ್ಮವೂ ಇಲ್ಲಿ ರಾಜಕಾರಣವಾಗಿದೆ. ಇಂತಹ ರಾಜಕಾರಣ ವ್ಯಕ್ತಿಗಳನ್ನು ಏನನ್ನು ಮಾಡುತ್ತದೆ ಎಂಬ ಪರಿವೆಯೇ ಅದಕ್ಕಿದ್ದಂತಿಲ್ಲ. ಇದು ರಾಜಕಾರಣವೇ ಧರ್ಮವಾಗುವ ಗಾಂಧಿ ಪರಂಪರೆಗೆ ವಿರುದ್ಧವಾದದ್ದು. ಇದರ ದುರಂತಗಳನ್ನು ನಾವು ಮುಂದೆ ನೋಡಬೇಕಾಗಬಹುದು. ಇದನ್ನೆಲ್ಲ ವಿವರಿಸುವ ಮೂರು ಬರಹಗಳನ್ನು ಇಲ್ಲಿ ನೀಡುತ್ತಿದ್ದೇವೆ.–ಸಂ.

# ಗಾಂಧಿ, ಸ್ವಾಮಿ ವಿವೇಕಾನಂದ ಮತ್ತು ಮೋದಿ

–ಜಿ.ಎಸ್. ಜಯದೇವ

**"ಹೂ**ಡಿಕೆಯ ಹಸಿವು ಹೆಚ್ಚಲಿ" ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ಕೊಟ್ಟಿದ್ದಾರೆ. 'ಜಾಣರು' ಇದರ ಲಾಭ ಪಡೆಯುತ್ತಿರುವುದೇನೋ ಸರಿ. ಆದರೆ 'ತನ್ನತನ' ಎಂಬುದೇನಾದರು ಇದ್ದರೆ ಅದನ್ನೂ ಮೊದಲುಗೊಂಡು, ಎಲ್ಲವನ್ನು ಕಳೆದುಕೊಳ್ಳುತ್ತಿರುವ ಶ್ರೀಸಾಮಾನ್ಯನೂ ಈ ಅಭಿವೃದ್ಧಿಯನ್ನು ಸಂಭ್ರಮಿಸುತ್ತಿರುವುದು ಜಾಗತೀಕರಣದ ಅದ್ವಿತೀಯ ಸಾಧನೆಯೇ ಸರಿ.

ಹೂಡಿಕೆಯ ಹಸಿವಿನಿಂದ ಸಾಧಿಸಬಹುದಾದ ಪ್ರಗತಿ ಯಾವುದು? ಯಾರಿಗೆ? ಇಂತಹ ಅಭಿವೃದ್ಧಿಯ ಕಲ್ಪನೆಗೆ ಮೋದಿಯವರು ಎಲ್ಲಿಂದ ಪ್ರೇರಣೆ ಪಡೆದು ಕೊಂಡರು? ವಿವೇಕಾನಂದರ ಭಾವಚಿತ್ರದೊಡನೆ ತಮ್ಮ ಚಿತ್ರವನ್ನು ಜೋಡಿಸಿಕೊಳ್ಳುವ, ಖಾದಿಬಟ್ಟೆ ಹಾಕಿ ಗಾಂಧಿಯನ್ನು ಮರೆತಿಲ್ಲ ಎಂದು ತೋರಿಸಿಕೊಳ್ಳುವ ಮೋದಿಯವರು ವಿವೇಕಾನಂದರ ಅಥವಾ ಗಾಂಧೀಜಿಯವರ ವಿಚಾರಗಳನ್ನು ಎಳ್ಳಷ್ಟಾದರೂ ತಿಳಿದು ಕೊಂಡಿದ್ದಾರೆಯೆ?

೧೯೩೦ ರ ದಶಕದಲ್ಲಿ ಲಾರ್ಡ್ ಕೇನ್ಸ್ ಎಂಬ ಆರ್ಥಿಕತಜ್ಞ ಹೇಳುತ್ತಿದ್ದ – ನಿಮ್ಮ ಸತ್ಯಸಂಧತೆಯನ್ನು ಕೊಂಚಕಾಲ ಪಕ್ಕಕ್ಕಿಡಿ; ಆಸೆಬುರುಕತನವನ್ನು ಹೆಚ್ಚಿಸಿಕೊಳ್ಳಿ, ಕೆಲಕಾಲ ಕೆಟ್ಟದ್ದನ್ನು ಒಳ್ಳೆಯದೆಂಬಂತೆ ನಟಿಸಿ. ಏಕೆಂದರೆ ಕೆಟ್ಟದ್ದು ಉಪಯುಕ್ತ, ಒಳ್ಳೆಯದು ನಿರುಪಯುಕ್ತ. ಇಂತಹ 'ಕೆಟ್ಟದ್ದು ಉಪಯುಕ್ತ, ಒಳ್ಳೆಯದು ನಿರುಪಯುಕ್ತ' ಎಂಬ 'ಶ್ರದ್ಧೆ' ಯನ್ನು ಇಡೀ ದೇಶದ ಜನ ಬೆಳೆಸಿಕೊಂಡಾಗ ಮಾತ್ರ ಮೋದಿ ಕಲ್ಪನೆಯ ಅಭಿವೃದ್ಧಿ ಸಾಧ್ಯವಾಗುತ್ತದೆ. ಅಡಂ ಸ್ಮಿತ್ ಎಂಬ 'ಆರ್ಥಿಕ ಪಿತಾಮಹ'ನ ಮತ್ತೊಂದು ಹೇಳಿಕೆಯೂ ನಮ್ಮ ಮೋದಿಯವರಿಗೆ ಪ್ರೇರಣೆ ನೀಡಿರಬಹುದು. ಅವನು ಹೇಳುತ್ತಿದ್ದ, "ಒಳ್ಳೆಯದನ್ನು ಮಾಡಲು ಹೆಣಗಬೇಡಿ; ಒಳ್ಳೆಯದು ಎಂಬುದು ನಿಮ್ಮ ಸ್ವಾರ್ಥ ಸಾಧನೆಯ ಉಪಉತ್ಪನ್ನವಷ್ಟೇ ಆಗಿರಲಿ"

ಅಳತೆಗೆ ಸಿಕ್ಕುವ ಜಿ.ಡಿ.ಪಿ.(ಒಟ್ಟಾರೆ ರಾಷ್ಟ್ರೀಯ ಉತ್ಪನ್ನ) ಆಧಾರಿತ ಪ್ರಗತಿಯನ್ನು ಸಾಧಿಸಲು ಈ ಉಪದೇಶಗಳು ಸಹಾಯ ಮಾಡಬಹುದು. ಈ



ಜಿ.ಡಿ.ಪಿ ಜಾಡ್ಯದಿಂದ ಇಡೀ ದೇಶವೇ ನರಳುತ್ತಿರುವ ಇಂತಹ ಪರಿಸ್ಥಿತಿಯಲ್ಲಿ ವಿವೇಕಾನಂದ–ಗಾಂಧಿಯವರ ಪ್ರಗತಿ–ಅಭಿವೃದ್ಧಿಯ ದೃಷ್ಟಿಕೋನ ಏನು ಎಂಬುದನ್ನು ಪರಿಶೀಲಿಸುವುದು ಮುಖ್ಯ.

ಹೆಚ್ಚು ಉತ್ಪಾದನೆ ಮಾಡುವುದಷ್ಟೆ ನಮ್ಮ ಸಮಸ್ಯೆಗಳಿಗಿರುವ ಪರಿಹಾರ ಎಂದು ಭಾವಿಸುತ್ತ ಇಡೀ ಜಾಗತಿಕ ಪ್ರಪಂಚ ಹೆಚ್ಚು ಹೆಚ್ಚು ಉತ್ಪಾದನೆ ಮಾಡುತ್ತಲೇ ಇದೆ. ಆದರೇನು, ಅಸಮಾನತೆ, ಬಡತನಗಳು ಹೆಚ್ಚುತ್ತಲೇ ಇದೆ. ಸುಖವಾಗಿ ಬದುಕಲು ತಕ್ಕ ಮಟ್ಟಿಗೆ ಇದ್ದವರೂ ಸಹ ತಮ್ಮನ್ನು ಉಳ್ಳವರಿಗೆ ಹೋಲಿಸಿಕೊಂಡು ದುಃಖ ಪಡುತ್ತಿದ್ದಾರೆ. ನೂರೈವತ್ತು ವರ್ಷಗಳ ಹಿಂದೆ ಇದೇ ಪರಿಸ್ಥಿತಿ ಇತ್ತು ಎಂಬುದು ಸ್ವಾಮಿ ವಿವೇಕಾನಂದರ ಮಾತಿನಿಂದ ತಿಳಿಯುತ್ತದೆ. ಅವರು ಹೇಳುತ್ತಾರೆ, "ಕೃತಕ ಅವಶ್ಯಕತೆಗಳನ್ನು ಸೃಷ್ಟಿಸಲಾಗಿದೆ. ಕಡುಬಡವ ಕೂಡ ಅವನಲ್ಲಿ ಹಣ ಇರಲಿ ಇಲ್ಲದಿರಲಿ ಈ ಕೃತಕ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಆಸೆಪಡುತ್ತಾನೆ. ಸಾಧ್ಯವಾಗದೇ ಹೋದಾಗ ಅದಕ್ಕಾಗಿ ಪರಿತಪಿಸುತ್ತಾ ಪ್ರಾಣ ಬಿಡುತ್ತಾನೆ". ಯಂತ್ರಗಳ ಬಳಕೆಯಿಂದ ಮತ್ತು ಉತ್ಪಾದನೆಯ ಹೆಚ್ಚಳದಿಂದ ಸಮಾನತೆ ಸಾಧ್ಯ ಎಂಬ ಮಿಥ್ಯೆಯನ್ನು ಅವರು ಹೀಗೆ ಗುರುತಿಸುತ್ತಾರೆ. "ನೀವು ಕಂಡು ಹಿಡಿಯುವ ಒಂದೊಂದು ಹೊಸ ಯಂತ್ರವೂ ಇಪ್ಪತ್ತು ಜನರನ್ನ ಶ್ರೀಮಂತರನ್ನಾಗಿ ಮಾಡಬಹುದು; ಆದರೆ ಅದು ಇಪ್ಪತ್ತು ಸಾವಿರ ಜನರನ್ನ ದಾರಿದ್ರ್ಯಕ್ಕೆ ತಳ್ಳುತ್ತದೆ".

ಗಾಂಧೀಜಿಯವರ 'ಹಿಂದ್ ಸ್ವರಾಜ್' ಸ್ವಾಮಿ ವಿವೇಕಾನಂದರ ಈ ಮಾತುಗಳ ಮುಂದುವರಿಕೆಯಾಗಿ ಕಾಣುತ್ತದೆಯಲ್ಲವೆ? ವಿವೇಕಾನಂದರು ತಮ್ಮ ಅಲ್ಪ ಜೀವಾವಧಿಯ ಕಾಲದಲ್ಲಿ ಏನನ್ನು ಮಾಡಿ ತೋರಿಸಲಾಗಲಿಲ್ಲವೋ ಅದನ್ನು ಗಾಂಧಿ ತಮ್ಮ ಜೀವಿತಾವಧಿಯಲ್ಲಿ ಮಾಡಿ ತೋರಿಸಿದರು. ಹಾಗಾಗಿ ಗಾಂಧಿ ವಿವೇಕಾನಂದರ ಪ್ರಾಯೋಗಿಕ ಮುಂದುವರಿಕೆಯಾಗಿ ಕಾಣುತ್ತಾರೆ. ಅಭಿವೃದ್ಧಿ, ಸಂಸ್ಕೃತಿ, ಶಿಕ್ಷಣ, ಮತ್ತು ಮಹಿಳಾ ಪ್ರಗತಿಯ ಕುರಿತಾಗಿ ಇಬ್ಬರ ನಿಲುವು ಒಂದೇ ಆಗಿದೆ. ಸ್ತ್ರೀಯರ ಶಿಕ್ಷಣ, ಸ್ವಾತಂತ್ರ್ಯ ಮತ್ತು ಸಮಾನತೆ ಬಗ್ಗೆ ವಿವೇಕಾನಂದರು ಉದಾತ್ತವಾಗಿ ಮಾತನಾಡಿದರೆ ಗಾಂಧಿ ತಮ್ಮ ಪತ್ನಿ ಕಸ್ತೂರ ಬಾ ವಿಷಯದಲ್ಲಿ ಇದನ್ನು ಆಚರಣೆಗೆ ತಂದು ತೋರಿಸಿದರು. ಬ್ರಹ್ಮಚರ್ಯ ಪಾಲನೆ ಮಾಡಿದ ಮೇಲಷ್ಟೆ ನಾನು ನನ್ನ ಹೆಂಡತಿಯನ್ನು ಗೌರವಿಸಲು, ನಿಜವಾಗಿಯೂ ಪ್ರೀತಿಸಲು ಸಾಧ್ಯವಾಯಿತು ಎನ್ನುತ್ತಾರೆ ಗಾಂಧೀಜಿ.

ಯಾವ ಸಂಯಮದ ತತ್ವ, ತನ್ನ ಅರ್ಧಾಂಗಿಯನ್ನು ಅರ್ಥ ಮಾಡಿಕೊಳ್ಳಲು, ಪ್ರೀತಿಸಲು ನೆರವಾಯಿತೋ ಅದೇ ತತ್ವ ಸ್ವರಾಜ್ಯಗಳಿಸಲು ಕೂಡ ನೆರವಾಗುತ್ತದೆ ಎಂಬ ನಂಬಿಕೆ ಗಾಂಧೀಜಿಗೆ ಇತ್ತು. ಗಾಂಧೀಜಿ 'ಸ್ವರಾಜ್ಯ'ಕ್ಕೆ ಸಂಯಮದ ಆಯಾಮವನ್ನು ನೀಡಿದರು. ಈ ಸ್ವರಾಜ್ಯ ಅಂತರಂಗದ ಸಾಮ್ರಾಜ್ಯದಲ್ಲಿ ಸಂಯಮ ಮತ್ತು ನಿಗ್ರಹಗಳನ್ನು ಗಳಿಸುವ ಮೂಲಕ ಹೊರ ಜಗತ್ತಿನಲ್ಲಿ ಗಳಿಸಿಕೊಳ್ಳಬಹುದಾದ ಸ್ವರಾಜ್ಯವಾಗಿತ್ತು. ವ್ಯಕ್ತಿಯೊಬ್ಬ ತನ್ನೊಳಗೇ ಸ್ವಾತಂತ್ರ್ಯ ಪಡೆಯದೆ ಹೊರಜಗತ್ತಿನಲ್ಲಿ ತನ್ನನ್ನೇ ತಾನು ಸ್ವತಂತ್ರ ಎಂದು ಘೋಷಿಸಿಕೊಳ್ಳುವುದಾದರೂ ಹೇಗೆ? ಅಂತರಂಗದಲ್ಲಿ ಸಂಯಮ ಸಾಧಿಸಿ ಪಡೆಯಬಹುದಾದ ಸ್ವರಾಜ್ಯವೇ ನಿಜವಾದ ಸ್ವರಾಜ್ಯ. ಅವರ ಪ್ರಕಾರ ಭಾರತ ಬ್ರಿಟಿಷರ ಕೈವಶವಾದದ್ದು ಕೇವಲ ಬ್ರಿಟಿಷರ ಆಕ್ರಮಣದಿಂದಲ್ಲ. ಬದಲಾಗಿ ಭಾರತೀಯರಿಗೆ ಸಂಯಮವಿಲ್ಲದೆ ಬ್ರಿಟಿಷರ ಪದಾರ್ಥಗಳಿಗೆ ಮಾರು ಹೋಗಿದ್ದು ಮುಖ್ಯ ಕಾರಣವಾಗುತ್ತದೆ. ಅಂತರಂಗದ ಸ್ವಾತಂತ್ರ್ಯವನ್ನು ಗಳಿಸದೆ ಕೇವಲ ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿದರೆ ಅದು ಬಹುಬೇಗ ಕುಸಿಯುತ್ತದೆ. ಏಕೆಂದರೆ ನಾವು ಸಮಸ್ಯೆಯ ಮೂಲವನ್ನು ತಡಕಿ ಸರಿಪಡಿಸಲು ಕೆಲಸ ಮಾಡಿಲ್ಲ. ಮನಸ್ಸಿನೊಳಗಿನ ಪರಿಸರವನ್ನು ಬದಲಿಸುವ ಮೂಲಕ ಮಾತ್ರ ನಾವು ಭೌತಿಕ ಪರಿಸರವನ್ನು ಬದಲಿಸಬಲ್ಲೆವು ಎಂದು ಗಾಂಧಿ ನಂಬಿದ್ದರು.

ಗಾಂಧೀಜಿ ಮನುಷ್ಯ ಮನಸ್ಸಿನ ದೌರ್ಬಲ್ಯಗಳನ್ನು ಸ್ವತಃ ಅನುಭವಿಸಿದವರು. ಅವುಗಳಿಂದ ಬಿಡುಗಡೆ ಪಡೆಯಲು ಹೆಣಗುತ್ತಿರುವ ಸಾಧಾರಣ ಮನುಷ್ಯ ತಾನೆಂದು ಹೇಳಿಕೊಂಡವರು. ಹಾಗಾಗಿ ಭಾರತದ ಕೋಟ್ಯಾಂತರ ಜನ ಸಂಯಮದಿಂದ ಬಾಳುವ ಮೂಲಕ ಮಾತ್ರ ನಿಜವಾದ ಸ್ವಾತಂತ್ರ್ಯದ ವಾರಸುದಾರರಾಗುತ್ತಾರೆ ಎಂಬುದು ಅವರ ನಂಬಿಕೆ. ಇಂತಹ ಸಂಯಮದ ಬದುಕು ಸಾಧ್ಯವಾಗುವುದು ಹಳ್ಳಿಗಳಲ್ಲಿ ಮಾತ್ರ ಎಂದು ಅವರಿಗೆ ಮನವರಿಕೆಯಾಗಿತ್ತು. ಅಹಿಂಸೆ ಮತ್ತು ಸತ್ಯ ಸಾಧ್ಯವಾಗುವುದು ಹಳ್ಳಿಗಳಲ್ಲೇ ಹೊರತು ಪಟ್ಟಣಗಳಲ್ಲಿ ಅಲ್ಲ ಎಂದು ನೆಹರು ಅವರಿಗೆ ಬರೆದ ಪತ್ರವೊಂದರಲ್ಲಿ ಹೇಳುತ್ತಾರೆ.



ಸ್ವಾಮಿ ವಿವೇಕಾನಂದರೂ ಸಹ ಈ ಅಂತರಂಗದ ಸ್ವಾತಂತ್ರ್ಯವನ್ನೇ ಕುರಿತು ಮಾತನಾಡಿದರು. ಸಮಸ್ತ ಜೀವಕೋಟಿಯ ಏಕತೆಯನ್ನು ಗುರುತಿಸುತ್ತ, ಈ ಏಕತೆಯನ್ನು ಅನುಭವಿಸುತ್ತ ನೀವು ನಿಜವಾದ ಸ್ವಾತಂತ್ರ್ಯವನ್ನು ಪಡೆಯುತ್ತೀರಿ ಎಂದು ಹೇಳಿದರು. ನಮ್ಮ ಒಳಗೇ ಇದ್ದು ನಮ್ಮನ್ನಾಳುವ ಶಕ್ತಿಗಳಿಂದ ಪಾರಾಗುವ ಬಗೆಯನ್ನು ಅವರು ಹೇಳಿದರು. ಗಾಂಧೀಜಿ ಸಹ ಸಮಾಜದ ಕಟ್ಟಕಡೆಯ ಮನುಷ್ಯನನ್ನು ಗಮನದಲ್ಲಿಟ್ಟುಕೊಂಡು ಕೆಲಸಮಾಡಿದರು. ಗಾಂಧೀಜಿಯ ಅಭಿವೃದ್ಧಿ ಅಧ್ಯಾತ್ಮ ಪ್ರಧಾನವಾದ, ಸುಖಲೋಲುಪತೆಗಳನ್ನು ದೂರವಿಟ್ಟಿರುವ, ಸಾಂಸ್ಕೃತಿಕ ವೈವಿಧ್ಯತೆಯನ್ನು ಎತ್ತಿ ಹಿಡಿಯುವ ಅಭಿವೃದ್ಧಿ. ಆದರೆ ಆಡಂ ಸ್ಮಿತ್ ಅಥವಾ ಲಾರ್ಡ್ ಕೇನ್ಸ್‌ನ ಸಂತಾನವಾದ ನಮ್ಮ ಮೋದಿಗೆ ಮೋಹಕ 'ಸ್ಮಾರ್ಟ್ ಸಿಟಿ' ಮಾದರಿಯ ಅಭಿವೃದ್ಧಿ ಮಾತ್ರ ಕಣ್ಣಿಗೆ ಕಾಣುತ್ತಿದೆ.

ಒಂದು ದೇಶದ ಅರ್ಥವ್ಯವಸ್ಥೆಯ ಆದ್ಯತೆಗಳು ಆ ಸಮಾಜದ ನೈತಿಕತೆಗೆ ಹಿಡಿದ ಕನ್ನಡಿ. ಅಥವಾ ಅರ್ಥವ್ಯವಸ್ಥೆಯ ಆದ್ಯತೆಗಳು ಒಂದು ಸಮಾಜದ ಒಟ್ಟಾರೆ ಮೌಲ್ಯಗಳನ್ನು ರೂಪಿಸುವ ಉಳಿ. ಶೋಷಣೆಯನ್ನು ನಿಯಂತ್ರಣದಲ್ಲಿಡಬಲ್ಲ ಅರ್ಥವ್ಯವಸ್ಥೆಗೆ ನೈತಿಕ ಮೌಲ್ಯವಿದೆ ಎನ್ನಬಹುದು. ಬೃಹತ್ ಉತ್ಪಾದನಾ ವ್ಯವಸ್ಥೆಯನ್ನು ನಾವು ಕೇವಲ ಖರ್ಚು–ವೆಚ್ಚಗಳ ಆಧಾರದಿಂದ ಅಳತೆಮಾಡಿ ಅದು 'ಕಾಸ್ಟ್ ಎಫೆಕ್ಟಿವ್' ಆಗಿದೆ ಎಂದು ಪರಿಗಣಿಸುತ್ತೇವೆ. ಆದರೆ ಬೃಹತ್ ಉತ್ಪಾದನಾ ವ್ಯವಸ್ಥೆ ಅನಿವಾರ್ಯವಾಗಿ ಶೋಷಣೆಗೆ ಎಡೆಮಾಡಿಕೊಡುವ ಮೂಲಕ ತನ್ನ ಸಾಧನೆಯ ಹೆಚ್ಚಳವನ್ನು ತೋರಿಸುತ್ತದೆ. ಸಣ್ಣ ಉತ್ಪಾದನಾ ಘಟಕಗಳೆಲ್ಲವೂ ಶೋಷಣಾರಹಿತವಾಗಿರುತ್ತವೆ ಎಂದು ಇದರ ಅರ್ಥವಲ್ಲ. ಇಲ್ಲಿ ಮಿತಿಮೀರಿದ ಸಂಪತ್ತಿನ ಧೃವೀಕರಣ ಸಾಧ್ಯವಾಗದೇ ಇರುವುದರಿಂದ ಶೋಷಣೆ ಮತ್ತು ಅಸಮಾನತೆಗಳು ಕನಿಷ್ಠ ಮಟ್ಟದಲ್ಲಿರುತ್ತವೆ. ಎಂದರೆ ದುರಾಸೆಗಳನ್ನು ಈಡೇರಿಸಿಕೊಳ್ಳಬಹುದಾದ ದೊಡ್ಡ ಸಾಧ್ಯತೆಗಳು ಇಲ್ಲಿ ಇಲ್ಲ. ಹಾಗಾಗಿ ಗಾಂಧಿ ಕಲ್ಪನೆಯ ಅಂತರಂಗದ ಸ್ವರಾಜ್ಯಕ್ಕೆ ಚರಕ, ಖಾದಿ ಮತ್ತು ಗ್ರಾಮೋದ್ಯೋಗಗಳು ಪೂರಕವಾಗಿವೆ. ಇವು ವಸ್ತು ಉತ್ಪಾದನೆಯ ಜೊತೆಜೊತೆಗೆ ಶೋಷಣಾರಹಿತ ಮನೋಧರ್ಮದ ಹುಟ್ಟಿಗೂ ಪೂರಕವಾಗಿರುತ್ತವೆ.

ಆದರೆ ಇಂದಿನ ವಾಸ್ತವವೇ ಬೇರೆ. ಇಡೀ ಜಗತ್ತೇ ಬದಲಾಗಿರುವ ಈ ವಿಕೃತ ವರ್ತಮಾನದಲ್ಲಿ ಗಾಂಧಿ ಆದರ್ಶಗಳು ಕೇವಲ ಆದರ್ಶಗಳಾಗಿಯೆ ಉಳಿಯಬೇಕಲ್ಲದೆ ಮತ್ತೇನು ಎಂದು ಪ್ರಶ್ನಿಸುವವರೆ ಹೆಚ್ಚು. ಆದರೆ ಮನುಕುಲ ಬದಲಾಗದೆ ಯಾರಿಗೂ ಉಳಿಗಾಲವಿಲ್ಲ ಎಂಬ (ಗಾಂಧಿ)ಸತ್ಯವನ್ನು ಅತ್ಯಂತ ವೈಜ್ಞಾನಿಕವಾಗಿ ಈ ಆಧುನಿಕ ಕಾಲದಲ್ಲಿ ತಿಳಿಸಿಕೊಡುತ್ತಿರುವವರು ಗಾಂಧಿವಾದಿಗಳಲ್ಲ. ಪರಿಸರವಾದಿಗಳು ಮತ್ತು ಆರ್ಥಿಕ ತಜ್ಞರು ಪ್ರೊ. ಜೋಸೆಫ್ ಸ್ಟಿಗ್ಲಿಟ್ಸ್ ಎಂಬ ನೊಬೆಲ್ ಪ್ರಶಸ್ತಿ ಪುರಸ್ಕೃತ ಆರ್ಥಿಕತಜ್ಞ ತನ್ನ ಗುರು ಪ್ರೊ. ಉಜುವಾ ಕುರಿತು ಮಾತನಾಡುವಾಗ ಅರ್ಥವ್ಯವಸ್ಥೆಯಲ್ಲಿ ನೈತಿಕ ಬದ್ಧತೆಯನ್ನು ಕುರಿತು ಮಾತನಾಡುತ್ತಾನೆ. ಇದು ಇಲ್ಲದಿರುವುದರಿಂದ ಮುಂಬರುವ ವರ್ಷಗಳಲ್ಲಿ ಅಸಮಾನತೆ ಜಾಗತಿಕವಾಗಿ ಹೇಗೆ ಹೆಚ್ಚುತ್ತಲೇ ಹೋಗುತ್ತದೆಂಬುದನ್ನು ಗಣಿತಮಾದರಿಗಳಿಂದ ರುಜುವಾತುಪಡಿಸುತ್ತಾರೆ. ಮುಂಬರುವ ದಿನಗಳಲ್ಲಿ ಐಶಾರಾಮಿ ಜೀವನದ ಆಯ್ಕೆಗಳು ಕಡಿಮೆ ಆಗುತ್ತಲೇ ಹೋಗುತ್ತವೆ. ಆದರೇನು ಪ್ರಲೋಭನೆಗಳು ಹೆಚ್ಚುತ್ತಲೇ ಹೋಗುತ್ತವೆ. ಗಾಂಧಿ ಕಡಿವಾಣ ಕೆಲಸಮಾಡಬಲ್ಲುದೆ? ಕಾದುನೋಡಬೇಕು.



**(ವೃತ್ತಿಯಿಂದ ಪ್ರಾಣಿಶಾಸ್ತ್ರ ಅಧ್ಯಾಪಕರಾಗಿದ್ದ ಲೇಖಕ ಜಿ.ಎಸ್. ಜಯದೇವ ಅವರು ಕೆಲಕಾಲ ಡಾ. ಸುದರ್ಶನ್ ಅವರೊಂದಿಗೆ ಬಿಳಿಗಿರಿರಂಗನ ಬೆಟ್ಟದಲ್ಲಿ ಸೋಲಿಗರ ಕಲ್ಯಾಣ ಕಾರ್ಯಕ್ರಮಗಳಲ್ಲಿ ತೊಡಗಿಕೊಂಡಿದ್ದರಾದರೂ, ಕಳೆದ ಕೆಲ ವರ್ಷಗಳಿಂದ ಚಾಮರಾಜನಗರದಲ್ಲಿ 'ದೀನಬಂಧು' ಎಂಬ ಮಕ್ಕಳ ಅನಾಥಾಶ್ರಮ ಮತ್ತು ಶಾಲೆಯೊಂದನ್ನು ನಡೆಸುತ್ತಿದ್ದಾರೆ)**

# ನಾಸ್ತಿಕನೊಬ್ಬನ ತಿಳಿವಿನಲ್ಲಿ ಗಾಂಧಿ

- ಲವಣಮ್

ಗಾಂಧಿಯವರೊಂದಿಗೆ ಸಂವಾದಿಸಿ ಅವರ ಆಪ್ತರಲ್ಲೊಬ್ಬರಾಗಿ ಗಾಂಧಿ ಆಶ್ರಮದಲ್ಲಿ ಸಂಸಾರಿಯಾಗಿ ನೆಲೆಸಿದ ನಾಸ್ತಿಕ ಚಿಂತಕ ಗೋರಾ ಅವರ ಮಗ ಲವಣಂ ತಾವು ಕಂಡ, ಪರಿಭಾವಿಸಿಕೊಂಡ ಗಾಂಧಿಯನ್ನು ಇಲ್ಲಿ ಕೆಲ ಅಪರೂಪದ ಒಳನೋಟಗಳೊಂದಿಗೆ ಪ್ರಸ್ತುತಪಡಿಸಿದ್ದಾರೆ–ಸಂ.



ನಾಸ್ತಿಕ ಗೋರಾ ಅವರೊಂದಿಗೆ ಗಾಂಧಿ

೧೯೪೫–೪೬ರಲ್ಲಿ ನನ್ನ ತಂದೆ ಗೋರಾ (ಗೋಪರಾಜು ರಾಮಚಂದ್ರ ರಾವ್, ನಾಸ್ತಿಕವಾದದ ಒಬ್ಬ ದಣಿವರಿಯದ ಧರ್ಮಯೋಧ) ಅವರು ಗಾಂಧಿಯವರನ್ನು ನಾಸ್ತಿಕವಾದವನ್ನು ಕುರಿತ ಒಂದು ಸರಣಿ ಚರ್ಚೆಯಲ್ಲಿ ತೊಡಗಿಸಿದರು. ಈ ಸಮಯಕ್ಕೆ ಗಾಂಧೀಜಿ ನಮ್ಮ ಕುಟುಂಬದ ಎಲ್ಲಾ ಸದಸ್ಯರನ್ನೂ ಸೇವಾಗ್ರಾಮದ ತಮ್ಮ ಆಶ್ರಮಕ್ಕೆ ಆಹ್ವಾನಿಸಿದರು. ಮೂರು ತಿಂಗಳ ಕಾಲ ಅವರೊಂದಿಗೆ ಇದ್ದು ಅವರನ್ನು ಸಮೀಪದಿಂದ ಗಮನಿಸುವ ಅವಕಾಶ ನನಗೆ ದೊರೆಯಿತು. ನಂತರ ನಾನು ಗಾಂಧೀಜಿಯವರ ನಿಕಟ ಅನುಯಾಯಿಯಾದ ವಿನೋಬಾ ಭಾವೆಯವರ ಸರ್ವೋದಯ ಚಳುವಳಿಯಲ್ಲಿ ಭಾಗವಹಿಸಿದೆ. ಗಾಂಧೀಜಿಯವರ ಅನುಯಾಯಿಗಳು ಅವರನ್ನು ಹೇಗೆ ಮೆಚ್ಚಿಕೊಳ್ಳುತ್ತಿದ್ದರು ಎಂಬುದನ್ನು ವಿಶ್ಲೇಷಣಾತ್ಮಕವಾಗಿ ಅಧ್ಯಯನ ಮಾಡಲು ನಾನು ಈ ಅವಕಾಶವನ್ನು ಬಳಸಿಕೊಂಡೆ. ರಾಧಾಕೃಷ್ಣಮೂರ್ತಿಯವರೇನಾದರೂ ಇಂದು ಬದುಕಿದ್ದರೆ ಅವರು ಬಹುಮಟ್ಟಿಗೆ ನನ್ನ ಅಭಿಪ್ರಾಯವನ್ನು ಒಪ್ಪುತ್ತಿದ್ದರು. ಏಕೆಂದರೆ ಮೂಲಭೂತವಾಗಿ ನಾವಿಬ್ಬರೂ ನಾಸ್ತಿಕರಾಗಿದ್ದೆವು.

ನಾನು ಆಗಾಗ ವಿಶ್ವದಾದ್ಯಂತ ಪ್ರವಾಸ ಮಾಡುತ್ತಿದ್ದ ಸಂದರ್ಭಗಳಲ್ಲಿ ಅಲ್ಲಲ್ಲಿ ನಾನು ಗಾಂಧೀಜಿಯವರನ್ನು ಕುರಿತು ಭಾಷಣ ಮಾಡಬೇಕಾಗುತ್ತಿತ್ತು. ೧೯೯೪ರಲ್ಲಿ ನಾನು ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಮಾತನಾಡಿದಾಗ, ಸಭೆಯಲ್ಲಿ ಪಾಲ್ಗೊಂಡವರಲ್ಲೊಬ್ಬರು ಹಲವಾರು ಮುಖ್ಯ ಪ್ರಶ್ನೆಗಳನ್ನೆತ್ತಿದರು. ಅವರ ಕುತೂಹಲವನ್ನು ಬಹುಮಟ್ಟಿಗೆ ತೃಪ್ತಿಪಡಿಸಿದ್ದರ ಬಗ್ಗೆ ನನಗೆ ಸಂತೋಷವಿದೆ. “ನೀವು ಹೇಳಿದ ವಿಚಾರಗಳನ್ನು ಹೊಂದಿರುವ ಪುಸ್ತಕ ಯಾವುದೆಂದು ತಿಳಿಸಿದರೆ ನಾನದನ್ನು ಪಡೆಯಬಯಸುತ್ತೇನೆ” ಎಂಬುದಾಗಿ ಅವರು ಹೇಳಿದರು. ನಾನು ಒಂದು ಪುಸ್ತಕವನ್ನು ಬರೆದಾಗ ಮಾತ್ರ ಅದು ಸಾಧ್ಯವೆಂದೂ, ನಾನಿನ್ನೂ ಅದನ್ನು ಬರೆದಿಲ್ಲವೆಂದೂ ನಾನು ತಿಳಿಸಿದೆ. “ಹಾಗಾದರೆ ನೀವೇಕೆ ಅದನ್ನು ಈಗಲೇ ಬರೆಯಬಾರದು?” ಎಂಬುದಾಗಿ ಅವರು ಕೇಳಿದರು. “ಯಾರಾದರೂ ಕೆಲಕಾಲ ನನ್ನೊಂದಿಗಿದ್ದು ಗಾಂಧೀಜಿಯವರ ಕೃತಿಗಳನ್ನು ಹೊಸದಾಗಿ ಅಧ್ಯಯನ ಮಾಡಲು ಸಹಾಯ ಮಾಡುವುದಕ್ಕೆ ಸಿದ್ಧರಿದ್ದರೆ ಪುಸ್ತಕ ಬರೆಯಲು ಖಂಡಿತ ನನಗೆ ಇಷ್ಟವಿದೆ” ಎಂದು ನಾನು ಹೇಳಿದೆ. ಮರುದಿನ ಆ ವ್ಯಕ್ತಿ ನನ್ನನ್ನು ಭೇಟಿಮಾಡಿ ಅಗತ್ಯವಿರುವಷ್ಟು ಕಾಲ ಅವರು ನನ್ನೊಂದಿಗಿರಲು ಸಿದ್ಧ ಎಂಬುದನ್ನು ತಿಳಿಸಿದರು. ಅವರೇ ಪ್ರೊ. ಮಾರ್ಕ್ ಲಿಂಡ್ಲೆ. ಆ ಸಮಯಕ್ಕೆ ಅವರು ಹಾರ್ವರ್ಡ್ ವಿಶ್ವವಿದ್ಯಾಲಯದ ಮಾನವತಾ ಅಧ್ಯಯನ ವಿಭಾಗದ ಸಹಾಯಕ ಗುರುವಾಗಿದ್ದರು. ಅವರು ಅಮೆರಿಕಾದ ಮಾನವತಾವಾದಿ ಸಂಘದ ಸದಸ್ಯರಾಗಿದ್ದು ಯೂರೋಪ್ ಮತ್ತು ಏಷ್ಯಾಗಳಲ್ಲಿ ವ್ಯಾಪಕವಾಗಿ ಪ್ರವಾಸ ಮಾಡಿದ್ದರು. ಹಾಗೆಯೇ ಅವರು ಸಂಗೀತದ ಪ್ರಾಧ್ಯಾಪಕರಾಗಿ ಹಾಂಕಾಂಗ್, ಇಂಗ್ಲೆಂಡ್, ಇಟಲಿ ಮತ್ತು ಅಮೆರಿಕಾದ ವಿಶ್ವವಿದ್ಯಾಲಯಗಳಲ್ಲಿ ಸಹ ಕೆಲಸಮಾಡುತ್ತಿದ್ದರು. ಈ ಹಿನ್ನೆಲೆಯಲ್ಲಿ ಅವರು ನನ್ನೊಡನೆ ಸಮಯ ಕಳೆಯುವ ಪ್ರಸ್ತಾಪ ಮಾಡಿದಾಗ ನನಗೆ ಅಪಾರವಾದ ಸಂತೋಷವಾಯಿತು. ಆ ನಂತರದಲ್ಲಿ ಅವರು ಪ್ರತಿವರ್ಷಕ್ಕೆ ನಾಲ್ಕು ತಿಂಗಳಿನಂತೆ ಮೂರುವರ್ಷ ನನ್ನೊಂದಿಗೆ ಭಾರತದಲ್ಲಿ ಇರುತ್ತಿದ್ದರು. ನಾವಿಬ್ಬರೂ ಒಟ್ಟಾಗಿ ಭಾರತ ಸರ್ಕಾರವು ಪ್ರಕಟಿಸಿದ ಗಾಂಧೀಜಿಯವರ ಹೆಚ್ಚೂ ಕಡಿಮೆ ನೂರರಷ್ಟು ಸಂಪುಟಗಳನ್ನು ಅಧ್ಯಯನ ಮಾಡಿದೆವು. ನಾವಿಬ್ಬರೂ ಕೂಡಿ ‘ನಮಗೆ ತಿಳಿದಂತೆ ಗಾಂಧಿ’ ಎಂಬ ಪುಸ್ತಕವನ್ನು ಇಂಗ್ಲಿಷ್‌ನಲ್ಲಿ ಬರೆದೆವು. ಅದು ಅಮೆರಿಕದಲ್ಲಿ, ಯೂರೋಪ್‌ನಲ್ಲಿ ಹಾಗೆಯೇ ಭಾರತದಲ್ಲಿಯೂ ಸಹ ಜನಪ್ರಿಯವಾಯಿತು. ಈ ಹಿನ್ನೆಲೆಯಲ್ಲಿ ನಾನು ಗಾಂಧೀಜಿಯವರನ್ನು ಹೇಗೆ ವಿಶ್ಲೇಷಿಸಬೇಕು ಮತ್ತು ಅರ್ಥಮಾಡಿಕೊಳ್ಳಬೇಕು ಎಂಬ ವಿಚಾರದಲ್ಲಿ ನನ್ನ ಕೆಲವು ಚಿಂತನೆಗಳನ್ನು ಹಂಚಿಕೊಳ್ಳಬಯಸುತ್ತೇನೆ.

ದಕ್ಷಿಣ ಆಫ್ರಿಕಾಕ್ಕೆ ಹೋಗುವವರೆಗೂ ಗಾಂಧೀಜಿ ಒಬ್ಬ ಸಂಕೋಚ ಪ್ರವೃತ್ತಿಯ ವ್ಯಕ್ತಿಯಾಗಿದ್ದರು. ಪ್ರತಿಯೊಬ್ಬರೂ ಅವರನ್ನು ಯಾವ ಪ್ರಾಮುಖ್ಯತೆಯೂ ಇಲ್ಲದ ಒಬ್ಬ ಸಾಧಾರಣ ವ್ಯಕ್ತಿಯೆಂದು ಪರಿಗಣಿಸುತ್ತಿದ್ದರು. ಬರೀ ಮೆಟ್ರಿಕ್ಯುಲೇಷನ್‌ನಲ್ಲಿ ತೇರ್ಗಡೆಯಾಗಿ ಕಾಲೇಜಿನಲ್ಲಿ ಇಂಟರ್‌ಮೀಡಿಯೇಟ್‌ಗೆ ಸೇರ್ಪಡೆಯಾದರು. ಗಣಿತಶಾಸ್ತ್ರದಲ್ಲಿ ಸ್ವಲ್ಪ ಹಿಂದಿದ್ದ ಅವರು ಅಧ್ಯಾಪಕರ ಬಗ್ಗೆ ವಸ್ತುಶಃ ಎಷ್ಟೊಂದು ಭೀತರಾಗಿದ್ದರೆಂದರೆ ಅವರು ತಮ್ಮ ವಿದ್ಯಾಭ್ಯಾಸವನ್ನೇ ತೊರೆದರು. ನಂತರ ಇಂಗ್ಲೆಂಡ್‌ಗೆ ತೆರಳಿದರು. ಆ ಕಾಲದಲ್ಲಿ ನಿಯಮಿತವಾಗಿ ತರಗತಿಗಳಿಗೆ ಹಾಜರಾಗಿ ಕಾನೂನಿನ ಬಗೆಗಿನ ಉಪನ್ಯಾಸಗಳನ್ನು ಕೇಳಿ ಯಾವುದೇ ರೀತಿಯ ಪರೀಕ್ಷೆಯನ್ನೂ ಬರೆಯದೆ ಪದವಿಯನ್ನು ಪಡೆಯುವ ಒಂದು ವ್ಯವಸ್ಥೆ ಇತ್ತು. ಗಾಂಧೀಜಿ ಆ ರೀತಿಯಲ್ಲಿ ಬ್ಯಾರಿಸ್ಟರ್ ಆದರು.

ಬಾಲ್ಯದಿಂದಲೂ ಅವರು ಸತ್ಯದ ಬಗೆಗೆ ಉನ್ನತವಾದ ಆದರವನ್ನೂ ಗೌರವವನ್ನೂ ಹೊಂದಿದ್ದರು. ಅವರು ಭಾರತದಲ್ಲಿ ವಕೀಲವೃತ್ತಿ ಪ್ರಾರಂಭಿಸಿದಾಗ ಪ್ರತಿಯೊಂದು ಮೊಕದ್ದಮೆಯಲ್ಲಿಯೂ ಅಸತ್ಯದ ಅಂಶಗಳಿರುವುದನ್ನು ಕಂಡು ವಕೀಲ ವೃತ್ತಿಯನ್ನು ತೊರೆದರು. ೧೮೯೩ರಲ್ಲಿ ಅವರು ಸೇಟ್ ಅಬ್ದುಲ್ಲಾರ ವ್ಯವಹಾರಗಳಿಗೆ ಕಾನೂನು ಸಲಹೆಗಾರರಾಗಿ ದಕ್ಷಿಣ ಆಫ್ರಿಕಾಕ್ಕೆ ತೆರಳಿದರು. ಜೊಹಾನ್ಸ್‌ಬರ್ಗ್‌ಗೆ ಪ್ರಯಾಣಿಸುವುದಕ್ಕಾಗಿ ಒಂದು ಪ್ರಥಮ ದರ್ಜೆ ಟಿಕೆಟ್ ಕೊಂಡು ಗಾಂಧೀಜಿ ದರ್ಬಾನ್‌ನಲ್ಲಿ ರೈಲು ಹತ್ತಿದರು. ಪ್ರಥಮದರ್ಜೆಯಲ್ಲಿ ಬಿಳಿಯ ಪ್ರಯಾಣಿಕರಿದ್ದಾಗ ಇತರೆ ಯಾರಾದರೂ ಪ್ರಥಮ ದರ್ಜೆ ಟಿಕೆಟ್ ಕೊಂಡಿದ್ದರೂ ಸಹ ಆ ದರ್ಜೆಯಲ್ಲಿ ಪ್ರಯಾಣಿಸುವಂತಿಲ್ಲ ಎಂಬುದು ಅಂದಿನ ಅಲ್ಲಿನ ನಿಯಮವಾಗಿತ್ತು. ಆದರೆ ಗಾಂಧಿ ಪ್ರಥಮದರ್ಜೆ ರೈಲ್ವೇ ಬೋಗಿಯಿಂದ ಹೊರ ಹೋಗಲು ನಿರಾಕರಿಸಿದಾಗ ಅವರನ್ನು ಮುಂದಿನ ನಿಲ್ದಾಣದಲ್ಲಿ ಪ್ಲಾಟ್‌ಫಾರಂನ ಮೇಲೆ ದೂಡಲಾಗಿತ್ತು. ಅವರಿಗೆ ಬಹಳ ನೋವಾಯಿತು ಮತ್ತು ಪ್ರತಿಯೊಬ್ಬರೂ ತಮ್ಮ ಘನತೆ ಮತ್ತು ಆತ್ಮಗೌರವವನ್ನು ಎತ್ತಿಹಿಡಿಯಬೇಕಾದ ಅಗತ್ಯ ಅವರಿಗೆ ಮನವರಿಕೆಯಾಯಿತು. ಅಲ್ಲಿ ಬದುಕುತ್ತಿದ್ದ ಎಲ್ಲಾ ಭಾರತೀಯರಿಗೆ ಸಹಾಯ ಮಾಡುವ ದೃಷ್ಟಿಯಿಂದ ಒಂದು ಸಂಘಟಿತ ಪ್ರಯತ್ನ ನಡೆಸಬೇಕೆಂದು ಅಲ್ಲೇ, ಆ ಕ್ಷಣ ಅವರು ನಿರ್ಧರಿಸಿದರು. ಚಳುವಳಿಯು ಸತ್ಯ ಮತ್ತು ಅಹಿಂಸೆಯ ಆಧಾರದ ಮೇಲೆ ನಡೆಯಬೇಕೆಂದೂ ಸಹ ಅವರು ನಿರ್ಧರಿಸಿದರು. ಪ್ರಪಂಚವು ಹಿಂದೆಂದೂ ಕಂಡಿರದಂತಹ ಚಳುವಳಿ ಅದು.

ಆ ಸಮಯದಲ್ಲಿ ಮೂರು ಬಗೆಯ ವ್ಯಕ್ತಿವಿಶೇಷಗಳು ಗಾಂಧೀಜಿಯವರಲ್ಲಿ ಮೂರ್ತೀಭವಿಸಿದ್ದವು– ಒಂದು ಸಂಪ್ರದಾಯವಾದ; ಎರಡು, ಭವಿಷ್ಯಕ್ಕಾಗಿ ಕಾರ್ಯಾಚರಣೆ ಮತ್ತು ಮೂರನೆಯದು, ಕ್ರಾಂತಿಕಾರಕತೆ. ಗಾಂಧೀಜಿಯವರ ಈ ಮೂರು ವ್ಯಕ್ತಿಗತ ಗುಣಗಳ ಕಡೆಯಿಂದ ಅವರನ್ನು ಅರ್ಥಮಾಡಿಕೊಳ್ಳುವುದಕ್ಕಾಗಿ ಮತ್ತೊಂದು ಕೋನದಿಂದಲೂ ಸಹ ನೋಡುವುದು ಅಗತ್ಯವಾಗಿತ್ತು. ಅವರೊಳಗೆ ಸ್ಪಷ್ಟವಾಗಿ ಎರಡು ವಿಭಿನ್ನ ಲೋಕದೃಷ್ಟಿಗಳು

**ತನ್ನನ್ನು ಯಾರಾದರೂ ಅತಿಕ್ರಮಿಸಲು ಪ್ರಯತ್ನಿಸಿದರೆ ಆಗ ತನ್ನನ್ನು ತಾನು ಹೇಗೆ ರಕ್ಷಿಸಿಕೊಳ್ಳಬೇಕು ಎಂಬುದಾಗಿ ಮಹಿಳೆಯೊಬ್ಬಳು ಅವರನ್ನು ಕೇಳಿದಳು. 'ದೇವರು ನಿನಗೆ ಹಲ್ಲು ಮತ್ತು ಉಗುರುಗಳನ್ನು ನೀಡಿದ್ದಾನೆ' ಎಂಬುದಾಗಿ ಗಾಂಧಿ ಉತ್ತರಿಸಿದರು.**

ಅಂತರ್ಗತವಾಗಿದ್ದವು– ಒಬ್ಬ ವ್ಯಕ್ತಿಯಾಗಿ ಮತ್ತು ಒಬ್ಬ ಸಮಾಜ ಜೀವಿಯಾಗಿ. ನಮ್ಮಲ್ಲಿ ಭಿನ್ನಾಭಿಪ್ರಾಯ ಮೂಡಿಸುವ ವಿಚಾರಗಳು ಒಬ್ಬ ವ್ಯಕ್ತಿಯಾಗಿ ಗಾಂಧೀಜಿಗೆ ಸಂಬಂಧಿಸಿದಂತಹವು. ಸತ್ಯ ಮತ್ತು ಅಹಿಂಸೆಯನ್ನು ಅಸ್ತ್ರವಾಗಿ ಬಳಸಿ ಅವರು ನಡೆಸಿದ ಚಳುವಳಿಗಳು ಒಬ್ಬ ಸಮಾಜಜೀವಿಯಾದ ಗಾಂಧೀಜಿಗೆ ಸಂಬಂಧಿಸಿದವು. ತಮ್ಮ ವ್ಯಕ್ತಿಗತ ನಂಬಿಕೆಗಳನ್ನು ತಮ್ಮ ಸಾಮಾಜಿಕ ಚಟುವಟಿಕೆಗಳ ಒಳಗೆ ತರಲು ಪ್ರಯತ್ನಿಸಿದ್ದರಿಂದ ಅವರೊಬ್ಬ ವಿವಾದಾತ್ಮಕ ವ್ಯಕ್ತಿಯಾದರು. ಆದರೆ ಯಾರಾದರೂ ಅವರ ವ್ಯಕ್ತಿಗತ ನಂಬಿಕೆಗಳನ್ನು ಸಾಮಾಜಿಕ ಚಟುವಟಿಕೆಗಳೊಳಕ್ಕೆ ತರುವುದನ್ನು ಪ್ರಶ್ನಿಸಿದರೆ ಬದಲಾಗುವುದಕ್ಕೆ ಅವರು ಹಿಂದುಮುಂದು ನೋಡುತ್ತಿರಲಿಲ್ಲ.

ಗೋರಾ ಅವರು ಆಶ್ರಮದಲ್ಲಿ ತಂಗಿದ್ದಾಗ ನಾಸ್ತಿಕತೆಯ ಬಗ್ಗೆ ಗಾಂಧೀಜಿಯವರು ಅವರ ಜೊತೆ ಹಲವಾರು ಸಲ ಚರ್ಚಿಸಿದ್ದರು. ಈ ಚರ್ಚೆಗಳ ಸಂದರ್ಭದಲ್ಲಿ "ನೀವು ಸತ್ಯವೇ ದೇವರು ಅಥವಾ ದೇವರೇ ಸತ್ಯ ಎಂಬುದಾಗಿ ಹೇಳುವಾಗ ದೇವರಿಲ್ಲದೆ ಸತ್ಯವಿಲ್ಲ ಎಂಬುದನ್ನು ನೀವು ಒಪ್ಪಿಕೊಳ್ಳಬೇಕು" ಎಂದು ಅವರು ಪ್ರತಿಪಾದಿಸುತ್ತಿದ್ದರು. "ಸತ್ಯದಲ್ಲಿ ನಂಬಿಕೆ ಇರುವ, ಆದರೆ ದೇವರನ್ನು ನಂಬದ ಜನರಿದ್ದಾರೆ; ಅವರ ಜೊತೆ ನೀವು ಹೇಗೆ ಸಮನ್ವಯ ಸಾಧಿಸುತ್ತೀರಿ?" ಎಂದು ಅವರನ್ನು ಪ್ರಶ್ನಿಸಲಾಯಿತು. ಒಂದು ಕ್ಷಣ ಆಲೋಚಿಸಿ ಅವರು ಹೇಳಿದರು, "ಸತ್ಯವೆಂಬುದು ದೇವರ ನಂಬಿಕೆಗಿಂತ ಭಿನ್ನವಾದುದು. ದೇವರ ನಂಬಿಕೆ ವ್ಯಕ್ತಿಗತವಾದುದು. ಆದರೆ ಸತ್ಯವೆಂಬುದು ಸಾಮಾಜಿಕ ಸಂಗತಿ". ನಿರೀಶ್ವರ ವಾದವೂ ಕೂಡ ಸತ್ಯದ ಹುಡುಕಾಟದ ಒಂದು ವಿಧಾನವಾಗಿರುವುದು ಸಾಧ್ಯ ಎಂಬುದನ್ನು ಅವರು ಒಪ್ಪಿಕೊಂಡರು. ೧೯೪೫ರಲ್ಲಿ ಅವರು ಇದನ್ನು ಒಪ್ಪಿಕೊಂಡಾಗ ಅವರ ದೃಷ್ಟಿಕೋನದಲ್ಲಿ ಒಂದು ಸ್ಪಷ್ಟ ಬದಲಾವಣೆ ವ್ಯಕ್ತವಾಯಿತು. ಗೋರಾ ಅವರು ಬರೆದ 'ಗಾಂಧೀಜಿಯ ಜೊತೆಗೊಬ್ಬ ನಾಸ್ತಿಕವಾದಿ' ಎಂಬ ಪುಸ್ತಕದಲ್ಲಿ ಈ ವಿವರಗಳಿವೆ. ಗಾಂಧೀಜಿಯವರ ಎಲ್ಲಾ ಕೃತಿಗಳ ಪ್ರಕಾಶಕರಾದ ನವಜೀವನ ಟ್ರಸ್ಟ್‌ನವರು ಈ ಪುಸ್ತಕವನ್ನು ೧೯೫೧ರಲ್ಲಿ ಪ್ರಕಟಿಸಿದ್ದಾರೆ. ಮೂಲದಲ್ಲಿ ಈ ಕೃತಿಯು ಇಂಗ್ಲಿಷ್ ಭಾಷೆಯಲ್ಲಿದೆ. ನಂತರದಲ್ಲಿ ಅವರು ಹಿಂದಿ, ಮರಾಠಿ ಮತ್ತು ಗುಜರಾತಿ ಆವೃತ್ತಿಗಳನ್ನು ಸಹ ಪ್ರಕಟಿಸಿದ್ದಾರೆ. ಗಾಂಧಿ ಸಾಹಿತ್ಯದಲ್ಲಿ ಈ ಪುಸ್ತಕಕ್ಕೆ ಅಪಾರವಾದ ಬೆಲೆಯಿದೆ. ಅವರು ಸತ್ಯವು ದೇವರಿಗಿಂತ ದೊಡ್ಡದು. ದೇವರು ವೈಯಕ್ತಿಕ ನಂಬಿಕೆಯಾದರೆ, ಸತ್ಯವೆಂಬುದು ಒಂದು ಸಾಮಾಜಿಕ ಅಗತ್ಯ ಎಂಬುದಾಗಿ ನಂಬಿದ್ದರಿಂದ ಅವರೊಳಗಿನ ಕ್ರಾಂತಿಕಾರಿ ಅಂಶ ಬಲಗೊಂಡಿತು. ಈ ಹಿನ್ನೆಲೆಯಲ್ಲಿ ನಾವು ಗಾಂಧೀಜಿಯವರನ್ನು ನೋಡಿದಾಗ ಅವರಲ್ಲಿ ಕುರುಡು ನಂಬಿಕೆಗಳಿರಲಿಲ್ಲ ಮತ್ತು ತಾರ್ಕಿಕವಲ್ಲದ ಯಾವುದನ್ನೂ ಅವರು ಒಪ್ಪುತ್ತಿರಲಿಲ್ಲ ಎಂಬುದನ್ನು ನಾವು ಮನಗಾಣಬಹುದು. ಸ್ವತಃ ಅವರೇ ಇದನ್ನು ಹೇಳಿದ್ದಾರೆ. ಕೆಲವು ವಿಚಾರಗಳ ಬಗ್ಗೆ ಅವರ ಪ್ರಾರಂಭದ ಅಭಿಪ್ರಾಯಗಳು ಹೇಗಿದ್ದವು ಮತ್ತು ನಂತರದಲ್ಲಿ ಅವು ಹೇಗೆ ಮತ್ತು ಎಷ್ಟರಮಟ್ಟಿಗೆ ಬದಲಾದವು ಎಂಬುದನ್ನು ತೋರಿಸುವುದಕ್ಕಾಗಿ ನಾನು ಅವರ ಕೆಲವು ಹೇಳಿಕೆಗಳನ್ನು ಮತ್ತು ಉಲ್ಲೇಖಗಳನ್ನು ಅವರ ಬರಹಗಳಿಂದ ಆಯ್ದು ನನ್ನ ಪುಸ್ತಕದಲ್ಲಿ ನೀಡಿದ್ದೇನೆ. ಕಾಲಾನುಕ್ರಮದಲ್ಲಿ ಹಲವಾರು ವಿಚಾರಗಳ ಬಗ್ಗೆ ಅವರು ತಮ್ಮ ಅಭಿಪ್ರಾಯಗಳನ್ನು ಆಮೂಲಾಗ್ರ ಬದಲಾಯಿಸಿಕೊಂಡರು. ಯಾವಾಗಲೂ ಬದಲಾಗಲು ಸಿದ್ಧರಾಗಿದ್ದ ವ್ಯಕ್ತಿ ಗಾಂಧೀಜಿ. ಅವರು ತತ್ವಾಂಧರಾಗಿರಲಿಲ್ಲ. ಅವರನ್ನು ಮಹಾತ್ಮರನ್ನಾಗಿಸಿದ್ದು ಇದೇನೇ.

ಮತ್ತೂ ಒಂದು ವಿಚಾರವಿದೆ. ಪ್ರಾರಂಭದಿಂದಲೂ ಗಾಂಧೀಜಿಯವರು ತಾವು ಎದುರಿಸಿದ ಪ್ರತಿಯೊಂದು ಸಮಸ್ಯೆಯನ್ನು ಅದು ಪ್ರತಿಯೊಬ್ಬರ ಸಮಸ್ಯೆ ಎಂಬಂತೆ ಪರಿಗಣಿಸುತ್ತಿದ್ದರು. ಆ ಕಾಲದ ದಕ್ಷಿಣ ಆಫ್ರಿಕಾದ ರೈಲ್ವೇ ನಿಯಮದ ಪ್ರಕಾರ ಪ್ರಥಮ ದರ್ಜೆ ಡಬ್ಬಿಯಲ್ಲಿ ಬಿಳಿಯ ಪ್ರಯಾಣಿಕರಿದ್ದರೆ ಇತರರು ತಮ್ಮ ಬಳಿ ಪ್ರಥಮದರ್ಜೆ ಟಿಕೆಟ್ ಇದ್ದರೂ ಸಹ ಕೆಳಕ್ಕೆ ಇಳಿದುಬಿಡಬೇಕಾಗಿತ್ತು. ಅದು ಬಿಳಿಯರಲ್ಲದ ಪ್ರತಿಯೊಬ್ಬರಿಗೂ ಅವಮಾನ ಎಂಬುದಾಗಿ ಗಾಂಧೀಜಿ ಭಾವಿಸಿದರು. ತಮ್ಮ, ಹಾಗೇ ಇತರರ ಆತ್ಮ ಗೌರವವನ್ನು ಎತ್ತಿ ಹಿಡಿಯಲು ಗಾಂಧೀಜಿ ಹೋರಾಟ ಪ್ರಾರಂಭಿಸಿದರು. ಹಾಗೆಯೇ ಸಾಮ್ರಾಜ್ಯಶಾಹಿ ಆಳ್ವಿಕೆಯಿಂದ ಸ್ವಾತಂತ್ರ್ಯ ಪಡೆಯಲು ಹೋರಾಟ ನಡೆಸಲು ಬಯಸಿದಾಗ ಸಾಮ್ರಾಜ್ಯಶಾಹಿ ಆಳ್ವಿಕೆಗೊಳಪಟ್ಟಿದ್ದ ಪ್ರತಿಯೊಂದು ದೇಶಕ್ಕೂ ಸ್ವಾತಂತ್ರ್ಯ ದೊರೆಯಬೇಕೆಂದು ಅವರು ಬಯಸಿದರು. ಆದ್ದರಿಂದಲೇ ಅವರಿಗೆ ಅಮೆರಿಕಾದ ಮಾರ್ಟಿನ್ ಲೂಥರ್ ಕಿಂಗ್‌ರನ್ನು ಪ್ರಭಾವಿಸಲು ಸಾಧ್ಯವಾಯಿತು. ಹಾಗೆಯೇ ಆಫ್ರಿಕಾದಲ್ಲಿ ನೆಲ್ಸನ್ ಮಂಡೇಲಾ ಮತ್ತು ಇತರ ದೇಶಗಳ(ಐರ್ಲೆಂಡ್) ಇತರ ನಾಯಕರೂ ಸಹ ಗಾಂಧೀಜಿಯ ಪ್ರಭಾವಕ್ಕೆ ಒಳಗಾದರು. ಅಲ್ಲಿಯವರೆಗೆ ಬರೀ ಸಿದ್ಧಾಂತವಾಗಿದ್ದ ಅಹಿಂಸೆಯ ಕಲ್ಪನೆಯನ್ನು ಗಾಂಧೀಜಿ ಒಂದು ಅಸ್ತ್ರವನ್ನಾಗಿ ಪರಿವರ್ತಿಸಿ ಕ್ರಾಂತಿಕಾರಕ ಬದಲಾವಣೆಗಳನ್ನು ತಂದರು. ಹಿಂಸೆಗೆ ಪ್ರತಿಯಾಗಿ ಹಿಂಸೆಯನ್ನು ಬಳಸುವುದು ಸುಲಭ. ಆದರೆ ಅಹಿಂಸೆಯ ವಿರುದ್ಧ ಹಿಂಸೆಯನ್ನು ಬಳಸುವುದು ಸುಲಭವಲ್ಲ. ತಾನು ಒಬ್ಬ ಶಾಂತಿಯುತ ಅಹಿಂಸಾತ್ಮಕ ವ್ಯಕ್ತಿಯನ್ನು ಥಳಿಸುತ್ತಿದ್ದೇನೆ ಎಂಬ ಸಂಗತಿಯು ಆಕ್ರಮಣಕಾರನ ಹೃದಯದ ಮೂಲೆಯಲ್ಲೆಲ್ಲೋ ಆತನನ್ನು ಕಾಡುತ್ತದೆ. ಪ್ರಪಂಚದಾದ್ಯಂತ ಜನರು ಈ ದಿಸೆಯಲ್ಲಿ ಯೋಚಿಸುವಂತೆ ಮಾಡಿದ್ದೇ ಗಾಂಧೀಜಿಯವರ ಸಾಧನೆ.

ಗಾಂಧೀಜಿ ಶೋಷಣೆಗೆ, ಅಸಮಾನತೆಗೆ ವಿರುದ್ಧವಾಗಿದ್ದರು. ಅವೆರಡನ್ನೂ ಅವರು ಹಿಂಸೆಯೆಂದು ಪರಿಗಣಿಸುತ್ತಿದ್ದರು. ಸಾಮಾನ್ಯ ಮನುಷ್ಯ ಅಹಿಂಸೆಯನ್ನು ಆಚರಿಸುವ ವಿಚಾರದಲ್ಲಿ ಆಸಕ್ತಿ ತೋರಲಾರ ಎಂಬುದು ಅವರಿಗೆ ತಿಳಿದಿತ್ತು. ಅವರನ್ನು ಉತ್ತೇಜಿಸಲು 'ಅಹಿಂಸೆಯೆಂಬುದು ಹಿಂಸೆಗಿಂತಲೂ ದೊಡ್ಡದು; ಆದರೆ ಪುಕ್ಕಲುತನಕ್ಕಿಂತಲೂ ಹಿಂಸೆ ಉತ್ತಮ' ಎಂಬುದಾಗಿ ಅವರು ಹೇಳುತ್ತಿದ್ದರು. ಶೋಷಣೆ ಮತ್ತು ಅಸಮಾನತೆಯ ವಿರುದ್ಧ ಬಂಡೇಳುವುದಕ್ಕೆ ಅವರು ನೀಡುತ್ತಿದ್ದ ಪ್ರಾಮುಖ್ಯತೆಯು ಇದರಿಂದ ತಿಳಿದುಬರುತ್ತದೆ. ತನ್ನನ್ನು ಯಾರಾದರೂ ಅತಿಕ್ರಮಿಸಲು ಪ್ರಯತ್ನಿಸಿದರೆ ಆಗ ತನ್ನನ್ನು ತಾನು ಹೇಗೆ ರಕ್ಷಿಸಿಕೊಳ್ಳಬೇಕು ಎಂಬುದಾಗಿ ಮಹಿಳೆಯೊಬ್ಬಳು ಅವರನ್ನು ಕೇಳಿದಳು. "ದೇವರು ನಿನಗೆ ಹಲ್ಲು ಮತ್ತು ಉಗುರುಗಳನ್ನು ನೀಡಿದ್ದಾನೆ" ಎಂಬುದಾಗಿ ಗಾಂಧಿ ಉತ್ತರಿಸಿದರು. ಅಂದರೆ, ದಾಳಿಕೋರನನ್ನು ಹಲ್ಲಿನಿಂದ ಕಚ್ಚಿ, ತನ್ನ ಶಕ್ತಿಯನ್ನೆಲ್ಲಾ ಬಳಸಿ, ಉಗುರಿನಿಂದ ಪರಚಿ ತನ್ನನ್ನು ತಾನು ರಕ್ಷಿಸಿಕೊಳ್ಳಬೇಕೆಂದು ಆಕೆಗೆ ಅವರು ಸೂಚಿಸಿದರು. ಅದನ್ನು ಅವರು ಹಿಂಸೆ ಎಂದು ಪರಿಗಣಿಸಲಿಲ್ಲ. ಅನಿವಾರ್ಯವಾದ ಹಿಂಸೆಯು ಅಹಿಂಸೆಯ ಪ್ರಥಮ ಹೆಜ್ಜೆ ಎಂಬುದಾಗಿ ಅವರು ಹೇಳಿದರು.

ಒಮ್ಮೆ ಒರಿಸ್ಸಾದಲ್ಲಿ ಬೆಳೆ ಬೆಳೆದುನಿಂತಿದ್ದ ಜಮೀನಿಗೆ ಗುಂಪು ಗುಂಪಾಗಿ ಲಕ್ಷಾಂತರ ಮಂಗಗಳು ದಾಳಿಯಿಟ್ಟು ಬೆಳೆಯನ್ನು ನಾಶ ಮಾಡಿದವು. ಆಗ ರೈತನೊಬ್ಬ ಹಿಂಸೆಯಿಲ್ಲದೆ ತನ್ನ ಬೆಳೆಯನ್ನು ರಕ್ಷಿಸಿಕೊಳ್ಳುವುದು ಹೇಗೆ ಸಾಧ್ಯ ಎಂದು ಗಾಂಧೀಜಿಯವರನ್ನು ಕೇಳಿದ. ಮಂಗಗಳನ್ನು ಪವಿತ್ರವೆಂದು ಭಾವಿಸುವುದರಿಂದ ಅವುಗಳ ವಿರುದ್ಧ ಹಿಂಸೆಯನ್ನು ಬಳಸಲು ಅವನಿಗೆ ಇಚ್ಛೆ ಇರಲಿಲ್ಲ. ಆಗ ಆತನಿಗೆ ತನ್ನ ಬೆಳೆಯನ್ನು ರಕ್ಷಿಸಿಕೊಳ್ಳುವ ಹಕ್ಕಿದೆ ಎಂದು ಗಾಂಧೀಜಿ ಹೇಳಿದರು. 'ಮಂಗಗಳನ್ನು ಓಡಿಸುವುದು ಸಾಧ್ಯವಾಗದಿದ್ದಲ್ಲಿ, ಅವುಗಳನ್ನು ನೀನು ಕೊಲ್ಲಬಹುದು' ಎಂಬುದಾಗಿ ಗಾಂಧೀಜಿ ರೈತನಿಗೆ ಹೇಳಿದರು. ಅಹಿಂಸೆಯ ಆಚರಣೆಯಲ್ಲಿ ಮೂರು ಹಂತಗಳನ್ನು ಗಾಂಧೀಜಿ ಗುರುತಿಸುತ್ತಿದ್ದರು. **ಸಾರ್ವತ್ರಿಕ ಒಪ್ಪಿಗೆ, ನಿಷ್ಕ್ರಿಯ(passive) ಪ್ರತಿರೋಧ ಮತ್ತು ಸೃಜನಾತ್ಮಕ ನೀತಿ. ಈ ಹಂತಗಳನ್ನು ನಾವು ಅನುಸರಿಸಿದರೆ ಸಮಾನತೆ ಮತ್ತು ಸತ್ಯಗಳು ನಮ್ಮ ಸಮಾಜದಲ್ಲಿ ಖಂಡಿತವಾಗಿಯೂ ಸ್ಥಾಪನೆಗೊಳ್ಳುತ್ತವೆ ಎಂಬುದಾಗಿ ಅವರು ಹೇಳುತ್ತಿದ್ದರು.** ದಕ್ಷಿಣ ಆಫ್ರಿಕಾದಲ್ಲಿದ್ದಾಗ ಯಾವುದೇ ಧರ್ಮ, ಭಾಷೆ, ಪ್ರಾಂತ್ಯಗಳ ಹಂಗಿಲ್ಲದೆ ಅವರು ಎಲ್ಲ ಭಾರತೀಯರನ್ನೂ ಒಗ್ಗೂಡಿಸಿದರು. ಆ ಮಟ್ಟಿಗೆ ಅದೊಂದು ಜಾತ್ಯತೀತ ಪ್ರಯತ್ನವಾಗಿತ್ತು. ಅದೇ ರೀತಿಯಲ್ಲಿ ಅವರು ಸ್ವಾತಂತ್ರ್ಯದ ಹೋರಾಟದಲ್ಲಿ ಪ್ರತಿಯೊಬ್ಬ ಭಾರತೀಯನೂ ಪಾಲ್ಗೊಳ್ಳಬೇಕಾದ ಅಗತ್ಯವಿದೆ ಎಂದು ಭಾವಿಸಿದರು– ಟಾಟಾ ಬಿರ್ಲಾರಿಂದ ಹಿಡಿದು ಒಬ್ಬ ಬಡವನವರೆಗೆ. ಮತೀಯ ಐಕ್ಯತೆ ಮತ್ತು ಅಸ್ಪೃಶ್ಯತೆಯ ನಿವಾರಣೆಗಳು ಎಷ್ಟೇ ಮುಖ್ಯವಾಗಿದ್ದರೂ ಅವನ್ನು ಸ್ವಾತಂತ್ರ್ಯ ಚಳುವಳಿಯ ಒಂದು ಅವಿಭಾಜ್ಯ ಅಂಗವನ್ನಾಗಿ ಮಾಡುವಂತೆ ಒತ್ತಾಯಿಸುವುದು ಅವರಿಗೆ ಸಾಧ್ಯವಾಗಲಿಲ್ಲ. ಆದರೆ ಅವನ್ನು ಅವರು ಮರೆಯಲಿಲ್ಲ. ಸ್ವಾತಂತ್ರ್ಯ ದೊರೆತ ಕೂಡಲೇ ಸಾಮಾಜಿಕ ಮತ್ತು




**೧೯೪೭ರ ಏಪ್ರಿಲ್ ೨೦ರ *ಹರಿಜನ* ಪತ್ರಿಕೆಯಲ್ಲಿ ಗಾಂಧಿ 'ನೀವು ನನ್ನನ್ನು ಕೊಂದರೂ ನಾನು ರಾಮ ರಹೀಮರನ್ನು ಒಂದೇ ಉಸಿರಿನಲ್ಲಿ ಪ್ರಸ್ತಾಪಿಸುವುದನ್ನು ನಿಲ್ಲಿಸುವುದಿಲ್ಲ. ನನ್ನ ದೃಷ್ಟಿಯಲ್ಲಿ ಆ ಎರಡು ಹೆಸರುಗಳು ಒಬ್ಬನೇ ದೇವರನ್ನು ಸೂಚಿಸುತ್ತವೆ. ಆ ಹೆಸರುಗಳನ್ನು ಪುನರುಚ್ಚರಿಸುತ್ತಾ ನಾನು ಸಂತೋಷದಿಂದ ಮರಣಹೊಂದಬಲ್ಲೆ' ಎಂಬುದಾಗಿ ಬರೆದರು. ೧೯೪೮ರ ಜನವರಿಯಲ್ಲಿ ಯಾವ ಕ್ಷಣದಲ್ಲಿ ಬೇಕಾದರೂ ಅವರು ಸಾಯಬಹುದೆಂಬುದು ಸ್ಪಷ್ಟವಾಗಿತ್ತು. ೧೯೪೮ರ ಜನವರಿ ೩೦ರಂದು ಅವರ ಮೇಲೆ ಗುಂಡು ಹಾರಿಸಿದಾಗ ಸಾಯುವ ಕ್ಷಣದಲ್ಲಿ ಅವರು ಆ ಹೆಸರುಗಳನ್ನು ಸ್ಮರಿಸಿರಬೇಕು....**

ಆರ್ಥಿಕ ಸ್ವಾತಂತ್ರ್ಯವನ್ನು ಸಾಧಿಸುವುದು ಅಗತ್ಯವೆಂಬುದಾಗಿ ಅವರು ಹೇಳುತ್ತಿದ್ದರು.

ಭಾರತದ ಜನಸಂಖ್ಯೆಯಲ್ಲಿ ಹಿಂದೂಗಳು ಶೇಕಡಾ ೮೦ರಷ್ಟಿದ್ದಾರೆ. ಅವರನ್ನು ತಮ್ಮ ಆಲೋಚನಾ ರೀತಿಯ ಕಡೆಗೆ ಸೆಳೆಯುವುದು ಅಗತ್ಯವಾಗಿತ್ತು. ಅವರಿಗಿಂತಲೂ ಮೊದಲೇ ತಿಲಕರು, ಹಿಂದೂಗಳು ತಮ್ಮ ನಾಯಕತ್ವವನ್ನು ಅನುಸರಿಸುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದರು. ಅದೇ ತಂತ್ರವನ್ನು ಅನುಸರಿಸಲು ಗಾಂಧೀಜಿ ನಿರ್ಧರಿಸಿದರು. ಗಣೇಶನ ಆರಾಧನೆಯ ಸಂದರ್ಭದಲ್ಲಿ ತಿಲಕರು ಧರ್ಮವನ್ನು ರಾಜಕೀಯಗೊಳಿಸಿದರು. ಭಾರತಕ್ಕೆ ಬರುವ ಮೊದಲು ಗಾಂಧೀಜಿಯವರು ದಕ್ಷಿಣ ಆಫ್ರಿಕಾದಲ್ಲಿ ಜಾತಿ ಮತ್ತು ಸಮುದಾಯದ ಪರಿಗಣನೆಯಿಲ್ಲದೆ ಭಾರತೀಯರನ್ನೆಲ್ಲಾ ಒಂದುಗೂಡಿಸುವ ಆಲೋಚನೆ ಮಾಡಬೇಕಾಯಿತು. ಭಾರತಕ್ಕೆ ಬಂದ ನಂತರ ಅವರು ಇಡೀ ದೇಶವನ್ನೇ ಮುನ್ನಡೆಸಬೇಕಾಯಿತು. ಭಾರತದಲ್ಲಿ ಬಹುಸಂಖ್ಯಾತ ಜನ ಹಿಂದೂಗಳೇ ಆಗಿದ್ದರು. ತಾವು ರಾಮರಾಜ್ಯವನ್ನು ಸ್ಥಾಪಿಸಬಯಸುವುದಾಗಿ ಹೇಳುತ್ತಾ ಗಾಂಧೀಜಿ ರಾಜ ರಾಮನ ಹೆಸರನ್ನು ಬಳಸಿದರು.. ಆದರೆ ಅವರು ತಾವು ಅಯೋಧ್ಯಾ ರಾಮನ ಅಥವಾ ದಶರಥನ ಮಗನ ಆಳ್ವಿಕೆಯ ಬಗ್ಗೆ ಹೇಳುತ್ತಿಲ್ಲ. ಒಬ್ಬ ಆದರ್ಶ ಆಡಳಿತಗಾರನ ಬಗ್ಗೆ ಮಾತನಾಡುತ್ತಿರುವುದಾಗಿ ಹೇಳಲು ಮರೆಯುತ್ತಿರಲಿಲ್ಲ. ಜಾತ್ಯತೀತ ವಿಚಾರಗಳನ್ನು ಸಾಂಪ್ರದಾಯಿಕ ಭಾಷೆಯಲ್ಲಿ ಅವರು ಸಮಾಜದ ಎದುರು ಇಡಬೇಕಾಗಿತ್ತು. ಹಳೆಯ ಭಾಷೆ ಜನರನ್ನು ಆಕರ್ಷಿಸಿತು. ಆದರೆ ಹಳೆಯ ಪದಗಳಿಗೆ ಗಾಂಧೀಜಿಯವರು ನೀಡಿದ ಹೊಸ ವಿವರಣೆಗಳನ್ನು ಅರ್ಥಮಾಡಿಕೊಳ್ಳುವುದು ಜನರಿಗೆ ಸಾಧ್ಯವಾಗಲಿಲ್ಲ.

ಮಾರ್ಕ್ಸ್‌ಗಾಗಲೀ ಅಥವಾ ಎಂ.ಎನ್.ರಾಯ್ ಅವರಿಗಾಗಲೀ ತಮ್ಮ ಜೀವಿತಾವಧಿಯಲ್ಲಿ ಜನರನ್ನು ಮುನ್ನಡೆಸಬೇಕಾದ ಅಗತ್ಯವಿರಲಿಲ್ಲ. ತಮ್ಮ ಸಿದ್ಧಾಂತಗಳ ಬಗೆಗೆ ತಮಗೆ ಅನಿಸಿದ್ದನ್ನು ಜನರಿಗೆ ವಿವರಿಸಿ ಪ್ರಸಾರಮಾಡಲು ಅವರು ಸ್ವತಂತ್ರರಿದ್ದರು. ನೀವು ಆ ದೃಷ್ಟಿಕೋನದ ವಿಚಾರದಲ್ಲಿ ಜನರನ್ನು ಸಂಘಟಿಸಿ ಸಮನ್ವಯ ಸಾಧಿಸಬೇಕಾದರೆ ತುಸುಮಟ್ಟಿಗೆ ಅವರ ನಂಬಿಕೆಗಳ ಜೊತೆ ರಾಜಿ ಮಾಡಿಕೊಳ್ಳುವುದು ಅಗತ್ಯವಾಗುತ್ತದೆ. ಮಾರ್ಕ್ಸ್‌ನ ತತ್ವದ ವಿಚಾರದಲ್ಲಿ ಲೆನಿನ್ ಇಂತಹ ಬದಲಾವಣೆಯನ್ನು ಮಾಡಿಕೊಂಡರು. ಸೋವಿಯತ್ ಒಕ್ಕೂಟವನ್ನು ಒಗ್ಗೂಡಿಸುವುದಕ್ಕಾಗಿ ಸ್ಟಾಲಿನ್ ಇನ್ನೂ ಹೆಚ್ಚಿನ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಯಿತು. ಮಾವೋ ಸಹ ಮಾರ್ಕ್ಸ್‌ನ ಸಿದ್ಧಾಂತವನ್ನು ಅಳವಡಿಸಿಕೊಂಡರು. ಆದರೆ ಅವರು ರೈತರ ಜೊತೆ ಕೃಷಿ ಕೂಲಿಕಾರರ ಜೊತೆ ಕೆಲಸ ಮಾಡಬೇಕಾಗಿತ್ತು. ಅವರನ್ನು ಸಮನ್ವಯಗೊಳಿಸುವುದಕ್ಕಾಗಿ ಮಾವೋ ಕೆಲವು ವಿನಾಯಿತಿಗಳನ್ನು ನೀಡಬೇಕಾಯಿತು. ತಮ್ಮ ವೈಯಕ್ತಿಕ ದೃಷ್ಟಿಕೋನಗಳನ್ನು ಜನಪ್ರಿಯ, ಪ್ರಾಯೋಗಿಕ ಚಳುವಳಿಗಳನ್ನಾಗಿ ಪರಿವರ್ತಿಸಬೇಕಾದ ಸಂದರ್ಭಗಳಲ್ಲಿ ಜನರಿಗೆ ಮನವಿ ಮಾಡಿಕೊಳ್ಳಬೇಕಾದಾಗ ಗಾಂಧೀಜಿ ಸಹ ಹಲವಾರು ಹೊಂದಾಣಿಕೆಗಳನ್ನು ಮಾಡಿಕೊಂಡರು. ಆದರೆ ಸ್ವಾತಂತ್ರ್ಯವು ದೇಶ ವಿಭಜನೆಯ ನಂತರ ಮಾತ್ರ ಬರಲು ಸಾಧ್ಯವೆಂಬುದು ಸ್ಪಷ್ಟವಾದಾಗ ಅವರು ರಾಜಿಯನ್ನು ನಿರಾಕರಿಸಿ ವಿಭಜನೆಯ ವಿರುದ್ಧವಾದ ತಮ್ಮ ಮೂಲ ಅಭಿಪ್ರಾಯಕ್ಕೆ ಅಂಟಿಕೊಂಡರು. ಅವರು ಮತ್ತಷ್ಟು ದಿನ ಬದುಕಿದ್ದರೆ ಈ ಅಂಶವು ಸ್ಪಷ್ಟವಾಗುತ್ತಿತ್ತು.

ಆಶ್ರಮದಲ್ಲಿ ಗಾಂಧೀಜಿಯವರಿಗೆ ಹತ್ತಿರವಾಗಿ ಬದುಕಿದವರಿಗೂ ಸಹ ಅವರ ದೂರದೃಷ್ಟಿ ಅರ್ಥವಾಗದೇ ಮರಣಾನಂತರ ಅವರ ದೃಷ್ಟಿಕೋನವನ್ನು ಎತ್ತಿಹಿಡಿಯುವಲ್ಲಿ ಸೋತರು ಎನಿಸುತ್ತದೆ. ೧೯೪೭ರ ಏಪ್ರಿಲ್ ೨೦ರ *ಹರಿಜನ* ಪತ್ರಿಕೆಯಲ್ಲಿ ಗಾಂಧಿ 'ನೀವು ನನ್ನನ್ನು ಕೊಂದರೂ ನಾನು ರಾಮರಹೀಮರನ್ನು ಒಂದೇ ಉಸಿರಿನಲ್ಲಿ ಪ್ರಸ್ತಾಪಿಸುವುದನ್ನು ನಿಲ್ಲಿಸುವುದಿಲ್ಲ. ನನ್ನ ದೃಷ್ಟಿಯಲ್ಲಿ ಆ ಎರಡು ಹೆಸರುಗಳು ಒಬ್ಬನೇ ದೇವರನ್ನು ಸೂಚಿಸುತ್ತವೆ. ಆ ಹೆಸರುಗಳನ್ನು ಪುನರುಚ್ಚರಿಸುತ್ತಾ ನಾನು ಸಂತೋಷದಿಂದ ಮರಣಹೊಂದಬಲ್ಲೆ' ಎಂಬುದಾಗಿ ಬರೆದರು. ೧೯೪೮ರ ಜನವರಿಯಲ್ಲಿ ಯಾವ ಕ್ಷಣದಲ್ಲಿ ಬೇಕಾದರೂ ಅವರು ಸಾಯಬಹುದೆಂಬುದು ಸ್ಪಷ್ಟವಾಗಿತ್ತು. ೧೯೪೮ರ ಜನವರಿ ೩೦ರಂದು ಅವರ ಮೇಲೆ ಗುಂಡು ಹಾರಿಸಿದಾಗ ಸಾಯುವ ಕ್ಷಣದಲ್ಲಿ ಅವರು ಆ ಹೆಸರುಗಳನ್ನು ಸ್ಮರಿಸಿರಬೇಕು. ೧೯೪೮ರ ಫೆಬ್ರವರಿ ೧೫ರ *ಹರಿಜನ* ಪತ್ರಿಕೆಯಲ್ಲಿ ಗಾಂಧೀಜಿಯವರ ಆಪ್ತ ಸಹಾಯಕರಾಗಿದ್ದ ಪ್ಯಾರೇಲಾಲ್‌ರು, ಕೊನೆಯುಸಿರೆಳೆದಾಗ ಗಾಂಧೀಜಿ 'ರಾಮ್ ರಾಮ್' ಎಂದರು ಎಂಬುದಾಗಿ ಬರೆದಿದ್ದಾರೆ. ಮೊದಲನೆಯ ಗುಂಡು ಗಾಂಧೀಜಿಯವರ ದೇಹವನ್ನು ಹೊಕ್ಕಾಗ ಅವರು 'ರಾಮ್' ಎಂಬುದಾಗಿ ಉದ್ಗರಿಸಿರಬಹುದು. ಮುಂದಿನ ರಹೀಮ್ ಎಂಬ ಹೆಸರನ್ನು ಉಚ್ಚರಿಸುವ ಮೊದಲೇ ಎರಡನೆಯ ಗುಂಡು ಅವರ ದೇಹವನ್ನು ಹೊಕ್ಕಿದ್ದರಿಂದ ಉಂಟಾದ ಆಘಾತದಿಂದ ಅವರ ಧ್ವನಿ ಕ್ಷೀಣಿಸಿ ಅವರು ಉಚ್ಚರಿಸಿದ್ದು ಸ್ಪಷ್ಟವಾಗಿ ಕೇಳಿಸದೇ ಹೋಗಿರಬಹುದು. ಆ ಸಮಯಕ್ಕೆ ಅವರ ಸುತ್ತ ಜನರಲ್ಲಿ ಹೆಚ್ಚಿನವರು ಹಿಂದೂಗಳೇ ಆಗಿದ್ದರು. 'ರಹೀಮ್'' ಎಂಬ ಅವರ ಉದ್ಗಾರವನ್ನು ಸುಲಭವಾಗಿ ಅಪಾರ್ಥಮಾಡಿಕೊಂಡಿರಬಹುದು. ಅಥವಾ ರಾಮ್ ಎಂದೂ ತಪ್ಪಾಗಿ ಗ್ರಹಿಸಿರಬಹುದು. ಈ ವಿಷಯದ ಬಗ್ಗೆ ಗಾಂಧೀಜಿಯವರ ಖಚಿತವಾದ ಹೇಳಿಕೆಗಳ ಹಿನ್ನೆಲೆಯಲ್ಲಿ ಅವರು ತಮ್ಮ ನಂಬಿಕೆಯನ್ನು ಉಳಿಸಿಕೊಂಡಿರುವ ಸಾಧ್ಯತೆಯನ್ನು ಒಪ್ಪಲು ನಿರಾಕರಿಸಿದರೆ ನಾವು ಗಾಂಧೀಜಿಯವರಿಗೆ ಘೋರ ಅನ್ಯಾಯ ಮಾಡಿದಂತಾಗುತ್ತದೆ. ಅವರ ಮರಣಾನಂತರದಲ್ಲಿ ಗಾಂಧೀಜಿಯವರಿಗಿಂತ ಹಿಂದುಧರ್ಮವೇ ಹೆಚ್ಚು ಮುಖ್ಯವಾಯಿತು. ನಾವು ಅವರ ಆದರ್ಶಗಳನ್ನು ನಿರ್ಲಕ್ಷಿಸಬಯಸಿದೆವು. 'ರಹೀಮ'ನನ್ನು ತ್ಯಜಿಸಿ ಅವರನ್ನು 'ರಾಮ'ನಿಗೆ ಮಿತಿಗೊಳಿಸಿದೆವು. ನಮ್ಮ ವಿಶ್ಲೇಷಣೆಯನ್ನು ಧೃಡಪಡಿಸುವ ರೀತಿಯಲ್ಲಿ ರಾಜಘಾಟ್‌ನಲ್ಲಿನ ಅವರ ಸಮಾಧಿಯ ಮೇಲೆ 'ಹೇ ರಾಮ್' ಎಂದು ಮಾತ್ರ ಕೆತ್ತಲಾಗಿದೆ. ಗಾಂಧೀಜಿಯವರು ಇದಕ್ಕೆ ಹೇಗೆ ಪ್ರತಿಕ್ರಿಯಿಸಿರಬಹುದು? ಅವರು ಹೇಳಿದ್ದನ್ನು ಸ್ಪಷ್ಟವಾಗಿ ಕೇಳಿಸಿಕೊಳ್ಳಲು ಸಾಧ್ಯವಾಗದಿದ್ದಾಗ ನಮ್ಮ ಮಾತುಗಳನ್ನು ಅವರ ಬಾಯಲ್ಲಿರಿಸುವುದಕ್ಕೆ ಪ್ರತಿಯಾಗಿ ಅವರು ಆ ಮೊದಲು ಆಡಿದ ಮಾತುಗಳಿಗೆ ಮನ್ನಣೆ ನೀಡಬೇಕಾಗಿತ್ತು. 'ರಾಮ್ ರಹೀಮ್' ಎಂಬ ಹೆಸರುಗಳನ್ನು ಅವರ ಸಮಾಧಿಯ ಮೇಲೆ ಕೆತ್ತಿದ್ದಲ್ಲಿ ರಾಜ್‌ಘಾಟ್‌ಗೆ ಭೇಟಿ ನೀಡುವ ಮುಸ್ಲಿಮರೂ ಹೆಚ್ಚು ಪ್ರಭಾವಿಸಲ್ಪಡುತ್ತಿದ್ದರು ಮತ್ತು ಗಾಂಧೀಜಿಯವರ ಬಗ್ಗೆ ಅವರಲ್ಲಿ ಹೆಚ್ಚು ಗೌರವ ಮೂಡುತ್ತಿತ್ತು. ಹಾಗೆಯೇ ಅದರಿಂದ ಎರಡು ಧರ್ಮಗಳ ನಡುವಿನ ಐಕಮತ್ಯಕ್ಕೆ ಅದು ಸಹಕಾರಿಯಾಗುತ್ತಿತ್ತು. ನೌಖಾಲಿ ಮತ್ತು ಕಲ್ಕತ್ತಾಗಳಲ್ಲಿ ಮುಸ್ಲಿಮರನ್ನು ಹಿಂಸೆಯಿಂದ ದೂರ ಉಳಿಸುವಲ್ಲಿ ಗಾಂಧೀಜಿ ಯಶಸ್ವಿಯಾದರು. ರಾಮ ರಹೀಮರು ಒಬ್ಬನೇ ದೇವರ ಪ್ರತಿನಿಧಿಗಳು ಎಂಬುದನ್ನು ಅವರು ಅರ್ಥಮಾಡಿಕೊಂಡಿದ್ದರಿಂದ ಇದು ಸಾಧ್ಯವಾಯಿತು. ಅನಿವಾರ್ಯವಾದ ತೀರ್ಮಾನ ಏನೆಂದರೆ, ಗಾಂಧಿ ಅನುಯಾಯಿಗಳೆಂದು ಕರೆಸಿಕೊಂಡ ಜನ ಗಾಂಧೀಜಿಯವರ ಮರಣಾನಂತರ ಅವರ ಜಾತ್ಯತೀತ ದೃಷ್ಟಿಕೋನಕ್ಕೆ ನ್ಯಾಯ ಒದಗಿಸಲಿಲ್ಲ. ಆದ್ದರಿಂದ ಗಾಂಧೀಜಿಯವರ ಅನುಯಾಯಿಗಳೆನಿಸಿಕೊಂಡವರು ಹೇಳಿದ್ದರ ಮೂಲಕ ಗಾಂಧೀಜಿಯವರನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದಕ್ಕೆ ಪ್ರತಿಯಾಗಿ ಸ್ವತಃ ಗಾಂಧೀಜಿಯವರೇ ತಮ್ಮ ಬಗ್ಗೆ ಹೇಳಿದ್ದರ ಮೂಲಕ ಅವರನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದು ಉತ್ತಮ. ಗಾಂಧೀಜಿಯವರು ಹೆಚ್ಚು ಜಾತ್ಯತೀತರೂ, ವೈಚಾರಿಕರೂ ಮತ್ತು ಸಹಿಷ್ಣುವೂ ಆಗಿದ್ದರು ಎಂಬುದನ್ನು ನಾನು ಇಲ್ಲಿ ಒತ್ತಿ ಹೇಳಬಯಸುತ್ತೇನೆ.

**( ಕನ್ನಡಕ್ಕೆ – ಎಂ. ರಾಜು**
ಕೃಪೆ – ***'ಜನತಾ',*** ಆಗಸ್ಟ್, ೨೩, ೨೦೧೫)

# ಗಾಂಧಿ ಅಂದರೆ ಏನು? : ಕೆಲ ಬಿಡಿ ಚಿತ್ರಗಳು



**ಈ ಆಧುನಿಕ ಯುಗದಲ್ಲಿ ಬಹುಶಃ ಗಾಂಧಿ ಕುರಿತು ಬಂದಷ್ಟು ಸಾಹಿತ್ಯ ಇನ್ನಾವ ವ್ಯಕ್ತಿಯ ಬಗೆಗೂ ಬಂದಂತಿಲ್ಲ. ಆದರೂ ಗಾಂಧಿ ವ್ಯಕ್ತಿತ್ವದ ಆಳಗಳು ಹುಟ್ಟಿಸುತ್ತಿರುವ ಬೆರಗಿಗೆ ಕೊನೆಯೇ ಇಲ್ಲ. ಇದಕ್ಕೆ ಕಾರಣ, ಆಧುನಿಕತೆಯ ಎದುರು ಮಾನವತೆ ಅನುಭವಿಸಿದ ತಲ್ಲಣಗಳನ್ನು ಗಾಂಧಿಯಷ್ಟು ಮುಕ್ತವಾಗಿ ಮತ್ತು ನಿಷ್ಠುರವಾಗಿ ಅನ್ವೇಷಿಸಿದಷ್ಟು ಆಳಗಳಲ್ಲಿ ಇನ್ನಾರೂ ಅನ್ವೇಷಿಸಿದಂತಿಲ್ಲ. ಹಾಗಾಗಿಯೇ ಗಾಂಧಿ ಎಂದರೆ ಏನು ಎಂಬ ಪ್ರಶ್ನೆಗೆ ಹೊಸ ಹೊಸ ಉತ್ತರಗಳು ಇನ್ನೂ ಬರುತ್ತಲೇ ಇವೆ!**

**ಗಾಂಧಿಯವರ ಮೊಮ್ಮಗ ಗೋಪಾಲಕೃಷ್ಣ ಗಾಂಧಿ ತಮ್ಮ ತಾತನ ಸಮಗ್ರ ಬರವಣಿಗೆಯನ್ನೆಲ್ಲ ತಡಕಿ ನೋಡಿ, ಗಾಂಧಿ ವ್ಯಕ್ತಿತ್ವದ ಅನನ್ಯತೆಗಳನ್ನು, ಅನ್ವೇಷಣೆಗಳನ್ನು ಬಹುಮಟ್ಟಿಗೆ ಅವರ ಬರವಣಿಗೆಯ ಮೂಲಕವೇ ಅವುಗಳ ಎಲ್ಲ ಸ್ಪಂದನಶೀಲತೆಯೊಂದಿಗೆ ಕಟ್ಟಿಕೊಡುವ ಒಂದು ವಿಶಿಷ್ಟ ಪ್ರಯತ್ನವನ್ನು ತಮ್ಮ The Oxford India Gandhi: Essential Writings ಕೃತಿಯಲ್ಲಿ ಮಾಡಿದ್ದಾರೆ. ಅದರ ಕೆಲವು ಭಾಗಗಳನ್ನು ಆಯ್ದು ಕನ್ನಡಿಸಿ ಇಲ್ಲಿ ನೀಡುತ್ತಿದ್ದೇವೆ.–ಸಂ.**

**ದರ್ಬಾನ್, ೧೮೯೮:**

ಮನೆಯನ್ನು ಪಾಶ್ಚಿಮಾತ್ಯ ಮಾದರಿಯಲ್ಲಿ ಕಟ್ಟಲಾಗಿತ್ತು. ಶೌಚದ ನೀರು ಹೊರ ಹೋಗಲು ದಾರಿಯೇ ಇಲ್ಲವಾಗಿತ್ತು. ಹಾಗಾಗಿ ಪ್ರತಿಯೊಂದು ಕೊಠಡಿಯಲ್ಲೂ ಒಂದು ಮಲದ ಮಡಕೆ ಇಡಲಾಗಿತ್ತು. ಇವುಗಳನ್ನು ತೊಳೆಯುವ ಕೆಲಸವನ್ನು ಸೇವಕರಿಗೆ ಅಥವಾ ಭಂಗಿಗಳಿಗೆ ಬಿಡದೆ, ನಾವೇ ಮಾಡಿಕೊಳ್ಳುತ್ತಿದ್ದೆವು. ಬಹಳ ದಿನಗಳಿಂದ ಮನೆಯಲ್ಲೇ ಇದ್ದು ನಮ್ಮವರೇ ಆದವರು ತಂತಮ್ಮ ಮಡಕೆಗಳನ್ನು ತಾವೇ ಸ್ವಚ್ಛಗೊಳಿಸಿಕೊಳ್ಳುತ್ತಿದ್ದರು. ಆದರೆ ಹೊಸದಾಗಿ ಬಂದ ಕ್ರಿಶ್ಚಿಯನ್ ಗೆಳೆಯರೊಬ್ಬರ ಮಲಗುವ ಕೋಣೆಯನ್ನು ಸ್ವಚ್ಛಗೊಳಿಸುವುದು ನಮ್ಮದೇ ಕರ್ತವ್ಯವಾಗಿತ್ತು. ಇತರರ ಮಲದ ಮಡಕೆಗಳನ್ನು ಸ್ವಚ್ಛಗೊಳಿಸಲು ಅಷ್ಟೇನೂ ಹಿಂಜರಿಯದಿದ್ದ ನನ್ನ ಪತ್ನಿಗೆ ಈ ಅನ್ಯಮತದ ಪಂಚಮನ ಮಡಕೆಯನ್ನು ಸ್ವಚ್ಛಗೊಳಿಸುವುದು ತನಗೆ ಆಗದ ಕೆಲಸವಾಗಿ ಕಂಡಿತು. ತಾನು ಮಾಡುವುದಿರಲಿ, ನಾನು ಮಾಡುವುದೂ ಆಕೆಗೆ ಸಹ್ಯವಾಗಲಿಲ್ಲ. ಕೊನೆಗೆ ಆಕೆಯೇ ಅಂದು ನನ್ನನ್ನು ಶಪಿಸುತ್ತಾ, ದುಃಖದಿಂದ ಕೆಂಪಾದ ಕಣ್ಣುಗಳಿಂದ ಅಶ್ರುಧಾರೆ ಹರಿಸುತ್ತಾ ಕೈಯಲ್ಲಿ ಮಡಕೆ ಹಿಡಿದು ಮೆಟ್ಟಿಲು ಇಳಿಯುತ್ತಿದ್ದ ದೃಶ್ಯ ಇನ್ನೂ ನನಗೆ ಕಣ್ಣಿಗೆ ಕಟ್ಟಿದಂತಿದೆ.

ಆಕೆ ಮಡಕೆಯನ್ನು ಹಿಡಿದು ಹೊರಟಿರುವುದರಷ್ಟರಿಂದಲೇ ನನಗೆ ಸಮಾಧಾನ ಉಂಟಾಗಲಿಲ್ಲ. ಆಕೆ ಅದನ್ನು ಸಂತೋಷದಿಂದ ಮಾಡಬೇಕೆಂದು ನಾನು ಬಯಸಿದ್ದೆ. ಹಾಗಾಗಿ ನಾನು ದನಿ ಎತ್ತರಿಸಿ ಕೂಗಿ ಹೇಳಿದೆ: 'ಈ ತಲೆ ಹರಟೆಯನ್ನು ನನ್ನ ಮನೆಯಲ್ಲಿ ಸಹಿಸಲಾರೆ'.

ನನ್ನೀ ಮಾತುಗಳು ಆಕೆಯನ್ನು ಬಾಣದಂತೆ ಚುಚ್ಚಿದವು. ಅವಳು ನನ್ನತ್ತ ತಿರುಗಿ ಕಿರುಚಿ ಹೇಳಿದಳು: 'ನಿಮ್ಮ ಮನೆಯನ್ನು ನೀವೇ ಇಟ್ಟುಕೊಳ್ಳಿ. ನಾನು ಹೋಗುವೆ'. ನನ್ನ ಮೈ ಮೇಲಿನ ಪ್ರಜ್ಞೆ ಹಾರಿ ಹೋಯಿತು. ನನ್ನಲ್ಲಿ ಕರುಣೆ ಎಂಬುದು ಬತ್ತಿ ಹೋಯಿತು. ನಾನು ಅವಳ ಕೈ ಹಿಡಿದು, ಆ ಅಸಹಾಯಕ ಹೆಂಗಸನ್ನು ಹೊರ ದಬ್ಬಲು ಏಣಿಯ ಎದುರಿಗಿದ್ದ ಬಾಗಿಲ ಕಡೆ ಧಾವಿಸಿದೆ. ಅವಳ ಕೆನ್ನೆಗಳ ಮೇಲೆ ಧಾರಾಕಾರವಾಗಿ ಕಣ್ಣೀರು ಸುರಿಯುತ್ತಿತ್ತು. ಆಕೆ ನನ್ನತ್ತ ಮತ್ತೆ ಕಿರುಚಿ ಹೇಳಿದಳು: "ನಿಮಗೆ ನಾಚಿಕೆಯಾಗುವುದಿಲ್ಲವೇ? ಎಲ್ಲಿಗೆ ಹೋಗಲಿ ನಾನು? ಯಾರಿದ್ದಾರೆ ನನ್ನವರೆಂಬುವರು ಇಲ್ಲಿ? ನಿಮ್ಮ ಹೆಂಡತಿಯಾದ ಮಾತ್ರಕ್ಕೆ ನಿಮ್ಮ ಎಲ್ಲ ದುಂಡಾವರ್ತಿಗಳನ್ನು ಸಹಿಸಿಕೊಳ್ಳಬೇಕೇ? ಮೊದಲು ಬಾಗಿಲು ಹಾಕಿ. ನನ್ನೊಂದಿಗೆ ಸರಿಯಾಗಿ ನಡೆದುಕೊಳ್ಳುವುದನ್ನು ಕಲಿಯಿರಿ".



ನಾನು ಏನೂ ಆಗದವನಂತೆ ದಿಟ್ಟನಾಗಿ ನಿಂತಿದ್ದರೂ, ಒಳಗೆ ನಿಜವಾಗಿಯೂ ನಾಚಿಕೆ ಆರಂಭವಾಗಿತ್ತು. ಬಾಗಿಲು ಮುಚ್ಚಿದೆ. ನನ್ನ ಹೆಂಡತಿ ನನ್ನನ್ನು ಬಿಟ್ಟು ಇರಲಾರದವಳಾದರೆ, ನಾನೂ ಅವಳನ್ನು ಬಿಟ್ಟು ಇರಲಾರೆ.

**ಕಾಶಿ, ಫೆಬ್ರವರಿ, ೧೯೦೨**

ನಾನು ದರ್ಶನಕ್ಕಾಗಿ ಕಾಶಿ ವಿಶ್ವನಾಥ ಮಂದಿರಕ್ಕೆ ಹೋಗಿದ್ದೆ.... ದಕ್ಷಿಣೆ ಕೊಡಲು ಮನಸ್ಸಿಲ್ಲದಿದ್ದರೂ, ಮೂರು ಕಾಸು ತಟ್ಟೆಗೆ ಹಾಕಿದೆ. ಪಂಡನಿಗೆ ಸಿಟ್ಟು ಬಂದು ಅದನ್ನು ನನ್ನತ್ತ ಎಸೆದು ಬಿಟ್ಟ. ಅಲ್ಲದೆ, 'ನನಗೆ ನೀನು ಮಾಡಿದ ಅವಮಾನ ನಿನ್ನನ್ನು ನೇರವಾಗಿ ನರಕಕ್ಕೇ ಒಯ್ಯುತ್ತದೆ' ಎಂದು ಶಪಿಸಿದ. ಇದನ್ನು ಮನಸ್ಸಿಗೆ ಹಚ್ಚಿಕೊಳ್ಳದ ನಾನು, 'ನನ್ನ ವಿಧಿ ಹೇಗೇ ಇರಲಿ ಮಹಾರಾಜ್, ನೀವು ಬಳಸುತ್ತಿರುವ ಭಾಷೆ ನಿಮಗೆ ಶೋಭಿಸುವುದಿಲ್ಲ' ಎನ್ನುತ್ತಾ, 'ನಿಮಗೆ ಇಷ್ಟವಾದರೆ ಈ ಮೂರು ಕಾಸು ತೆಗೆದುಕೊಳ್ಳಿ. ಇಲ್ಲದೇ ಹೋದರೆ, ಅದನ್ನೂ ನೀವು ಕಳೆದುಕೊಳ್ಳುತ್ತೀರಿ' ಎಂದು ಎಚ್ಚರಿಸಿದೆ.

'ಇಲ್ಲಿಂದ ಮೊದಲು ತೊಲಗು. ನಿನ್ನ ಮೂರು ಕಾಸು ಯಾವನಿಗೆ ಬೇಕು!' ಎಂದು ಕೂಗಿದ ಪಂಡ ನನ್ನ ಮೇಲೆ ಕೆಟ್ಟ ಬೈಗುಳಗಳ ಸುರಿಮಳೆಯನ್ನೇ ಕರೆದ.

ನಾನು ಅವನು ಎಸೆದಿದ್ದ ಮೂರು ಕಾಸನ್ನು ಎತ್ತಿಕೊಂಡು, 'ಬ್ರಾಹ್ಮಣನಿಗೆ ಆದ ನಷ್ಟ ನನಗಾದ ಉಳಿತಾಯ...' ಎಂದು ಉಲ್ಲಾಸದಿಂದ ನನ್ನ ದಾರಿ ಹಿಡಿದೆ.

**ಜೋಹಾನ್ಸ್‌ಬರ್ಗ್, ಫೆಬ್ರುವರಿ, ೧೯೦೮**

*ಗ್ರಹಾಂ ಪೋಲಾಕ್*: ಅವನಿಗೆ ಏನು ಬೇಕಂತೆ? ಏನಾದರೂ ವಿಶೇಷ?

*ಗಾಂಧಿ*: ಹೌದು, ಅವನು ನನ್ನನ್ನು ಕೊಲ್ಲ ಬಯಸಿದ್ದ.

*ಪೊ*: ಕೊಲ್ಲುವುದು? ನಿನ್ನನ್ನು ಕೊಲ್ಲುವುದು? ಅಯ್ಯಯ್ಯೋ!! ಅವನಿಗೇನಾದರೂ ಹುಚ್ಚು ಹಿಡಿದಿದೆಯೇ?

*ಗಾಂ:* ಇಲ್ಲ, ನಾನು ನಮ್ಮ ಜನರಿಗೆ ಸಂಬಂಧಪಟ್ಟಂತೆ ದೇಶದ್ರೋಹದ ಕೆಲಸ ಮಾಡುತ್ತಿದ್ದೇನೆ ಹಾಗೂ ಸರ್ಕಾರದಲ್ಲಿ ತಲೆ ಹಾಕಿ ಅವರ ವಿರುದ್ಧವೇ ಕೆಲಸ ಮಾಡುತ್ತ ಅವರ ಸ್ನೇಹಿತನಂತೆ, ನಾಯಕನಂತೆ ನಟಿಸುತ್ತಿದ್ದೇನೆ ಎಂದು ಅವನು ಭಾವಿಸಿದ್ದಾನೆ.

*ಪೊ*: ಅದೇನೇ ಇರಲಿ, ಅದು ದುಷ್ಟತನ ಹಾಗೂ ಭಯಂಕರ! ಅಂತಹ ಮನುಷ್ಯನನ್ನು ಹಾಗೇ ಬಿಡುವುದು ಕ್ಷೇಮವಲ್ಲ. ಆತನನ್ನು ಪೋಲೀಸರಿಗೆ ಒಪ್ಪಿಸಬೇಕು. ಅವನನ್ನು ಹಾಗೇ ಹೋಗಲು ಏಕೆ ಬಿಟ್ಟೆ? ಆತ ನಿಜವಾಗಿಯೂ ಹುಚ್ಚನೇ ಇರಬೇಕು.

*ಗಾಂ:* ಇಲ್ಲ, ಆತ ಹುಚ್ಚನಲ್ಲ. ತಪ್ಪು ತಿಳುವಳಿಕೆಯವನಷ್ಟೆ. ನೀನೇ ನೋಡಿದೆಯಲ್ಲಾ, ನಾನು ಅವನೊಂದಿಗೆ ಮಾತನಾಡಿದ ಮೇಲೆ ನನ್ನ ಮೇಲೆ ಬಳಸಲು ಇಟ್ಟುಕೊಂಡಿದ್ದ ಚೂರಿಯನ್ನು ನನಗೇ ಕೊಟ್ಟುಬಿಟ್ಟ.

*ಪೊ:* ಕತ್ತಲಲ್ಲಿ ಅವನು ನಿನ್ನನ್ನು ಇರಿದೇ ಬಿಡುತ್ತಿದ್ದನೇನೋ, ನಾನು....

*ಗಾಂ:* ಈ ಬಗ್ಗೆ ಇಷ್ಟೊಂದು ತಲೆ ಕೆಡಿಸಿಕೊಳ್ಳಬೇಡ. ಅವನು ನನ್ನನ್ನು ಕೊಲ್ಲಬಹುದೆಂದುಕೊಂಡಿದ್ದ. ಆದರೆ, ಅವನಿಗೆ ಆ ಧೈರ್ಯವಿರಲಿಲ್ಲ. ನಾನು ಅವನು ತಿಳಿದಷ್ಟು ಕೆಟ್ಟವನಾಗಿದ್ದರೆ, ನಾನು ನಿಜವಾಗಿಯೂ ಸಾವಿಗೆ ಅರ್ಹನೇ. ಈಗ ಈ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲ. ಇದು ಮುಗಿದ ಅಧ್ಯಾಯ. ಆ ಮನುಷ್ಯ ನನ್ನ ಮೇಲೆ ಮತ್ತೆ ಆಕ್ರಮಣ ಮಾಡಲಾರನೆಂದೆನಿಸುತ್ತದೆ. ಅವನನ್ನು ದಸ್ತಗಿರಿ ಮಾಡಿಸಲು ನಾನೇನಾದರೂ ಯತ್ನಿಸಿದ್ದರೆ, ಅವನನ್ನು ನನ್ನ ಶತ್ರುವನ್ನಾಗಿ ಮಾಡಿಕೊಳ್ಳುತ್ತಿದ್ದೆನಷ್ಟೆ. ಆದರೆ, ಈಗವನು ನನ್ನ ಸ್ನೇಹಿತನಾಗಿದ್ದಾನೆ.

**ಜೊಹಾನ್ಸ್‌ಬರ್ಗ್, ಮೇ ೧೮, ೧೯೧೧(ಛಗನ್ ಲಾಲ್‌ಗೆ ಪತ್ರವೊಂದರಲ್ಲಿ)**

ಅವನು(ಹರಿಲಾಲ್) ಸೋಮವಾರ ಸಂಜೆ ತನ್ನ ಮನಸ್ಸಿನಲ್ಲಿ ಇಟ್ಟುಕೊಂಡಿದ್ದೆಲ್ಲವನ್ನೂ ಹೊರಹಾಕಿದ. ಆತನ ಪ್ರಕಾರ ನಾನು ಎಲ್ಲ ನಾಲ್ಕು ಮಕ್ಕಳನ್ನೂ ಲೆಕ್ಕಕ್ಕೇ ಇಟ್ಟಿಲ್ಲದ ಹಾಗೆ; ಅವರ ಯಾವುದೇ ಆಶೋತ್ತರಗಳಿಗೂ ಬೆಲೆ ಕೊಡದೆ, ನಿರ್ದಯಿಯಾಗಿ ದಮನ ಮಾಡಿಟ್ಟಿದ್ದೇನೆ. ಆತ ಈ ಆಪಾದನೆಗಳನ್ನು ಸಂಕೋಚದಿಂದಲೇ, ಆದರೆ ಅತ್ಯಂತ ವಿನೀತನಾಗಿ ಮಾಡಿದ.

ಈ ಸಂದರ್ಭದಲ್ಲಿ ಆತನ ಮನಸ್ಸಿನಲ್ಲಿ ಹಣದ ವಿಷಯ ಇರಲೇ ಇಲ್ಲ. ಆವನ ಮಾತುಗಳೆಲ್ಲವೂ ನನ್ನ ಸಾಮಾನ್ಯ ವರ್ತನೆಯ ಬಗ್ಗೆಯೇ ಇತ್ತು. ಇತರ ತಂದೆಯರಂತೆ ನಾನು ನನ್ನ ಮಕ್ಕಳ ಬಗ್ಗೆ ಒಂದು ಒಳ್ಳೆಯ ಮಾತಾಡಿರಲಿಲ್ಲ, ಅವರಿಗಾಗಿ ವಿಶೇಷವಾದುದೇನನ್ನೂ ಮಾಡಿರಲಿಲ್ಲ ಹಾಗೂ ಅವರು ಮತ್ತು ಅವರಮ್ಮ ನನ್ನ ಆದ್ಯತೆಯಲ್ಲಿ ಕೊನೆಯವರಾಗಿದ್ದರು ಎಂಬುದು ಅವನ ಆರೋಪವಾಗಿತ್ತು.

**ಫೀನಿಕ್ಸ್, ಮೇ ೧೯೧೩**

ದೇವದಾಸ್ ತಾನಿನ್ನು ಕದಿಯುವುದಿಲ್ಲ ಎಂದು ವಚನ ನೀಡಿದ್ದರೂ, ಇನಾಂಡ ಜಲಪಾತದ ಬಳಿ ಕದ್ದ ಮೂಸಂಬಿ ಹಣ್ಣುಗಳನ್ನು ತಿಂದುಬಿಟ್ಟಿದ್ದ. ಸಿಕ್ಕಿ ಬಿದ್ದಾಗ, ತುಂಬ ಜಾಣನಂತೆ, ಬುದ್ಧಿವಂತಿಕೆಯಿಂದ ಮಾತಾಡತೊಡಗಿದ. ಇದು ನನಗೆ ನೋವನ್ನುಂಟು ಮಾಡಿತು. ಆತ ನೀಡಿದ ನೆಪವಂತೂ ನನ್ನನ್ನು ಘಾಸಿಗೊಳಿಸಿತು. ನಾನು ಯಾವಾಗಲೂ ಅವನನ್ನು ಹೊಡೆಯುತ್ತೀನೇನೋ ಎಂಬಂತೆ, ಆತ ನನ್ನಿಂದ ಏಟು ಬೀಳುವುದೆಂದು ತನ್ನ ತಪ್ಪನ್ನು ಹೇಳಿಕೊಳ್ಳಲಿಲ್ಲವೆಂದು ನುಡಿದ. ಸರಿ, ನಾನು ಅವನಿಗೆ ಬುದ್ಧಿ ಕಲಿಸಲು ನನ್ನ ಕಪಾಳಕ್ಕೇ ಹೊಡೆದುಕೊಳ್ಳಲು ನಿರ್ಧರಿಸಿ ನಾಲ್ಕಾರು ಏಟು ಹಾಕಿಕೊಂಡಾಗ ನನ್ನ ಬಗ್ಗೆಯೇ ನನಗೆ ಎಷ್ಟು ದುಃಖವಾಯಿತೆಂದರೆ, ನನಗೆ ಜೋರಾಗಿ ಅಳುವೇ ಬಂದುಬಿಟ್ಟಿತು.

**ಆಗಸ್ಟ್ ೧೦, ೧೯೨೦(ಕಲ್ಲೆನ್‌ಬ್ಯಾಕ್‌ಗೆ ಪತ್ರ)**

.... ನಾನೀಗ ನನ್ನೊಡನೆ ಆಗಾಗ್ಗೆ ಪ್ರಯಾಣ ಮಾಡುವ ಮಹಿಳೆಯೊಬ್ಬಳೊಂದಿಗೆ ಆತ್ಮೀಯ ಸಂಪರ್ಕದಲ್ಲಿದ್ದೇನೆ. ನಮ್ಮ ಸಂಬಂಧ ವ್ಯಾಖ್ಯಾನವನ್ನು ಮೀರಿದ್ದು. ನಾನು ಆಕೆಯನ್ನು ನನ್ನ ಆಧ್ಯಾತ್ಮಿಕ ಪತ್ನಿ ಎಂದು ಕರೆಯುತ್ತೇನೆ. ನನ್ನ ಸ್ನೇಹಿತನೊಬ್ಬ ಇದನ್ನು ಬೌದ್ಧಿಕ ವಿವಾಹ ಎಂದು ಕರೆದಿದ್ದಾನೆ. ನೀನು ಒಮ್ಮೆ ಆಕೆಯನ್ನು ನೋಡಬೇಕೆಂಬುದು ನನ್ನ ಆಸೆ. ಅವಳ ಆಶ್ರಯದಲ್ಲೇ ನಾನು ಪಂಜಾಬ್‌ನ ಲಾಹೋರ್‌ನಲ್ಲಿ ಹಲವು ತಿಂಗಳುಗಳನ್ನು ಕಳೆದಿದ್ದೇನೆ. 'ಬಾ' ಆಶ್ರಮದಲ್ಲಿದ್ದಾಳೆ. ಆಕೆಗೆ ಸಾಕಷ್ಟು ವಯಸ್ಸಾಗಿದೆ; ಆದರೆ ಎಂದಿನಂತೆ ದಿಟ್ಟವಾಗಿಯೇ ಇದ್ದಾಳೆ. ಆಕೆ ನಿನಗೆ ತಿಳಿದಿರುವಂತೆ ತನ್ನ ದೌರ್ಬಲ್ಯ ಹಾಗೂ ಸದ್ಗುಣಗಳ, ಅದೇ ಹೆಂಗಸೇ. ಮಣಿಲಾಲ್ ಮತ್ತು ರಾಮದಾಸ್ *ಫೀನಿಕ್ಸ್*‌ನಲ್ಲಿದ್ದು *ಇಂಡಿಯನ್ ಒಪಿನಿಯನ್* ನೋಡಿಕೊಳ್ಳುತ್ತಿದ್ದಾರೆ. ಹರಿಲಾಲ್ ಕಲ್ಕತ್ತಾದಲ್ಲಿದ್ದು ತನ್ನ ವ್ಯಾಪಾರ ನೋಡಿಕೊಳ್ಳುತ್ತಿದ್ದಾನೆ. ಅವನ ಹೆಂಡತಿ ಹೋಗಿ ಬಿಟ್ಟಳು. 'ಬಾ' ಅವನ ಮಕ್ಕಳನ್ನು ನೋಡಿಕೊಳ್ಳುತ್ತಿದ್ದಾಳೆ.

**ಏಪ್ರಿಲ್ ೩೦, ೧೯೨೦(ಶ್ರೀಮತಿ ಜಿನ್ನಾಗೆ ಪತ್ರದಲ್ಲಿ)**

ಶ್ರೀಯುತ ಜಿನ್ನಾಗೆ ನನ್ನ ನೆನಪು ತಿಳಿಸಿ ಹಾಗೂ ಅವರನ್ನು ಹಿಂದೂಸ್ಥಾನಿ ಅಥವಾ ಗುಜರಾತಿ ಕಲಿಯಲು ಪುಸಲಾಯಿಸಿ. ನಾನು ನಿಮ್ಮ ಸ್ಥಾನದಲ್ಲಿದ್ದಿದ್ದರೆ, ಈ ಹೊತ್ತಿಗೆ ಅವರೊಂದಿಗೆ ಗುಜರಾತಿ ಅಥವಾ ಹಿಂದೂಸ್ಥಾನಿಯಲ್ಲಿ ಮಾತನಾಡಲಾರಂಭಿಸುತ್ತಿದ್ದೆ. ಇದರಿಂದಾಗಿ ನೀವು ನಿಮ್ಮ ಇಂಗ್ಲಿಷ್‌ನ್ನು ಮರೆಯುವ ಅಥವಾ ನಿಮ್ಮ ನಡುವೆ ತಪ್ಪು ತಿಳುವಳಿಕೆ ಮೂಡುವ ಅಪಾಯವೇನೂ ಇರಲಾರದು. ಹೌದು ತಾನೇ?

ಇದನ್ನು ನೀವು ಮಾಡುವಿರಾ? ನೀವು ನನ್ನ ಬಗ್ಗೆ ಇಟ್ಟುಕೊಂಡಿರುವ ಪ್ರೀತಿಯ ಸಲುವಾಗಿಯಾದರೂ ಮಾಡಿ ಎಂದು ಕೇಳುವೆ.

**ಪೂನಾ, ಆಗಸ್ಟ್ ೨೩, ೧೯೩೩(ಆಮರಣಾಂತ ಉಪವಾಸ ಸಂದರ್ಭದಲ್ಲಿ)**

*ಗಾಂಧಿ*: ಆನಂದ್, ಈ ಸಂದಿಗ್ಧದಲ್ಲಿ ನಾನೇನು ಮಾಡಬಹುದೆಂದು ನಿನಗನ್ನಿಸುತ್ತದೆ? ನನ್ನನ್ನು ಸಾಯಲು ಬಿಡುತ್ತಾರೆಂದು ಭಾವಿಸಿದ್ದೆ. ಹಾಗೆ ನೋಡಿದರೆ, ಅಂತಹ ಸಂದರ್ಭಕ್ಕೆ ನಾನು ಪೂರ್ಣವಾಗಿ ಸಿದ್ಧನಾಗಿದ್ದೆ ಕೂಡ. ಹಾಗಾಗಿಯೇ, ನನ್ನ ಬಿಡುಗಡೆಯ ಹಿಂದಿನ ಒಂದು ದಿನವಷ್ಟೇ ನಾನು ನನ್ನೆಲ್ಲಾ ಸಣ್ಣ ಪುಟ್ಟ ವೈಯುಕ್ತಿಕ ವಸ್ತುಗಳನ್ನು ಆಸ್ಪತ್ರೆಯ ದಾದಿಯರಿಗೆ ಹಾಗೂ ಸಹಾಯಕರಿಗೆ ಕೊಟ್ಟುಬಿಟ್ಟಿದ್ದೆ. ಉಪವಾಸ ಮಾಡಿ ತಂದುಕೊಳ್ಳುವ ನನ್ನ ಸಾವನ್ನು ಜನ ಹೇಗೆ ತೆಗೆದುಕೊಳ್ಳುತ್ತಿದ್ದರೋ ತಿಳಿಯದು.

*ಆನಂದ್ ಹಿಂಗೋರಣಿ*: ಏಕೆ, ಅದು ಧೀರೋದಾತ್ತ ಸಾವಾಗಿರುತ್ತಿತ್ತು ಬಾಪು.

*ಗಾಂ*: ಛೇ! ಅಸಹ್ಯ. ಅದನ್ನು, ಉಪವಾಸ ಮಾಡಿ ಸಾಯುವುದನ್ನು, ನೀನು ಧೀರೋದಾತ್ತ ಸಾವೆಂದು ಪರಿಗಣಿಸುವೆಯ? ಅದರಲ್ಲಿ ಧೀರತನ ಎಲ್ಲಿಂದ ಬಂತು? ಆದರೆ ನನ್ನ ಜಾತಕದಲ್ಲಿ ನಾನು ಧೀರನ ಸಾವನ್ನು ಅಪ್ಪುವೆನೆಂದು ಬರೆದಿದೆ ಎಂಬುದು ನಿನಗೆ ಗೊತ್ತಾ?

*ಆನಂದ್*: ಆದರೆ ಬಾಪು, ಈ ಉಪವಾಸದ ಸಾವೂ ಧೀರೋದಾತ್ತ ಸಾವೇ. ಉದ್ದೇಶಪೂರ್ವಕವಾಗಿ ಅಂಗುಲ ಅಂಗುಲವಾಗಿ ಸಾವನ್ನು ಎದುರುಗೊಳ್ಳುವುದೇನೂ ಸುಲಭದ ಕೆಲಸವಲ್ಲ.

*ಗಾಂ*: ಇಲ್ಲ, ನನಗೆ ಹಾಗೆನ್ನಿಸುವುದಿಲ್ಲ. ನನ್ನ ಸಾವು ನೇಣುಗಂಬದ ಮೇಲೆ ಅಥವಾ ಗುಂಡಿನೆದುರಿಗೇ ಘಟಿಸುವಂತಹುದು. ಅದು ನಿಜವಾಗಿ ಧೀರೋದಾತ್ತ ಸಾವು, ಉಪವಾಸ ಮಾಡುತ್ತಾ ಹಾಸಿಗೆಯಲ್ಲಿ ಸಾಯುವುದಲ್ಲ.

**ಜೈನ ಮಂದಿರ, ಮದ್ರಾಸ್, ಡಿಸೆಂಬರ್ ೨೨, ೧೯೩೩**

ಈಗ ನಾನು ನನ್ನ ದಂಧೆ ಆರಂಭಿಸುತ್ತಿದ್ದೇನೆ. ನೀವು ಮಾರವಾಡಿಗಳು ದೂರದೂರದ ಸ್ಥಳಗಳಿಗೆ ಹೋಗಿ ಜನರನ್ನು ಲೂಟಿ ಮಾಡಿ ಗಂಟು ಮಾಡಿಕೊಳ್ಳುತ್ತೀರಾ. ನಾನೀಗ ನಿಮ್ಮನ್ನು ಲೂಟಿ ಮಾಡಲು ಹೊರಟಿರುವೆ.

ಪ್ರೇಕ್ಷಕರು ಈ ಹೇಳಿಕೆಯನ್ನು ನಗುತ್ತಾ, ಘೋಷಣೆ ಕೂಗುತ್ತಾ ಸ್ವಾಗತಿಸಿದರು. ದಂತದ ಕರಂಡವೊಂದನ್ನು ಹರಾಜಿಗಿಡುತ್ತಾ, 'ಇದಕ್ಕೆಷ್ಟು ಕೊಡುವಿರಿ?' ಎಂದು ಗಾಂಧಿ ಕೇಳಿದರು.

ಸುಮಾರು ೧೫ ರೂಪಾಯಿ ಬೆಲೆ ಬಾಳುವ ಆ ಕರಂಡಕ್ಕೆ ಮೊದಲ ಸವಾಲಿನಲ್ಲಿ ರಾಮನಾಥ ಗೋಯಂಕಾ ೧೦೧ ರೂಪಾಯಿಗಳನ್ನು ಕೂಗಿದರು.

'ಮುಂದೆ ಬನ್ನಿ. ಇಲ್ಲಿ ಸೇರಿರುವ ಗುಜರಾತಿಗಳಿಗೆ ೧೦೧ ರೂಪಾಯಿ ಏನೂನೂ ಅಲ್ಲ!' ಮುಂದಿನ ಕೂಗು ೨೦೧ ರೂಪಾಯಿಗಳಿಗೇರಿತು.

ಹಾಗಾದರೆ ಕೊಟ್ಟುಬಿಡಲಾ... ಒಂದು ಬಾರಿ... ಎರಡು ಬಾರಿ... ಮೂರನೇ ಬಾರಿ ಎಂದು ನಾನು ಹೇಳುವುದಿಲ್ಲ... ಇನ್ನೂ ಕಾಲ ಮಿಂಚಿಲ್ಲ... ಒಂದೆರಡು ನೂರು ನಿಮಗೆ ಏನೇನೂ ಅಲ್ಲ....

*(ಹರಾಜು ಮುಗಿದು ಗಾಂಧಿ ವೇದಿಕೆಯ ಕೆಳಗೆ ಇಳಿಯುತ್ತಿದ್ದಂತೆ ಒಬ್ಬ ಹುಡುಗ ಅವರ ಬಳಿ ಓಡೋಡಿ ಬರುತ್ತಾನೆ)*

*ಹುಡುಗ*: ನಿಮ್ಮ ಸಹಿ ಬೇಕು... ದಯವಿಟ್ಟು ಹಾಕಿ ಕೊಡಿ.

*ಗಾಂ*: ನೀನೇನು ಕೊಡುವೆ? ನನಗೆ ರೂಪಾಯಿ ಬೇಕು.

*ಹು*: ಒಂದು ರೂಪಾಯಿ ಕೊಡುವೆ.

*ಗಾಂ: (ಅವನ ಕಿವಿಯ ಮುರಗಳನ್ನು ನೋಡುತ್ತಾ, ಮುಟ್ಟುತ್ತಾ)* ಏನು ಇವು?

*ಹು*: ನೀವು ಅವುಗಳನ್ನು ತೆಗೆದುಕೊಳ್ಳಬಹುದು.

*ಗಾಂ*: ನಿನ್ನ ತಂದೆಯ ಅನುಮತಿ ಇದೆಯಾ?

*ಹು*: ಅವನ್ನು ನಿಮಗೆ ಕೊಡಲು ಅವರ ಅಭ್ಯಂತರವೇನೂ ಇರಲಾರದು.

*ಗಾಂ*: ನಿನಗೆ ಇಷ್ಟೊಂದು ಸ್ವಾತಂತ್ರ್ಯ ಇದೆಯಲ್ಲ!*(ಮುರಗಳನ್ನು ಬಿಚ್ಚಿಕೊಂಡು)* ನಿನಗಿದು ಅಗತ್ಯವಿಲ್ಲ. ಇನ್ನು ಮುಂದೆಯೂ ಮುರಗಳನ್ನು ಹಾಕಿಕೊಳ್ಳಬೇಡ. ಹೊಸವಕ್ಕಾಗಿ ನಿನ್ನ ತಂದೆಯನ್ನು ಕೇಳಬೇಡ. *(ಸಹಿ ಹಾಕಿಕೊಡುತ್ತಾ)* ನಿನ್ನ ಹೆಸರೇನು ಮರಿ?



*ಹು*. ವಿ. ತಮ್ಮಪ್ಪ.

*ಗಾಂ*: ಎಷ್ಟು ವಯಸ್ಸು ನಿನಗೆ?

*ಹು*: ಹದಿಮೂರು

*ಗಾಂ*: ಓ! ಹದಿಮೂರನೇ ವಯಸ್ಸಿಗೇ ನಿನಗೆ ಸ್ವಾತಂತ್ರ್ಯ ದಕ್ಕಿದೆ. ನನಗೆ ಆ ಸೌಭಾಗ್ಯವಿರಲಿಲ್ಲ!

**ಬಾಂಬೆ, ಜನವರಿ ೧೯೩೬**

ನನ್ನ ಜೀವನದ ಅತ್ಯಂತ ಕರಾಳ ದಿನ ನಾನು ಬಾಂಬೆಯಲ್ಲಿದ್ದಾಗ ಸಂಭವಿಸಿತು... .ಅದು ನನ್ನ ಕಾಮುಕತೆ ಇದ್ದಕ್ಕಿದ್ದಂತೆ ಕೆರಳಿದ ಸಮಯ. ನಾನು ಮಲಗಿದ್ದಾಗ, ನನಗೆ ಒಬ್ಬ ಹೆಂಗಸನ್ನು ನೋಡಬೇಕೆನಿಸಿತು. ಸುಮಾರು ನಲವತ್ತು ವರ್ಷಗಳ ಕಾಲ ದೇಹದ ಬಯಕೆಯನ್ನು ಗೆಲ್ಲುವ ಪ್ರಯತ್ನದಲ್ಲಿದ್ದ ಮನುಷ್ಯನಿಗೆ ಇಂತಹ ಭಯಾನಕ ಅನುಭವವಾದಾಗ ತುಂಬಾ ಹಿಂಸೆಯಾಗಲೇ ಬೇಕು. ಅಂತಿಮವಾಗಿ ನಾನು ಈ ಭಾವನೆಯನ್ನು ಗೆದ್ದೆನಾದರೂ, ನನ್ನ ಜೀವನದ ಅತ್ಯಂತ ನಾಚಿಕೆಗೇಡಿನ ಘಳಿಗೆಯೊಂದಿಗೆ ಮುಖಾಮುಖಿಯಾಗಿದ್ದೆ ಹಾಗೂ ನಾನೇನಾದರೂ ಆಗ ಸೋತು ಹೋಗಿದ್ದರೆ, ಅದು ನನ್ನನ್ನು ನಿರ್ನಾಮ ಮಾಡುತ್ತಿತ್ತು.

**(ಕನ್ನಡಕ್ಕೆ: ಡಿಎಸ್ಸೆನ್)**

## ಸಾಹಿತ್ಯ-ಸಂಸ್ಕೃತಿ-ಸಂಶೋಧನೆ ಇತ್ಯಾದಿ

# ಕಲ್ಬುರ್ಗಿಯವರ ಹತ್ಯೆ, ಪ್ರತಿಭಟನೆ, ಹೋರಾಟದ ಸುತ್ತಮುತ್ತ



ಕನ್ನಡದ ಹಿರಿಯ ವಿದ್ವಾಂಸ, ಸಂಶೋಧಕ ಎಂ.ಎಂ. ಕಲ್ಬುರ್ಗಿಯವರ ಹತ್ಯೆಯಾಗಿ ಒಂದು ತಿಂಗಳ ಮೇಲಾಯಿತು. ಕೊಲೆಗಾರರ ಯಾವುದೇ ಖಚಿತ ಸುಳಿವಿಲ್ಲದೆ ನಮ್ಮ ಪೋಲೀಸರು ಸದ್ಯಕ್ಕಂತೂ ನಿರಾಶರಾಗಿದ್ದಾರೆ. ಕಲ್ಬುರ್ಗಿಯವರ ಹತ್ಯೆಯಿಂದ ತಲ್ಲಣಗೊಂಡಿರುವ ರಾಜ್ಯದ ಸಾಂಸ್ಕೃತಿಕ ಲೋಕ ಹತಾಶೆಯ ಹಂತ ತಲುಪಿದೆ. ಮಹಾರಾಷ್ಟ್ರದಲ್ಲಿ ಒಂದು ವರ್ಷಕ್ಕೂ ಹಿಂದೆ ಕೊಲೆಯಾದ ಮೂಢ ನಂಬಿಕೆಗಳ ವಿರೋಧಿ ಆಂದೋಲನದ ದಾಭೋಲ್ಕರ್ ಮತ್ತು ಆರೇಳು ತಿಂಗಳ ಹಿಂದೆ ಹತ್ಯೆಯಾದ ವಿಚಾರವಾದಿ ಗೋವಿಂದ ಪಾನ್ಸರೆಯವರ ಕೊಲೆಗಳಿಗೂ ಕಲ್ಬುರ್ಗಿಯವರ ಹತ್ಯೆಗೂ ಪೋಲೀಸರು ಅನೇಕ ಸಾಮ್ಯತೆಗಳನ್ನು ಗುರುತಿಸಿ ಒಂದಿಬ್ಬರ ವಿಚಾರಣೆ ನಡೆದಿದೆಯಾದರೂ, ಯಾವುದೇ ತೀರ್ಮಾನಗಳಿಗೆ ಇನ್ನೂ ಬರಲಾಗಿಲ್ಲವೆಂಬುದು ಆತಂಕ ಹುಟ್ಟಿಸುವ ಸಂಗತಿಯಾಗಿದೆ.

ಮಹಾರಾಷ್ಟ್ರ ತುಕಾರಾಂ, ಫುಲೆ, ಅಂಬೇಡ್ಕರ್‌ರ ಸುಧಾರಣಾವಾದಿ, ಪ್ರಗತಿಪರ ವಿಚಾರಧಾರೆಯ ಪರಂಪರೆಯ ಜೊತೆ ಜೊತೆಗೇ ಗಾಂಧಿ ಹತ್ಯೆಯ ಕಾಲದಿಂದಲೂ, ಧಾರ್ಮಿಕ ಬಹುತ್ವ ಹಾಗೂ ಉದಾರತೆ ಮತ್ತು ವೈಚಾರಿಕತೆಗಳ ವಿರುದ್ಧದ ತನ್ನ ಕೊಲೆಗಡುಕ ಕಾರ್ಯಕ್ರಮಗಳಿಗೂ (ಕು)ಪ್ರಸಿದ್ಧವಾಗಿದೆ. ಆದರೆ ಕರ್ನಾಟಕದಲ್ಲಿ, ದ.ಕ.ಜಿಲ್ಲೆಯಲ್ಲಿನ ಕೆಲ ಮತೀಯ ಶಕ್ತಿಗಳ ಅತಿವಾದಿ ಕಾರ್ಯಾಚರಣೆಗಳ ಹೊರತಾಗಿ ಕೊಲೆಗಡುಕ ಸಂಸ್ಕೃತಿಯ ಸುಳಿವಿರಲಿಲ್ಲ. ಈ ದೃಷ್ಟಿಯಿಂದ ಕಲ್ಬುರ್ಗಿಯವರ ಹತ್ಯೆ ಕರ್ನಾಟಕದ ಸಾಂಸ್ಕೃತಿಕ ರಾಜಕಾರಣದ ಇತಿಹಾಸದಲ್ಲಿ ಒಂದು ನಿರ್ಣಾಯಕ ಘಟ್ಟವೇ ಹೌದು. ಹಾಗಾಗಿ, ನಮ್ಮ ಸಂಸ್ಕೃತಿ ಚಿಂತಕ ಸಮುದಾಯವೂ ಸೇರಿದಂತೆ ಇಡೀ ರಾಜ್ಯದ ಪ್ರಜ್ಞಾವಂತ ಜನತೆ ಈಗ ಜಾಗೃತಗೊಳ್ಳಬೇಕಿದೆ. ಮುಂದಿನ ದಿನಗಳು ಭಯಾನಕವಾಗಿದ್ದಂತೆ ತೋರುತ್ತಿದೆ.

ಹಾಗೆ ನೋಡಿದರೆ, ಕಲ್ಬುರ್ಗಿಯವರು ಅಂತಹ ಯಾವುದೇ ಪ್ರಚೋದನಾತ್ಮಕ ಹೇಳಿಕೆ ನೀಡಿರಲಿಲ್ಲ. ಅವರು ಈ ಹಿಂದಿನ ನಮ್ಮ ಎಲ್ಲ ಸಂಸ್ಕೃತಿ ಚಿಂತಕರಂತೆಯೇ, ಧರ್ಮ ವಿಮರ್ಶೆ ಮಾಡಿದ್ದರು. ಅದೂ ಅವರು ಕರ್ನಾಟಕದ ಅನುಭಾವಿ ಪರಂಪರೆಯ ಉತ್ಕೃಷ್ಟ ಪ್ರತಿನಿಧಿಯಂತಿರುವ ಬಸವಣ್ಣನ ತತ್ವಗಳ ಹಿನ್ನೆಲೆಯಲ್ಲಿ ನಡೆಸಿದ ಸಮರ್ಥ ಅಧ್ಯಯನದ ಆಧಾರದ ಮೇಲೆ. ಆದರೆ ಅದನ್ನೂ ಸಹಿಸದಂತಹ ಬೌದ್ಧಿಕ ದಾರಿದ್ರ್ಯದ ವಾತಾವರಣ ಇಂದು ನಮ್ಮನ್ನು ಸುತ್ತುವರೆದಿದೆಯೆಂದರೆ ನಾವು ನಿಜವಾಗಿಯೂ ಆತಂಕಪಡಬೇಕಾದ ಕಾಲವಿದಾಗಿದೆ. ನಮ್ಮ ಆತಂಕ ನಿರ್ದಿಷ್ಟವಾಗಿ ಕಳವಳದ ರೂಪ ಪಡೆಯುವುದು, ಸಾಕಷ್ಟು ಸುಭದ್ರವಾಗಿಯೇ ಇದ್ದ ಕನ್ನಡ ಬೌದ್ಧಿಕ ಪರಂಪರೆಯ ಕತ್ತು ಹಿಸುಕಲು ಕನ್ನಡದ ಹೊರಗಿನ ಶಕ್ತಿಗಳಿಗೆ ಇಂದು ಸಾಧ್ಯವಾಗಿದೆ ಎಂಬ ಸಂದೇಹ ಮತ್ತು ಅಷ್ಟೇ ಕಳವಳವನ್ನುಂಟು ಮಾಡುವ ಇನ್ನೊಂದು ಸಂಗತಿ ಎಂದರೆ, ಇದಕ್ಕೆ ಕನ್ನಡದ ಒಳಗಿನ ಶಕ್ತಿಗಳೇ ಇಂಬು ಕೊಟ್ಟಿರಬಹುದೆಂಬ ಶಂಕೆ. ಕಲ್ಬುರ್ಗಿಯವರ ಹತ್ಯೆ ಕುರಿತಂತೆ ನಮ್ಮ ಬೌದ್ಧಿಕ ಲೋಕದ ಪ್ರತಿಕ್ರಿಯೆಗಳ ಆತಂಕಕಾರಿ ವೈವಿಧ್ಯತೆಯೇ ಇದಕ್ಕೆ ಸಾಕ್ಷಿ. ಓರ್ವ ಗೌರವಾನ್ವಿತ ಸಂಶೋಧಕ ಮಹಾಶಯರಂತೂ, ತಮ್ಮ ಯಾವುದೋ ವೈಯಕ್ತಿಕ ನೆಲೆಯ ಹತಾಶೆಯನ್ನು ಮುಂದೊಡ್ಡಿಕೊಂಡು ಈ ಕೊಲೆಯನ್ನು ಕೇವಲ ಕಾನೂನು ಮತ್ತು ಶಿಸ್ತಿನ ಸಮಸ್ಯೆಯೆಂದು ಬಣ್ಣಿಸುವ ಮಟ್ಟಕ್ಕೆ ಇಳಿದರು. ಈ ವಿಶ್ಲೇಷಣೆಯನ್ನು ಪ್ರಕಟಿಸಿದ ಕನ್ನಡದ ಬೌದ್ಧಿಕತೆಯ ಮಹಾಪೋಷಕನೆಂದೇ ಹೇಳಿಕೊಳ್ಳುವ ದಿನಪತ್ರಿಕೆಯು ಈ ವಾದದ ಅಪಾಯವನ್ನು ಗುರುತಿಸಿ ಬರೆದ ಪ್ರತಿಕ್ರಿಯೆಯೊಂದನ್ನು ಪ್ರಕಟಿಸಲೂ ನಿರಾಕರಿಸುತ್ತದೆ ಎಂದರೆ ಏನು ಹೇಳುವುದು?

ಕಲ್ಬುರ್ಗಿಯವರು ತಮ್ಮ ದಿಟ್ಟ ಮತ್ತು ನಿಷ್ಠುರ ಧರ್ಮ ವಿಮರ್ಶೆಯ ಹೊರತಾಗಿ ಕೂಡ ಕನ್ನಡ ಸಂಸ್ಕೃತಿ ಅಧ್ಯಯನಕ್ಕೆ-ವಿಶೇಷವಾಗಿ 'ಕವಿರಾಜ ಮಾರ್ಗ' ಕೃತಿಯನ್ನು ಕನ್ನಡದ ಜಾಗತಿಕ ಹೆಮ್ಮೆಯಾಗಿ ಪ್ರಸ್ತುತಪಡಿಸಿರುವ ಅನನ್ಯ ಸಂಶೋಧನೆಯ ಮೂಲಕ-ಕೊಟ್ಟಿರುವ ಅಪೂರ್ವ ಕೊಡುಗೆಯನ್ನೂ ಲೆಕ್ಕಿಸದೆ ಅವರನ್ನು ಕೊಲ್ಲುವ ಮಟ್ಟಕ್ಕೆ ತನ್ನ ಸಾಮಾಜಿಕ ವಾತಾವರಣವನ್ನು ಕುಲಗೆಡಿಸಿಕೊಂಡಿರುವ ಈ ಕನ್ನಡ ಸಮಾಜದ ಸದ್ಯದ ಬೌದ್ಧಿಕತೆಯ ಬಗೆಗೂ ಇಂದು ಗಂಭೀರವಾಗಿ ಪರ್ಯಾಲೋಚಿಸಬೇಕಿದೆ.

ನಿಜ, ಬೌದ್ಧಿಕತೆಯ ವಿರುದ್ಧವೇ ಕೆಲ ವರ್ಷಗಳಿಂದೀಚೆಗೆ ರಾಷ್ಟ್ರಾದ್ಯಂತ ಒಂದು ಆಂದೋಲನವನ್ನು ಪ್ರಜ್ಞಾಪೂರ್ವಕವಾಗಿಯೇ ಕಟ್ಟಲಾಗುತ್ತಿದೆ. ಕರ್ನಾಟಕವೂ ಈ ಆಂದೋಲನದ ದಟ್ಟ ಪ್ರಭಾವಕ್ಕೆ ಒಳಗಾದ ಒಂದು ರಾಜ್ಯ. ಇದಕ್ಕೆ ಮುಖ್ಯ ಕಾರಣ, ತನ್ನನ್ನು ಬುದ್ಧಿಜೀವಿ ಎಂದು ಕರೆದುಕೊಳ್ಳುವ ವರ್ಗ ಸಮಾಜಮುಖಿ ಎಂದರೆ ಎಡಪಂಥೀಯವೇ ಆಗಿರಬೇಕು ಮತ್ತು ಎಡಪಂಥೀಯವೆಂದರೆ ಭೌತವಾದಿ ಆಲೋಚನಾ ಕ್ರಮವನ್ನೇ ಅನುಸರಿಸಬೇಕೆಂಬ ಪ್ರಗತಿಪರತೆಯ ಮೂಢನಂಬಿಕೆಯಿಂದ ಹೊರಬರಲಾಗದೆ ತನ್ನದೇ ಪರಿಭಾಷೆಯಲ್ಲಿ ಮಾತಾಡಿಕೊಳ್ಳತೊಡಗಿ ಪೂರ್ಣವಾಗಿ ಜನಸಂಪರ್ಕ ಕಡಿದುಕೊಂಡಿರುವುದು. ಇದರ ಪರಿಣಾಮವೆಂದರೆ, ಬುದ್ಧಿಜೀವಿಗಳೆಂದರೆ ಜನಸಾಮಾನ್ಯರ ನಂಬಿಕೆ-ಆಚರಣೆಗಳನ್ನು ಪ್ರಶ್ನಿಸುತ್ತಾ ಅವರನ್ನು ಎರಡನೇ ದರ್ಜೆಯ ಪ್ರಜೆಗಳಂತೆ ಕಾಣುವವರು ಎಂಬ ಭಾವನೆ ಸಮಾಜದಲ್ಲಿ ಬೆಳೆದಿರುವುದು. ಇದರ ಲಾಭ ಪಡೆದವರು, ಜನಾಂತರಂಗವನ್ನು ಮುಟ್ಟಿದ್ದ ಗಾಂಧಿಯವರ ಸಾಮಾನ್ಯ ಪರಿಭಾಷೆಯ ಅಧ್ಯಾತ್ಮಿಕ ರಾಜಕಾರಣದ ಪ್ರಭಾವದಿಂದಾಗಿ ಹಿನ್ನೆಲೆಗೆ ಸರಿದಿದ್ದ ಧರ್ಮಲಂಡರು ಮತ್ತು ಅವರ ಜಾಲದ ವಿಸ್ತರಣೆಯ ಮೂಲಕ ತಮ್ಮ ರಾಜಕಾರಣವನ್ನು ಕಟ್ಟಿಕೊಳ್ಳಬಯಸುವ ಕೋಮುವಾದಿ ಶಕ್ತಿಗಳು. ಇದರ ಜೊತೆಗೇ ಸಂಭವಿಸಿದ್ದು, ಈ ಬುದ್ಧಿಜೀವಿ ವರ್ಗವನ್ನು ಈ ಕೋಮುವಾದಿ ರಾಜಕಾರಣದ ಎದುರು ತನ್ನ ರಾಜಕೀಯ ಉಳಿವಿಗಾಗಿ ಪೋಷಿಸುತ್ತಿದ್ದ ರಾಷ್ಟ್ರೀಯ ಹೋರಾಟದ ಹಿನ್ನೆಲೆಯಿದ್ದ ಎಲ್ಲ ಟಿಸಿಲುಗಳ ರಾಜಕಾರಣವೂ ಭ್ರಷ್ಟಗೊಳ್ಳುತ್ತಾ ಹೋಗಿ ಈಗ ಸಂಪೂರ್ಣವಾಗಿ ಜನರ ವಿಶ್ವಾಸ ಕಳೆದುಕೊಂಡಿರುವುದು.

ಇನ್ನು ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುವಂತೆ ಮಾಡಿರುವುದು, ಮಾರುಕಟ್ಟೆ ಆರ್ಥಿಕತೆಯ ಉತ್ಪನ್ನವಾದ ನಮ್ಮ ಇಂದಿನ ಹೊಸ ಮಾಧ್ಯಮ ಸಂದರ್ಭ. ನಾಯಿಕೊಡೆಗಳಂತೆ ಬೆಳೆದು ನಿಂತಿರುವ ಈ ಮಾಧ್ಯಮಗಳಲ್ಲಿನ ಪ್ರತಿಯೊಬ್ಬನ/ಳಲ್ಲೂ ಎಲ್ಲ ವಿಷಯಗಳ ಬಗೆಗೂ ಪರಿಣಿತರಂತೆಯೇ ಮಾತಾಡುವ ಭಂಡ ಧೈರ್ಯ ಎಗ್ಗಿಲ್ಲದೆ ಬೆಳೆದು, ಇಂದು ಯಾರೂ ಇವರ ಮುಂದೆ ಯಾವುದೇ ಸೂಕ್ಷ್ಮ ವಿಷಯಗಳನ್ನು ಮಾತಾಡದಂತೆ ಮಾಡಿಬಿಟ್ಟಿದೆ. ಉದಾಹರಣೆಗೆ ಮೊನ್ನೆ ರಾಷ್ಟ್ರಮಟ್ಟದ ಇಂಗ್ಲಿಷ್ ಟಿವಿ ವಾಹಿನಿಯೊಂದರ ಚರ್ಚೆಯಲ್ಲಿ ಓರ್ವ ಆರೆಸ್ಸೆಸ್ ನಾಯಕರು, 'ಕಲ್ಬುರ್ಗಿಯವರು ಹಿಂದೂ ದೇವತಾಮೂರ್ತಿಗಳ ಮೇಲೆ ಉಚ್ಚೆ ಹುಯ್ಯಲು ಹೇಳಿದ್ದಾರೆ' ಎಂದು ಕಲ್ಬುರ್ಗಿ ಹತ್ಯೆಗೆ ಕಾರಣ ಕೊಡುತ್ತಿದ್ದರು. ಆದರೆ ಆ ಚರ್ಚೆಯ ನಿರ್ವಾಹಕನೂ ಸೇರಿದಂತೆ ಚರ್ಚೆಯಲ್ಲಿ ಪಾಲ್ಗೊಂಡಿದ್ದ ಯಾವ ವಿದ್ವಾಂಸನೂ ಇದು ಸುಳ್ಳು ಎಂದು ಹೇಳುವ ಸ್ಥಿತಿಯಲ್ಲಿರಲಿಲ್ಲ! ಇದೇ ಸಂಬಂಧವಾಗಿ ಇಲ್ಲಿ ನಾನು ಇನ್ನೊಂದು ಮುಖ್ಯ ಸಂಗತಿಯನ್ನೂ ಹೇಳಬೇಕು. ಕಲ್ಬುರ್ಗಿಯವರ ಹತ್ಯೆಯ ಬಗ್ಗೆ ನಮ್ಮ ಜನಸಾಮಾನ್ಯರ ನಡುವೆ ಹಬ್ಬಿರುವ-ಮೊನ್ನೆ ಒಬ್ಬ ಸಾಮಾನ್ಯ ರೈತ ಆಡಿದ-ಮಾತಿನ ವೈಖರಿ ಇದು: 'ಆ ಕಲಬುರ್ಗಿ ಈ ಸಾಬರ, ಕಿರಿಸ್ತಾನರ ಧರ್ಮದ ಮುಂದೆ ನಮ್ಮ ಹಿಂದೂ ಧರ್ಮ ಒಂದು ಕೀಳು ಧರ್ಮ. ಅದನ್ನು ಬಿಟ್ಟುಬಿಡಿ ಅಂತ ಹೇಳವನಂತೆ. ಅವನಿಗೆ ತಕ್ಕ ಶಾಸ್ತಿಯೇ ಆಗಿದೆ...' ಹೀಗೆ ಸೃಷ್ಟಿಸಲಾಗಿರುವ ಭಯಾನಕ ವಾತಾವರಣದ ಬಲಿಪಶು ಕಲ್ಬುರ್ಗಿಯವರು.

ಪರಿಸ್ಥಿತಿ ಹೀಗೆ, ಇಷ್ಟು ಕೈಮೀರಿ ಹೋಗಿರುವಾಗ ನಮ್ಮ ಬುದ್ಧಿಜೀವಿ ವರ್ಗ ಮೊದಲು ತನ್ನ ವೈಚಾರಿಕತೆಯ ಗುತ್ತೇದಾರಿಕೆಯ ಒಣ ಹಮ್ಮಿನಿಂದ ಹೊರಬಂದು ಒಂದು ನಿಷ್ಠುರ ಆತ್ಮಾವಲೋಕನಕ್ಕೆ ಸಜ್ಜಾಗಬೇಕಿದೆ. ಎಲ್ಲ ರಾಜಕೀಯ ಪೋಷಣೆಯ ದಾಕ್ಷಿಣ್ಯಗಳಿಂದ ಬಿಡುಗಡೆಗೊಂಡು ತನ್ನದೇ ಸ್ವತಂತ್ರ ಸಾಂಸ್ಕೃತಿಕ ಗುರುತನ್ನು ಸಾಧಿಸಿಕೊಳ್ಳಬೇಕಿದೆ. ಕೋಮುವಾದಿ ರಾಜಕಾರಣದ ವಿರುದ್ಧ ಟೊಳ್ಳು, ಹುಂಬ ಗುಟುರುಗಳನ್ನು ಹಾಕುವ, ನಮ್ಮ ಸಾಂಸ್ಕೃತಿಕ ಪರಂಪರೆಯ ಸಂಕೀರ್ಣತೆಗಳನ್ನು ಮರೆಮಾಚಿ ಅಗ್ಗದ ಜನಪ್ರಿಯತೆಯ ' ಮಾತುಗಳನ್ನಾಡುವುದನ್ನು ನಿಲ್ಲಿಸಿ, ಒಂದು ಬೌದ್ಧಿಕ ಘನತೆಯ ತನ್ನದೇ ಸ್ವಾಯತ್ತ ರಾಜಕಾರಣವನ್ನು ಆರಂಭಿಸಬೇಕಿದೆ. ಆಗ ಮಾತ್ರ ಕಲ್ಬುರ್ಗಿಯವರ ಹತ್ಯೆಯ ವಿರುದ್ಧದ ಪ್ರತಿಭಟನೆ-ಹೋರಾಟಗಳಿಗೆ ಜನರ ಸಹಾನುಭೂತಿ ದೊರಕುತ್ತದೆ. ಇಲ್ಲದೇ ಹೋದರೆ, ದೇಶದ ಜೊತೆ ಇವರೂ-ಅಂದರೆ ನಾವೆಲ್ಲರೂ-ಮುಳುಗುವುದು ಖಂಡಿತ.

ಈ ಮಧ್ಯೆ, ರಾಜ್ಯ ಸರ್ಕಾರ ಕೂಡ ಕಲ್ಬುರ್ಗಿಯವರ ಹತ್ಯೆಯನ್ನು ಕರ್ನಾಟಕದ ಸಾಂಸ್ಕೃತಿಕ ಘನತೆಯ ಹತ್ಯೆ ಎಂದೇ ತಿಳಿದು ತನಿಖೆಗೆ ಇನ್ನಷ್ಟು ಚುರುಕು ತರಬೇಕಿದೆ.

**-ಡಿ.ಎಸ್.ನಾಗಭೂಷಣ**

## ಪುಸ್ತಕಾವಲೋಕನ

ಪು: **ಅವಿಶ್ರಾಂತ**(ಚಾರಿತ್ರಿಕ ಕಾದಂಬರಿ) ಲೇ: **ಡಾ. ಲಕ್ಷ್ಮಣ ಕೌಂಟೆ** ಪ್ರ: **ಲೋಹಿಯಾ ಪ್ರಕಾಶನ**, ಬಳ್ಳಾರಿ ಪು: **೩೮೬** ಬೆಲೆ: **ರೂ. ೨೦೦/-**

### ಅವಿಶ್ರಾಂತ ಬದುಕೊಂದರ ವಿಶ್ರಾಂತ ನಿರೂಪಣೆ




**ಬ**ಡತನದಲ್ಲಿ ಬದುಕಿ ಕಠಿಣ ಶ್ರಮವಂದಿಗರಾಗಿ, ಶರಣರ ಅಧ್ಯಾತ್ಮದಲ್ಲಿ ತೀವ್ರವಾದ ಆಸ್ಥೆ ಇರುವ ವ್ಯಕ್ತಿಯೊಬ್ಬರು ಬೀದರ ಜಿಲ್ಲೆಯ ಭಾಲ್ಕಿ ಮಠಾಧೀಶರಾಗಿ ಕೈಗೊಂಡ ಅನೇಕ ಜೀವಪರ ಕಾಯಕ ವಿವರಗಳನ್ನು ಕಟ್ಟಿಕೊಡುವ ಪುಸ್ತಕವೇ ಲಕ್ಮಣ ಕೌಂಟೆಯವರ 'ಅವಿಶ್ರಾಂತ'. ಭಾಲ್ಕಿ, ಕಮಲಾಪುರ ಮೊದಲಾದ ಪ್ರಾಂತ್ಯಗಳು ದೇಶ ಸ್ವಾತಂತ್ರ್ಯ ಗಳಿಸುವವರೆಗೂ ಹೈದರಾಬಾದಿನ ನಿಜಾಮ ಆಡಳಿತದ ಭಾಗವಾಗಿದ್ದವು. ಹಾಗಾಗಿ ಅದು ಮರಾಠಿ-ಉರ್ದು ಪ್ರಭಾವ ಹೆಚ್ಚು ಇರುವ ವಲಯವಾಗಿತ್ತು. ಅಂತಹ ಜಾಗದಲ್ಲಿ ಜೋಳಿಗೆ ಹಿಡಿದು ಹಣ ಸಂಗ್ರಹಿಸಿ, ಪ್ರಸಾದ ಹಂಚಿ ಕನ್ನಡ ಶಾಲೆಯನ್ನು ಕಟ್ಟುವ, ತನ್ಮೂಲಕ ಸ್ವಾತಂತ್ರ್ಯದ ಕೆಚ್ಚು ಹಚ್ಚುವ, ಪ್ರಗತಿಪರ ವಿಚಾರ ಹರಿಸಿ ಸೌಹಾರ್ದ ಬದುಕನ್ನು ಕಟ್ಟುವ ಕೆಲಸ ಮಾಡಿದವರು ಭಾಲ್ಕಿ ಮಠಾಧೀಶರಾದ ಚೆನ್ನಬಸವ ಪಟ್ಟದೇವರು. ಇವರು ೧೦೮ ವರ್ಷಗಳ ಕಾಲ ಬದುಕಿದವರು. ಭಾಲ್ಕಿ ಮಠದ ಧರ್ಮಗುರುಗಳಾಗಿ ಹಮ್ಮಿಕೊಂಡ ಅನೇಕ ಕಾರ್ಯ ಚಟುವಟಿಕೆಗಳನ್ನು 'ಅವಿಶ್ರಾಂತ' ಒಂದು ಕಥನ ರೂಪದಲ್ಲಿ ಮಂಡಿಸುತ್ತದೆ.

ಹಾಗೆ ನೋಡಿದರೆ ಇದೊಂದು ಚಾರಿತ್ರಿಕ ಕಾದಂಬರಿ ಎಂದೂ ಲೇಖಕರು ಹೇಳಿಕೊಂಡಿದ್ದಾರೆ. ಅಂತೆಯೇ ಆ ಪ್ರಾಂತದ ಮತ್ತು ಇತರೆ ಅನೇಕ ಚಾರಿತ್ರಿಕ ವ್ಯಕ್ತಿಗಳು ಪಾತ್ರಗಳಾಗಿ ಮೂಡಿಬಂದಿವೆ. ಪಟ್ಟದೇವರ ಜೀವೋಪಯೋಗಿ ಕಾರ್ಯಕ್ರಮದಲ್ಲಿ ಮಾತನಾಡುತ್ತ, ಎಸ್ ನಿಜಲಿಂಗಪ್ಪನವರು 'ನಾವು ನೋಡಿದ ಹಾಗೆ ನಮ್ಮ ರಾಜ್ಯದ ಪ್ರತಿಯೊಂದು ಹಳ್ಳಿಗಳಲ್ಲಿ ಮಠಗಳಿವೆ. ಗುರುಗಳು ಇದ್ದಾರೆ. ಆದರೆ ನಾಡಿನ ಹಿತಕ್ಕಾಗಿ ಮಕ್ಕಳ ಭವಿಷ್ಯಕ್ಕಾಗಿ ದುಡಿಯುವ ಮಠಾಧೀಶರು ಎಷ್ಟು ಜನರಿದ್ದಾರೆ?' ಎಂದೆನ್ನುವ ಮಾತು ಈ ಪುಸ್ತಕದ ಮುಖ್ಯ ಆಶಯವಾಗಿದೆ. ಪಟ್ಟದೇವರು 'ಮಕ್ಕಳೆ ಗುರುಲಿಂಗ ಜಂಗಮರು, ಕನ್ನಡ ಸೇವೆಯೆ ಗುರುಬಸವ ಸೇವೆ, ಸಮಾಜ ಸೇವೆ. ಭಕ್ತರೆ ಬಂಧು ಬಳಗ' ಎಂದು ನಂಬಿ ಬದುಕಿದ ಸ್ವಾಮಿಗಳು. ಇವರು ಇದ್ದ ಜಾಗವು - ಕಾಲವು ಅನೇಕ ಸಮಸ್ಯೆಗಳಿಂದ ಕೂಡಿದ್ದು ಸಾಂಸ್ಕೃತಿಕ-ರಾಜಕೀಯ-ಶೈಕ್ಷಣಿಕ ಸಂಕಟಗಳ ಸಂದಿಗ್ಧತೆಯ ಕಾಲವಾಗಿತ್ತು. ಅಂತಹ ಸಂದರ್ಭದಲ್ಲಿ ಪಟ್ಟದೇವರು ಶಿವಶರಣರ ಚಳವಳಿಯಿಂದ ಪ್ರೇರಿತರಾಗಿ ಶ್ರಮಿಕರಾಗಿ, ಸಾಮಾಜಿಕ ಸುಧಾರಣೆ, ಶರಣವಿಚಾರ-ಪ್ರಚಾರ, ಅರಿವಿನ ಅಗತ್ಯತೆ ಮುಂತಾದ ಬಗೆಯಲ್ಲಿ ತನ್ನದೆ ಕಲ್ಯಾಣ ರಾಜ್ಯದ ಕನಸನ್ನು ಕಟ್ಟಿಕೊಂಡು ಬದುಕಿದ ಬಗೆಯನ್ನು ಲೇಖಕರು ಸಕಲ ವಿವರಗಳೊಂದಿಗೆ ನಿರೂಪಿಸುತ್ತಾ ಹೋಗಿದ್ದಾರೆ. ಪಟ್ಟದೇವರೊಂದಿಗೆ ಕೈಜೋಡಿಸಿದ ಅನೇಕ ಮಹನೀಯರುಗಳ ಬದುಕಿನ ಚಿತ್ರಗಳು, ಹೈದರಾಬಾದ್ ಪ್ರದೇಶದ ಜನರ ಬದುಕು ಬವಣೆ, ಹೋರಾಟ ಮೊದಲಾದ ಕಿರುನಿರೂಪಣೆಗಳು 'ಅವಿಶ್ರಾಂತ' ಪುಸ್ತಕದಲ್ಲಿ ವಿಶ್ರಾಂತವಾಗಿ ಮೂಡಿಬಂದಿದೆ.

'ಅವಿಶ್ರಾಂತ' ಪುಸ್ತಕವು ಚೆನ್ನಬಸವರ ಜೀವನ ದಾರಿಯ ಚಿತ್ರಣವಾಗಿರುವಂತೆ ಹೈದರಾಬಾದ್ ಕರ್ನಾಟಕದ ವಸಾಹತುಕಾಲದ ಮತ್ತು ನಂತರದ ಚರಿತ್ರೆಯ ಭಾಗವಾಗಿಯೂ ಓದಬಹುದು. ಎಂದರೆ ಇದನ್ನು ಗಡಿನಾಡ ಕಥನ, ಹೈದರಾಬಾದ್ ಕರ್ನಾಟಕದ ಕನ್ನಡ ಶಾಲೆಗಳ ಕಥನ ಅಂತೆಯೆ ಏಕೀಕರಣ, ಸ್ವಾತಂತ್ರ್ಯ ಚಳವಳಿಯ ಕಥನವಾಗಿಯೂ ಓದಬಹುದು. ಕೃತಿ, ಪಟ್ಟದೇವರ ಕೆಲಸಗಳಿಗಿಂತ ಅವರ ವ್ಯಕ್ತಿ ವೈಭವೀಕರಣಕ್ಕೇ ಸ್ವಲ್ಪ ಹೆಚ್ಚು ಒತ್ತು ನೀಡಿದಂತಿದ್ದು, ಇಲ್ಲಿ ಅವರು 'ನಡೆದಾಡುವ ದೇವರು' ಎಂಬ ಭಾವನೆಯಿಂದ ವರ್ಣನೆ ಸಾಗಿದೆ. ಇವರು ಎಲ್ಲಾ ಮಠಾಧೀಶರಂತಲ್ಲ ಎಂಬುದಕ್ಕೆ ಒತ್ತು ನೀಡಿದ್ದು, ದಲಿತರಿಗೆ ಲಿಂಗಧಾರಣೆ, ಶರಣ ಸಮುದಾಯಕ್ಕೆ, ಯುವ ಸಮುದಾಯಕ್ಕೆ ಪ್ರಗತಿ ಪರರಾಗಿ ಪ್ರೇರಕರಾದವರು; ಮೌಢ್ಯ, ಜಾತೀಯತೆಯನ್ನು ವಿರೋಧಿಸುತ್ತಿದ್ದ ಕಾರಣವಾಗಿ ಬಹಿಷ್ಕಾರದ ಶಿಕ್ಷೆಯೂ, ಕುಲಗೇಡಿ ಸ್ವಾಮಿ ಎಂಬ ವ್ಯಂಗ್ಯ ಮಾತುಗಳು ಎದುರಾದರೂ, ಹಿಡಿದ ದಾರಿ ಬಿಡದೆ ಸಾಗಿದ ವಿವರಗಳೂ ಕೃತಿಯಲ್ಲಿ ಅವ್ಯಾಹತವಾಗಿ ವರ್ಣನೆಗೊಂಡಿದೆ. ಸಂಸತ್ತು, ಅನುಭವ ಮಂಟಪ, ಅರಿವಿನ ಮನೆಯ ರೂವಾರಿಗಳೆಂದು ಸ್ವಾಮಿಗಳನ್ನು ಕೊಂಡಾಟ ಮಾಡಲಾಗಿದೆ.

ಜೀವಂತ ದೇವಾಲಯವಾದ ಶಾಲೆಯೊಂದನ್ನು ತೆರೆದರೆ, ದೇವರುಗಳು ತೃಪ್ತರಾಗುತ್ತಾರೆ. ನಿಸ್ವಾರ್ಥಸೇವೆಯೇ ಈಶಸೇವೆ, ಅಕ್ಷರಪೂಜೆ ಎಂದವರು ಪಟ್ಟದೇವರು. ವಚನ ಪೂಜೆಯನ್ನು ಪುರೋಹಿತ ಪೂಜೆಗೆ ಎದುರಾಗಿ ರೂಪಿಸಿ ವೈಚಾರಿಕವಾಗಿ ಮುಖ್ಯರಾದವರು. ಜನ ದೇವಾಲಯಗಳನ್ನು ಕಟ್ಟುವ ಹವಣಿಕೆಯಲ್ಲಿದ್ದಾಗ ಪಟ್ಟದೇವರು 'ಈ ದೇಶದಲ್ಲಿ ದೇವಸ್ಥಾನಗಳಿಗೆ ಬರವಿಲ್ಲ. ಪ್ರತಿಯೊಂದು ಊರಲ್ಲಿಯೂ ಮೂರು, ನಾಲ್ಕು, ಅವಕ್ಕಿಂತ ಹೆಚ್ಚು ದೇವಸ್ಥಾನಗಳಿವೆ. ಈಗ ಹೊಸ ದೇವಸ್ಥಾನಗಳನ್ನು ಕಟ್ಟುವ ಅವಶ್ಯಕತೆ ಇಲ್ಲ. ಈಗ ಪ್ರತಿಯೊಂದು ಗ್ರಾಮಕ್ಕೂ ಅವಶ್ಯಕ ಬೇಕಿರುವುದು ಜೀವಹಿತವಾದ ಶಾಲೆಯೇ' ಎಂದು ಅವರಿಗೆ ಮನದಟ್ಟು ಮಾಡಿ ಶಾಲೆಯನ್ನು ತೆರೆಯಲು ಕಾರಣರಾದವರು. ಹೀಗೆ ಅಕ್ಷರದಾಸೋಹಕ್ಕೆ ಶಾಂತಿ ಪುರುವೆಟ್ಟುವನ್ನು ಪ್ರಾರಂಭಿಸಿ ಮಠಾಧೀಶರಿಗೆ ಆದರ್ಶವಾದರು.

ಹೈದರಾಬಾದ್ ನಿಜಾಮನ ಆಳ್ವಿಕೆಯಲ್ಲಿ ನಡೆದ ಮುಸ್ಲಿಂ-ಹಿಂದೂ, ಹಿಂದೂ ಮುಸ್ಲಿಂ ಗಲಭೆಗಳ ವಿವರಗಳು ಇದರೊಂದಿಗೆ ನಿರೂಪಣೆಗೊಂಡಿವೆ. ಇದನ್ನು ಇನ್ನಷ್ಟು ಸೂಕ್ಷ್ಮವಾಗಿ ನಿರೂಪಿಸುವ ಅವಕಾಶ ಇತ್ತು ಎನಿಸುತ್ತದೆ. ಹೈದರಾಬಾದಿನ ರಜಾಕಾರರ ಉಪಟಳದ ಕುರಿತಾದ ವಿವರ ಕೃತಿಯ ಒಂದು ಭಾಗವಾಗಿ ಬಂದಿದೆ. ಅದರ ಸತ್ಯಾಸತ್ಯತೆಗಳನ್ನು ಚಾರಿತ್ರಿಕವಾಗಿ ತಿಳಿಯದೆ ಅವನ್ನು ಅರಿವಿನ ನೆಲೆಗೆ ತೆಗೆದುಕೊಳ್ಳುವಂತಿಲ್ಲ. ಮತೀಯ ಕ್ರೌರ್ಯದ ವಿವರಗಳು ಇಲ್ಲಿ ಕಾಣದೆ ಜಾಳಾದ ರೂಪ ತಳೆದಿವೆ. ಸಾಮಾನ್ಯ ವರದಿ ಮಾದರಿಯಲ್ಲಿ ಕೆರಳುವಂತೆ ನಿರೂಪಿಸಲಾಗಿದೆ. ಇಂತಹ ಕ್ರೌರ್ಯದ ನಡುವೆಯೂ ಚೆನ್ನಬಸವರು ತಮ್ಮ ಶಾಲೆಯನ್ನು ಭಾಲ್ಕಿಯಿಂದ ಜಾಗ ಬದಲಿಸಿ ಕಮಲಾಪುರದಲ್ಲಿ ಆರಂಭಿಸಿ ಮಕ್ಕಳಿಗೆ ಕಲಿಕೆಯನ್ನು ನಿಲ್ಲಿಸದೇ ಮುಂದುವರೆಸಿದರು ಎಂಬುದು ಇಲ್ಲಿನ ಮುಖ್ಯ ಸಂಗತಿ. ಅಂದಿನ ರಜಾಕಾರರ ಹಿಂಸೆಯ ಇಲ್ಲಿನ ವಿವರಗಳು ಗುಜರಾತಿನ ೨೦೦೨ರ ನರಮೇಧವನ್ನು ಹೋಲುತ್ತದೆ. ರಾಜಪ್ರಭುತ್ವ - ಪ್ರಜಾಪ್ರಭುತ್ವಗಳ ವ್ಯತ್ಯಾಸವಿಲ್ಲದೆ ಇಂತಹ ಹಿಂಸೆ ಅವ್ಯಾಹತವಾಗಿ ಜರುಗುತ್ತಲೇ ಇರುತ್ತದೆಯೇ?

ಹೀಗೆ ಇದು ಮಠಾಧೀಶರ ಸಾಮಾಜಿಕ ಕಾರ್ಯಚಟುವಟಿಕೆಗಳೊಂದಿಗೆ ಇತರ ಅನೇಕ ಪ್ರಾದೇಶಿಕ ವಿವರಗಳಿಂದ ಕೂಡಿದ ಕೃತಿಯಾಗಿದ್ದರೂ, ಬಹಳೆಡೆ ಈ ಕಾರ್ಯಚಟುವಟಿಕೆಗಳ ವಿವರಗಳಿಗಿಂತ ಹೇಳಿಕೆಗಳು, ಒಂದಕ್ಕೊಂದು ಸಂಬಂಧವಿಲ್ಲದ ವಿವರಗಳು ಅದೇ ಅದೇ ಚರ್ವಿತ ಚರ್ವಣ ವಿಚಾರಗಳ ನಿರೂಪಣೆಗಳು ಓದಿಗೆ ಕಿರಿಕಿರಿ ಉಂಟು ಮಾಡುತ್ತವೆ. ಕೆಲವೆಡೆಯಂತೂ ಕಾಲೇಜಿನ ಪ್ರವೇಶ ಮಾಹಿತಿ ಪುಸ್ತಕದಂತೆ ವಿವರಗಳು ತುಂಬಿವೆ.

ಇಂದಿನ ಭೋಗಜೀವನವನ್ನು ಪ್ರಧಾನವಾಗಿರಿಸಿಕೊಳ್ಳುತ್ತಿರುವ ಜನರ ನಡುವೆ ಸರಳ ಜೀವನದ ಕಾಯಕ ನಿಷ್ಠೆಯ ಪ್ರಾಮಾಣಿಕತೆಯಿಂದ ಬದುಕಿದ ವ್ಯಕ್ತಿಯೊಬ್ಬರ ವಿಚಾರ ನಿರೂಪಣೆ ಮುಖ್ಯ ಎನಿಸುತ್ತದೆ. ಪಟ್ಟದೇವರು ತಮ್ಮ ಬದುಕನ್ನು ಇನ್ನೊಂದು ಶರಣ ಚಳವಳಿಯಂತೆ ರೂಪುಗೊಳಿಸಿಕೊಂಡವರು ಮತ್ತು ಬಸವಣ್ಣನ ಮುಂದಾಳತ್ವದಲ್ಲಿ ಶರಣ ಚಳವಳಿ ನಡೆದಂತೆಯೇ ಕಳೆದ ಶತಮಾನದಲ್ಲಿ ಬೀದರ್‌ನ ಭಾಲ್ಕಿ, ಮಾಲ್ಗಿ, ಕಮಲಾಪುರ ಪ್ರದೇಶದಲ್ಲಿ ಪಟ್ಟದೇವರ ಮುಂದಾಳತ್ವದಲ್ಲಿ ಈ ಚಳುವಳಿಯನ್ನು ನಡೆಯಿತು ಎಂಬ ತುಂಬು ನಂಬಿಕೆಯಿಂದ ಬಿಡಿ ಬಿಡಿ ವಿವರಗಳೊಂದಿಗೆ ಸಾಗುವ ಈ ಪುಸ್ತಕದ ಹಿಂದಿರುವ ಶ್ರದ್ಧೆ ಮತ್ತು ಪರಿಶ್ರಮಕ್ಕಾದರೂ ಲೇಖಕರಾದ ಲಕ್ಷ್ಮಣ ಕೌಂಟೆಯವರಿಗೆ ಅಭಿನಂದನೆ ಸಲ್ಲಬೇಕು,

**-ಡಾ. ಎಚ್.ಟಿ. ಕೃಷ್ಣಮೂರ್ತಿ**

**ಒಂದು ತಿದ್ದುಪಡಿ: ಕಳೆದ (ಸೆಪ್ಟಂಬರ್) ಸಂಚಿಕೆಯ ೨೦ನೇ ಪುಟದಲ್ಲಿನ ಶುಭಾಶಯ ಜಾಹೀರಾತು ನೀಡಿದವರು ದಾವಣಗೆರೆಯ ಪ್ರೊ. ಎಸ್.ಎಚ್. ಪಟೇಲ್ ಅವರು. ಅದು ಕಣ್ತಪ್ಪಿನಿಂದಾಗಿ ಪ್ರೊ. ಎಸ್. ಪಟೇಲ್ ಎಂದು ತಪ್ಪಾಗಿ ಅಚ್ಚಾಗಿದೆ. ಇದಕ್ಕಾಗಿ ವಿಷಾದಿಸುತ್ತೇವೆ-ಸಂ.**

'ಹೊಸ ಮನುಷ್ಯ' ಓದುಗರೆಲ್ಲರಿಗೆ
ಗಾಂಧಿ ಜಯಂತಿಯ ಹಾರ್ದಿಕ ಶುಭಾಶಯಗಳು



–ಎಂ.ಎಸ್. ರುದ್ರೇಶ್ವರಸ್ವಾಮಿ
ಮತ್ತು ಶ್ರೀಮತಿ ವನಜಾಕ್ಷಿ
ಬೆಂಗಳೂರು

'ಹೊಸ ಮನುಷ್ಯ' ಓದುಗರೆಲ್ಲರಿಗೆ
ಗಾಂಧಿ ಜಯಂತಿಯ ಹಾರ್ದಿಕ ಶುಭಾಶಯಗಳು



–ಡಾ. ಎಂ. ಜಿ. ಈಶ್ವರಪ್ಪ
ಮತ್ತು ಕುಟುಂಬ
ದಾವಣಗೆರೆ

**'ಹೊಸ ಮನುಷ್ಯ' ಓದುಗರೆಲ್ಲರಿಗೆ**

**ದಸರಾ ಹಬ್ಬದ ಹಾರ್ದಿಕ ಶುಭಾಶಯಗಳು**




## ಹೋಟೆಲ್ ವಿಶ್ವ ರೆಸಾರ್ಟ್

ಮಾಲೀಕರು: **ನಾರಾಯಣ ಶೆಟ್ಟಿ**

**ಮತ್ತು ಕುಟುಂಬ**

**ಮಮ್ಮಿಗಟ್ಟಿ ಗ್ರಾಮ**

**ಪವರ್ ಗ್ರಿಡ್ ಎದುರು**

**ಧಾರವಾಡ ತಾಲ್ಲೂಕು**


## ತಿಂಗಳ ಸಾಲುಗಳು...



ಭೌತವಾದಿ ನಾಗರೀಕತೆಯಲ್ಲಿ ಮನುಷ್ಯ ಒಳ್ಳೆಯವನಾಗಿರಲು ಯಾವುದೇ ಕಾರಣ ಅಥವಾ ಪ್ರೇರಣೆ ಇಲ್ಲವಾಗಿದೆ... ಆದುದರಿಂದ ಒಳ್ಳೆಯತನದ ಪ್ರೇರಣೆಗಳಿಗಾಗಿ ಮನುಷ್ಯ ಭೌತವಾದವನ್ನು ಮೀರಿಹೋಗಬೇಕಿದೆ. ಆಗ ಮಾತ್ರ ವ್ಯಕ್ತಿಗೆ ತಾನು ಮಾರ್ಗವು ಹೇಗೋ ಗುರಿಯೂ ಆಗಿದ್ದೇನೆ ಎಂಬ ಅರಿವು ಉಂಟಾಗುತ್ತದೆ.

**-ಜಯಪ್ರಕಾಶ್ ನಾರಾಯಣ್**

(ಅಕ್ಟೋಬರ್ ೧೧, ಜಯಪ್ರಕಾಶ್ ನಾರಾಯಣರ ಜನ್ಮದಿನ)


**ಪತ್ರಿಕೆಗೆ ಶುಭ ಕೋರುತ್ತಾ...**

**–ಬಿ.ಸುರೇಶ**

**ಡಾ. ವಿಜಯಾ**



HOSA MANUSHYA, a kannada monthly solely owned, edited, published and printed by D. S. Nagabhushana, at HIG-5, Kallahally Extn.,Vinoba Nagara, SHIVAMOGGA-577204. Printed at Ila Mudrana, Bengaluru-560 026 Ph.: 080-26757159

**Regd. News Paper** RNI No. KARKAN/2012/47568

Rgd No. KA/SK/SMG-1209/2013-15

ಇವರಿಗೆ \ To

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204( Karnataka)